ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 4 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 110 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ


ಮತ್ತೆ ಮುನ್ನೆಲೆಗೆ ಬಂದ
ತರಕಾರಿ ರಾಜಕೀಯ
ಪುಟ–4

ತಮ್ಮ ಗ್ಯಾರಂಟಿಗಳ ಬಗ್ಗೆ ಟೀಕೆ ಮಾಡಿದ ಪ್ರಧಾನಿ ಮೋದಿ ವಿರುದ್ಧ ಟ್ವೀಟಾಸ್ತ್ರದ ಮೂಲಕ ಎದಿರೇಟು ನೀಡಿದ ಕೆಲವೇ ಗಂಟೆಯ ನಂತರ

ಪ್ರಧಾನಿ ಮೋದಿ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ



ಅನ್ನಭಾಗ್ಯಕ್ಕೆ ಅಕ್ಕಿ, ಮೇಕೆದಾಟು ಅಣೆಕಟ್ಟೆಗೆ ಅನುವು ಜೊತೆಗೆ ರಾಜ್ಯದ ಅಭಿವೃದ್ಧಿಗೆ ಸಹಕರಿಸಲು ಮನವಿ



ಬೆಂಗಳೂರು, ಆ.3(ಕೆಎಂಶಿ)– ಅನ್ನಭಾಗ್ಯ ಯೋಜನೆಗೆ ಹೆಚ್ಚುವರಿ ಅಕ್ಕಿ, ಕುಡಿಯುವ ನೀರಿಗಾಗಿ ಕೆಆರ್‌ಎಸ್ ಅಣೆಕಟ್ಟೆಗೆ ಪರ್ಯಾಯವಾಗಿ ಮೇಕೆದಾಟು ಬಳಿ ಸಮನಾಂತರ ಅಣೆಕಟ್ಟು ನಿರ್ಮಾಣಕ್ಕೆ ಇರುವ ಅಡ್ಡಿ–ಆತಂಕಗಳನ್ನು ನಿವಾರಿಸುವುದು ಸೇರಿದಂತೆ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸಹಕರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಎರಡೂವರೆ ತಿಂಗಳ ನಂತರ ಮೊದಲ ಬಾರಿಗೆ ಪ್ರಧಾನಿಯವರನ್ನು ಸಂಸತ್‌ಭವನದಲ್ಲಿ ಸೌಹಾರ್ದಯುತ ಭೇಟಿಯಾದ ಸಂದರ್ಭದಲ್ಲಿ ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ಗಂಧದ ಹಾರ ಹಾಕಿ, ಅಂಬಾರಿ ಮಾದರಿಯ ಸ್ಮರಣಿಕೆ ನೀಡಿ, ಅಭಿನಂದಿಸಿದರು. ಬಳಿಕ ರಾಜ್ಯಕ್ಕೆ ಜರೂರಾಗಿ ಆಗಬೇಕಾಗಿರುವ ಯೋಜನೆ, ಕಾರ್ಯಕ್ರಮಗಳಿಗೆ ●9ನೇ ಪುಟಕ್ಕೆ



ಸಿವೇಜ್ ಫಾರಂ ತ್ಯಾಜ್ಯಕ್ಕೆ ಮುಕ್ತಿ: ಟೆಂಡರ್ ಪ್ರಕ್ರಿಯೆ ಆರಂಭ

ಸ್ವಚ್ಛ ಭಾರತ್ ಯೋಜನೆಯಡಿ 60 ಕೋಟಿ ರೂ. ಮೊತ್ತದ ಟೆಂಡರ್



ಮೈಸೂರು: ಮೈಸೂರಿನ ವಿದ್ಯಾರಣ್ಯಪುರದಲ್ಲಿನ ಸಿವೇಜ್ ಫಾರಂನಲ್ಲಿರುವ ತ್ಯಾಜ್ಯ ವಿಲೇವಾರಿಗೆ ಕೊನೆಗೂ ಮುಕ್ತಿ ಸಿಗುವ ಕಾಲ ಸನ್ನಿಹಿತವಾಗಿದೆ.

ಸುಮಾರು 7 ಲಕ್ಷ ಟನ್ ಕಸ ತೆರವುಗೊಳಿಸಿ, ಸ್ವಚ್ಛಗೊಳಿಸುವ ಕಾಮಗಾರಿಗೆ ಗುರುವಾರ ಟೆಂಡರ್ ಕರೆಯುವ ಮೂಲಕ ಈ ಭಾಗದ ಜನರ ಬಹುದಿನದ ಬೇಡಿಕೆ ಈಡೇರುವ ಕಾಲ ಸಮೀಪಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ, ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ. ಸೋಮಣ್ಣ ಹಾಗೂ ನಾನು ನಿರಂತರ ಪ್ರಯತ್ನ ಮಾಡಿ ಕಸ ವಿಲೇವಾರಿಗೆ ಹೆಚ್ಚು ಒತ್ತು ನೀಡಿದ್ದೆವು. ಅನಿವಾರ್ಯ ಕಾರಣಗಳಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಿತ್ತು. ಈಗ ಎಲ್ಲವೂ ಸುಸೂತ್ರವಾಗಿದ್ದು, ಕಸ ತೆರವುಗೊಳಿಸುವ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದ್ದಾರೆ.

ಸ್ವಚ್ಛ ಭಾರತ್ ಯೋಜನೆಯಡಿ 60 ಕೋಟಿ ರೂ. ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ. ಈ ನಿಟ್ಟಿನಲ್ಲಿ ಕೊಟ್ಟ ಮಾತು ಉಳಿಸಿಕೊಳ್ಳುವತ್ತ ದೃಢ ಹೆಜ್ಜೆ ಇಟ್ಟಿದ್ದೇವೆ ಎಂದು ಪ್ರತಾಪ್ ಸಿಂಹ ತಿಳಿಸಿದ್ದಾರೆ. ಟೆಂಡರ್ ಪ್ರಕ್ರಿಯೆಗೆ ಸಹಕರಿಸಿದ ಹಿಂದಿನ ಆಯುಕ್ತರಾಗಿದ್ದ ಲಕ್ಷ್ಮಿಕಾಂತ್ ರೆಡ್ಡಿ, ಗುರುದತ್ ಹೆಗ್ಡೆ, ಈಗಿನ ಆಯುಕ್ತರಾದ ಅಶಾದ್ ಉರ್ ರೆಹಮಾನ್ ಷರೀಫ್, ಮಹಾಪೌರ ಶಿವಕುಮಾರ್, ಶಾಸಕ ಶ್ರೀವತ್ಸ, ನಗರಾಭಿವೃದ್ಧಿ ಕಾರ್ಯದರ್ಶಿ ಅಜಯ್ ನಾಗಭೂಷಣ್, ಐಎಎಸ್ ಅಧಿಕಾರಿ ಮಂಜುಶ್ರೀ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದಸರಾದಲ್ಲಿ ಏರ್ ಶೋಗೆ ರಕ್ಷಣಾ ಸಚಿವ

ರಾಜನಾಥ್‌ಸಿಂಗ್‌ಗೆ ಸಿಎಂ ಸಿದ್ದರಾಮಯ್ಯ ಮನವಿ



ನವದೆಹಲಿ, ಆ.3– ಮೈಸೂರು ದಸರಾ ಮಹೋತ್ಸವದ ವೇಳೆ ಏರ್ ಶೋ ನಡೆಸುವಂತೆ ರಕ್ಷಣಾ ಸಚಿವ ರಾಜನಾಥ್‌ಸಿಂಗ್‌ಗೆ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಗುರುವಾರ ಮನವಿ ಮಾಡಿದ್ದಾರೆ.

ದೆಹಲಿಯ ಸಂಸತ್ ಭವನದಲ್ಲಿರುವ ರಾಜನಾಥ್ ಸಿಂಗ್ ಕಚೇರಿಯಲ್ಲಿ ಭೇಟಿಯಾಗಿ ಈ ಸಂಬಂಧ ಮಾತುಕತೆ ನಡೆಸಿದರು. ಕರ್ನಾಟಕದ ವೈಭವ ಸಾರುವ ಪ್ರಸಿದ್ಧ ಮೈಸೂರು ದಸರಾ ಉತ್ಸವದ ಆಚರಣೆಗಳ ಬಗ್ಗೆ ಇಡೀ ದೇಶಕ್ಕೇ ಅರಿವಾಗುವ ಅಗತ್ಯ ಇದ್ದು, ರಾಜ್ಯದ ವೈಭವದ ಇತಿಹಾಸ ಮತ್ತು ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲಬೇಕಾಗಿದೆ. ಈ ವರ್ಷ ಅಕ್ಟೋಬರ್ 15 ರಿಂದ 24 ರವರೆಗೆ ದಸರಾ ಆಚರಿಸಲು ನಿರ್ಧರಿಸಲಾಗಿದೆ. ಮೈಸೂರು ದಸರಾ ಆಚರಣೆಗೆ ಸಂಬಂಧಪಟ್ಟ ಉನ್ನತ ಸಮಿತಿಯ ಸಭೆಯಲ್ಲಿ 2023ರ ದಸರಾ ಮಹೋತ್ಸವದ ವೇಳೆ ಏರ್ ಶೋ ನಡೆಸಬೇಕೆಂಬ ಜನರ ಬಯಕೆಯನ್ನು ಸಮಿತಿಯ ಮುಂದೆ ಇಡಲಾಯಿತು. 2017 ಮತ್ತು 2019 ರಲ್ಲಿ, ಮೈಸೂರಿನ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲಿ ಭಾರತೀಯ ವಾಯುಪಡೆಯು ಪ್ರದರ್ಶಿಸಿದ ವಿಶೇಷ ಏರ್ ಶೋ ಮೂಲಕ ದಸರಾ ಉತ್ಸವವು ಹತ್ತಾರು ಪ್ರವಾಸಿಗರು ಮತ್ತು ಕನ್ನಡಿಗರ ಗಮನವನ್ನು ಸೆಳೆದಿತ್ತು. ಹೀಗಾಗಿ, ಈ ಬಾರಿ ಮೈಸೂರಿನಲ್ಲಿ ನಾಡಹಬ್ಬ ದಸರಾ 2023ರ ಸಂದರ್ಭದಲ್ಲಿ ಇದೇ ರೀತಿಯ 'ಏರ್‌ಶೋ' ಅನ್ನು ಆಯೋಜಿಸಲು ಸಂಬಂಧಪಟ್ಟವರಿಗೆ ನಿರ್ದೇಶಿಸಿ. ನಿಮ್ಮ ಸಮಯೋಚಿತ ಮಧ್ಯಸ್ಥಿಕೆ ದಸರಾ ಹಬ್ಬಕ್ಕೆ ಇನ್ನಷ್ಟು ರಂಗು ತುಂಬಲಿದೆ. ದೃಢವಾದ ಮತ್ತು ತ್ವರಿತ ಕ್ರಮಕ್ಕಾಗಿ ಎದುರು ನೋಡುತ್ತಿದ್ದೇನೆ ಎಂದು ಹೇಳಿದರು. ಸಿಎಂ ಸಿದ್ದರಾಮಯ್ಯ ಅವರ ಮನವಿಯನ್ನು ಸ್ವೀಕರಿಸಿದ ರಾಜನಾಥ್‌ಸಿಂಗ್ ಅವರು, ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಹೇಳಿದರು.

ಸೋಮವಾರ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ದಸರಾ ಆಚರಣೆಯ ಉನ್ನತಾಧಿಕಾರ ಸಮಿತಿಯ ಸಭೆಯಲ್ಲಿ, ಮೈಸೂರು ದಸರಾವನ್ನು ಅರ್ಥಪೂರ್ಣ ಮತ್ತು ಅದ್ಧೂರಿಯಾಗಿ ಆಚರಣೆ ಮಾಡಲು ನಿರ್ಧರಿಸಲಾಗಿತ್ತು.

ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಡಿಪಿಆರ್ ಸಿದ್ಧಪಡಿಸಲು ಕೇಂದ್ರ ಸೂಚನೆ



ನವದೆಹಲಿ,ಆ.3–ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ತಗ್ಗಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವಂತೆ ಕರ್ನಾಟಕ ಸರಕಾರಕ್ಕೆ ಕೇಂದ್ರ ಸರಕಾರ ಸೂಚಿಸಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುವಾರ ಹೇಳಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಮತ್ತು ಜಲಸಂಪನ್ಮೂಲ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಬೆಂಗಳೂರಿನ ಸಂಚಾರ ದಟ್ಟಣೆ ಸಮಸ್ಯೆ ಕುರಿತು ಚರ್ಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಸಭೆಯ ವಿವರಗಳನ್ನು ಹಂಚಿಕೊಂಡ ಶಿವಕುಮಾರ್, ಬೆಂಗಳೂರಿನಲ್ಲಿ ಟ್ರಾಫಿಕ್ ಸರಾಗಗೊಳಿಸುವ ಮಾರ್ಗಗಳನ್ನು ಕೇಂದ್ರ ಸಚಿವರೊಂದಿಗೆ ಚರ್ಚಿಸಿದ್ದು, ಈ ಸಮಸ್ಯೆಗೆ ಕೇಂದ್ರ ಸರ್ಕಾರ ಹೇಗೆ ಬೆಂಬಲ ನೀಡಬಹುದು ಎಂಬುದನ್ನು ಹೇಳಿದ್ದು, ಗಡ್ಕರಿ ಅವರು ಸಕಾರಾತ್ಮಕ ರೀತಿಯಲ್ಲಿ ಕೆಲವು ಸಲಹೆ ನೀಡಿದ್ದಾರೆ. ಡಿಪಿಆರ್ ತಯಾರಿಸಲು ನಮಗೆ ಸೂಚಿಸಿದ್ದಾರೆ ಎಂದರು.

ಸುರಂಗ ಅಥವಾ ಮೇಲ್ಸೇತುವೆ ಅಥವಾ ಟ್ರಾಫಿಕ್ ಸರಾಗಗೊಳಿಸುವ ಯಾವುದೇ ಮಾರ್ಗಗಳ ನಿರ್ಮಾಣದ ಪ್ರಸ್ತಾವನೆಯೊಂದಿಗೆ ರಾಜ್ಯ ಸರ್ಕಾರ ಈಗಾಗಲೇ ಆಸಕ್ತರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದೆ. ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ಕೇಂದ್ರ ●9ನೇ ಪುಟಕ್ಕೆ

ಸಾಲಿಗ್ರಾಮ ತಾಲೂಕಿನ ಮೇಲೂರು ಗ್ರಾಪಂನಲ್ಲಿ ರಾಜಕೀಯ ಮೇಲಾಟ...!

ದೇವರ ಮೇಲೆ ಆಣೆ–ಪ್ರಮಾಣ ಮಾಡಿಯೂ ರಾಜಕೀಯ ತಂತ್ರಕ್ಕೆ ಮಾರುಹೋದ ಗ್ರಾಪಂ ಸದಸ್ಯರು;

ಸೈಲಂಟಾಗಿದ್ದವರಿಗೆ ವಿಜಯಮಾಲೆ

ಮೈಸೂರು, ಆ.3(ಬಿಎಲ್‌ಯು)– ಸಾಲಿಗ್ರಾಮ ತಾಲೂಕಿನ ಮೇಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಕಳೆದ ಮಂಗಳವಾರ ಚುನಾವಣೆ ನಿಗದಿಯಾಗಿತ್ತು.

ಹಿಂದುಳಿದ ವರ್ಗ 'ಎ' ಮಹಿಳೆಗೆ ಮೀಸಲಾಗಿದ್ದ ಈ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಭಾರತಿ ವಿಶ್ವನಾಥ್ ಮತ್ತು ಕಾಂಗ್ರೆಸ್ ಬೆಂಬಲಿತ ವಿಜಯ ರಾಮಕೃಷ್ಣೇಗೌಡ ನಡುವೆ ಜಿದ್ದಾಜಿದ್ದಿನ ಪೈಪೋಟಿ. ಗ್ರಾಪಂ ಅಧ್ಯಕ್ಷ ಸ್ಥಾನ ಪಡೆಯುವುದು ಇವರಿಬ್ಬರಿಗೂ ಪ್ರತಿಷ್ಠೆಯ ವಿಷಯವಾಗಿತ್ತು. ಗೆಲುವಿಗಾಗಿ ಇಬ್ಬರೂ ಅಭ್ಯರ್ಥಿಗಳು ಹಾಗೂ ಅವರ ಪರ ಇದ್ದ ಮುಖಂಡರು ತಂತ್ರ–ಪ್ರತಿತಂತ್ರದಲ್ಲಿ ನಿರತರಾಗಿದ್ದರು. ಇವರಿಗೆ ಗೆಲ್ಲುವುದೊಂದೇ ಗುರಿಯಾಗಿತ್ತು.



ಕಪ್ಪಡಿ ರಾಚಪ್ಪಾಜಿ ದೇವಸ್ಥಾನದಲ್ಲಿ ಆಣೆಮಾಡಿದ ಗ್ರಾಮ ಪಂಚಾಯ್ತಿ ಸದಸ್ಯರು.

15 ಸದಸ್ಯ ಬಲದ ಈ ಗ್ರಾಮ ಪಂಚಾಯಿತಿ ಅಧಿಕಾರದ ಚುಕ್ಕಾಣಿ ಹಿಡಿಯಲು 8 ಸದಸ್ಯರ ಬೆಂಬಲ ಬೇಕಾಗಿತ್ತು. ಅಧ್ಯಕ್ಷ ಸ್ಥಾನ ಹಿಡಿಯಲೇಬೇಕೆಂಬ ಛಲದೊಂದಿಗೆ ಮುನ್ನುಗ್ಗಿದ್ದ ಭಾರತಿ ವಿಶ್ವನಾಥ್ ಹಾಗೂ ಅವರ ಪರ ಇದ್ದ ಮುಖಂಡರು 8 ಸದಸ್ಯರನ್ನು ತಮ್ಮತ್ತ ಸೆಳೆದೇ ಬಿಟ್ಟರು. ಅಭ್ಯರ್ಥಿ ಭಾರತಿ ವಿಶ್ವನಾಥ್ ಸೇರಿದಂತೆ ಇವರ ಪರ 9 ಮತಗಳು ಚಲಾವಣೆಯಾಗುತ್ತದೆ. ಎದುರಾಳಿ ವಿಜಯ ರಾಮಕೃಷ್ಣೇಗೌಡ ಕೇವಲ 6 ಮತ ಪಡೆದು ಪರಾಭವಗೊಳ್ಳುತ್ತಾರೆ ಎಂಬುದು ಇವರ ಲೆಕ್ಕಾಚಾರವಾಗಿತ್ತು. ತಂತ್ರಗಾರಿಕೆಯಲ್ಲಿ ದಾಪುಗಾಲಿಟ್ಟ ಭಾರತಿ ವಿಶ್ವನಾಥ್ ಅವರಿಗೆ ಅದೇನೋ ಅನುಮಾನ. ಹೀಗಾಗಿ ತಮ್ಮನ್ನು ●9ನೇ ಪುಟಕ್ಕೆ

ತಜ್ಞರ ತಂಡ ಕಳಿಸಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಸಮಸ್ಯೆ ನಿವಾರಣೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಕೇಂದ್ರ ಹೆದ್ದಾರಿ ಸಚಿವ ಗಡ್ಕರಿ ಭರವಸೆ

ಬೆಂಗಳೂರು, ಆ.3(ಕೆಎಂಶಿ)– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಉಂಟಾಗುತ್ತಿರುವ ಅಪಘಾತ ಮತ್ತು ಇತರ ಸಮಸ್ಯೆ ನಿವಾರಣೆಗೆ ತಜ್ಞರ ತಂಡ ಕಳುಹಿಸಿ ಲೋಪದೋಷ ಸರಿಪಡಿಸುವುದಾಗಿ ಕೇಂದ್ರ ಭೂ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ದೆಹಲಿಯ ಸಂಸತ್ ಭವನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೂ ಸಾರಿಗೆ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಈ ಭರವಸೆ ನೀಡಿದ್ದಾರೆ. ಈಗಾಗಲೇ ತಜ್ಞರ ತಂಡ ರಸ್ತೆ ಪರಿಶೀಲನೆ ನಡೆಸಿ ಗುತ್ತಿಗೆದಾರರಿಗೆ ಕೆಲವು ಸಲಹೆ–ಸೂಚನೆಗಳನ್ನು ನೀಡಿದ್ದಾರೆ. ಅವುಗಳನ್ನು ಪಾಲನೆ ಮಾಡುವಂತೆ ನಾವು ಆದೇಶ ಮಾಡಿದ್ದೇವೆ.

ಇದರ ನಂತರವೂ ಸಮಸ್ಯೆಗಳು ಉಂಟಾಗುತ್ತಿರುವ ಬಗ್ಗೆ ದೂರುಗಳು ಬರುತ್ತಲೇ ಇವೆ. ಇವನ್ನು ಬಗೆಹರಿಸಲು ಮತ್ತೊಂದು ತಜ್ಞರ ತಂಡ ಕಳುಹಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದ್ದಾರೆ. ಭೇಟಿಯ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು, ಹೆದ್ದಾರಿಯಲ್ಲಾಗುತ್ತಿರುವ ಅಪಘಾತ ತಪ್ಪಿಸುವುದು ಹಾಗೂ ಹೆದ್ದಾರಿ ಬದಿಯಲ್ಲಿ ನಾಗರಿಕರಿಗೆ ಇತರೆ ಸೌಕರ್ಯಗಳನ್ನು ಸಮರ್ಪಕವಾದ

ಲೋಪದೋಷ ಸರಿಪಡಿಸುವ ವಿಶ್ವಾಸ



ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಮಾಡಿದ ಮನವಿಗೆ ತಕ್ಷಣವೇ ಸ್ಪಂದಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಪ್ರವೇಶ ಮತ್ತು ನಿರ್ಗಮನಕ್ಕೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಬೇಕು ಎಂದೂ ಕೋರಿದರು. ಕೇರಳ ಗಡಿ ಭಾಗದಿಂದ ರಾಜ್ಯವನ್ನು ಪ್ರವೇಶಿಸುವ ವಾಹನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕೊಳ್ಳೇಗಾಲ ಮಾರ್ಗವಾಗಿ ಗುಂಡ್ಲುಪೇಟೆ, ನಂಜನಗೂಡು ಮೂಲಕ ಮೈಸೂರಿನ ತನಕ ರಸ್ತೆಯನ್ನು ನಾಲ್ಕು ಮತ್ತು ಆರು ಲೇನ್ ರಸ್ತೆಗಳಾಗಿ ಅಗಲೀಕರಣ ಮಾಡಬೇಕು ಎಂದು ಮನವಿ ಮಾಡಿಕೊಂಡರು. ತಮಿಳುನಾಡು ಗಡಿಯಿಂದ ರಾಜ್ಯ ಪ್ರವೇಶಿಸುವ ರಸ್ತೆಗಳನ್ನು ನಾಲ್ಕು ಲೇನ್ ರಸ್ತೆಗಳನ್ನಾಗಿ ಕೊಳ್ಳೇಗಾಲ, ಮಳವಳ್ಳಿವರೆಗೆ ಅಗಲೀಕರಣಗೊಳಿಸಬೇಕು ಎಂದು ಮುಖ್ಯಮಂತ್ರಿಗಳು ವಿವರಿಸಿದರು. ರಾಜ್ಯದಲ್ಲಿ ಮಳೆಯಿಂದ ಹಾನಿಗೀಡಾದ ರಸ್ತೆಗಳ ದುರಸ್ತಿಗೆ ತಕ್ಷಣವೇ ಇನ್ನೂರಾ ಐವತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎಂದು ಕೋರಿದರು. ರಾಜ್ಯದಲ್ಲಿರುವ ●9ನೇ ಪುಟಕ್ಕೆ

ಶೇ.75ರಷ್ಟು ಅಪಘಾತಕ್ಕೆ ಅತೀ ವೇಗವೇ ಕಾರಣ

- ರಸ್ತೆ ಸಾರಿಗೆ, ಹೆದ್ದಾರಿಗಳ ಸಚಿವಾಲಯದಿಂದ ಅಂಕಿ ಅಂಶ ಬಿಡುಗಡೆ
- ಎಕ್ಸ್‌ಪ್ರೆಸ್‌ವೇನಲ್ಲಿ 398 ಅಪಘಾತಗಳ ಪೈಕಿ 121 ಘೋರ ಅಪಘಾತ
- ಮೈಸೂರಿಂದ ನಿಡಘಟ್ಟದವರೆಗೆ 209 ಅಪಘಾತಗಳಲ್ಲಿ 62 ಮಂದಿ ಸಾವು
- ಬೆಂಗಳೂರು–ನಿಡಘಟ್ಟ ನಡುವೆ ಸಂಭವಿಸಿದ 189 ಅಪಘಾತಗಳಲ್ಲಿ 59 ಸಾವು

ಮೈಸೂರು, ಆ. 3 (ಆರ್‌ಕೆ)– ಕಳೆದ 6 ತಿಂಗಳಿಂದೀಚೆಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಸಂಭವಿಸಿರುವ ಅಪಘಾತಗಳ ಪೈಕಿ ಶೇ.75ರಷ್ಟು ಅತೀ ವೇಗದ ಚಾಲನೆಯಿಂದ ಸಂಭವಿಸಿವೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ತಿಳಿಸಿದೆ.

ಈ ಬಗ್ಗೆ ಸಮೀಕ್ಷೆ ನಡೆಸಿ ಅಂಕಿ ಅಂಶ ಬಿಡುಗಡೆ ಮಾಡಿರುವ ಸಚಿವಾಲಯವು, ಎಕ್ಸ್‌ಪ್ರೆಸ್ ವೇನಲ್ಲಿ ಇದುವರೆಗೆ ಒಟ್ಟು 398 ಅಪಘಾತಗಳು ಸಂಭವಿಸಿದ್ದು, ಆ ಪೈಕಿ 121 ಘೋರ ಅಪಘಾತಗಳೆಂದು ತಿಳಿಸಿದೆ. ನಿಡಘಟ್ಟದಿಂದ ಮೈಸೂರು ನಗರದವರೆಗೆ ಸಂಭವಿಸಿದ 209 ಅಪಘಾತಗಳಲ್ಲಿ 62 ಮಂದಿ ಸಾವನ್ನಪ್ಪಿದ್ದರೆ, ಬೆಂಗಳೂರು–ನಿಡಘಟ್ಟ ನಡುವೆ 189 ಅಪಘಾತಗಳು ಸಂಭವಿಸಿದ್ದು, 59 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಂಕಿ–ಅಂಶಗಳಿಂದ ತಿಳಿದುಬಂದಿದೆ.

ಒಟ್ಟಾರೆ ಅಪಘಾತಗಳಲ್ಲಿ ಶೇ.65ರಿಂದ 75ರಷ್ಟು ಅಪಘಾತಗಳಿಗೆ ವಾಹನಗಳ ಅತೀ ವೇಗವೇ ಕಾರಣವಾಗಿದೆ. ಈ ಹೆದ್ದಾರಿಯಲ್ಲಿ ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರವು ಆಗಸ್ಟ್ 1ರಿಂದ ದ್ವಿಚಕ್ರ ವಾಹನ, ಆಟೋರಿಕ್ಷಾ, ಟ್ರ್ಯಾಕ್ಟರ್, ಎತ್ತಿನ ಗಾಡಿಯಂತಹ



ವಾಹನಗಳ ಪ್ರವೇಶವನ್ನು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ನಿರ್ಬಂಧಿಸಿದೆಯಲ್ಲದೆ, ವೇಗ ಮಿತಿಗೆ ಕ್ರಮ ವಹಿಸಿದೆ. ದಶಪಥ ರಸ್ತೆಯ ಮೇನ್ ಕ್ಯಾರಿಯೇಜ್‌ನಲ್ಲಿ ಸಂಚರಿಸುತ್ತಿದ್ದ ಆಟೋ, ದ್ವಿಚಕ್ರ ವಾಹನ, ಟ್ರ್ಯಾಕ್ಟರ್‌ಗಳಿಂದಲೇ ಬಹುತೇಕ ಅಪಘಾತ (ಶೇ.30)ಗಳು ಸಂಭವಿಸಿದ್ದು, ಶೇ.25ರಷ್ಟು ಅಪಘಾತಗಳು ವಾಹನಗಳು ಲೇನ್ ಪಥ ಶಿಸ್ತು ಪಾಲನೆ ಮಾಡದಿರುವುದರಿಂದ ಸಂಭವಿಸಿವೆ ●9ನೇ ಪುಟಕ್ಕೆ

ಮೈಸೂರಲ್ಲಿ ಅಪಘಾತಕ್ಕೆ ಕಾರಣವಾಗುವ ಎಲ್ಇಡಿ ಸ್ಕ್ರೀನ್‌ಗಳ ತೆರವು



ಮೈಸೂರು,ಆ.3(ಆರ್‌ಕೆ)–ಅಪಘಾತಕ್ಕೆ ಕಾರಣವಾಗುವ ಹಾಗೂ ರಾತ್ರಿ ವೇಳೆ ಕಣ್ಣಿಗೆ ನಾಟುವಂತೆ, ತೀಕ್ಷ್ಣ ಹಾಗೂ ಪ್ರಖರ ಬೆಳಕಿನ ಎಲ್ಇಡಿ ಸ್ಕ್ರೀನ್ ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗುವುದು ಎಂದು ಮೇಯರ್ ಶಿವ ಕುಮಾರ್ ತಿಳಿಸಿದ್ದಾರೆ.



ಮೇಯರ್ ಶಿವಕುಮಾರ್ ಘೋಷಣೆ

ಎಲ್ಇಡಿ ಸ್ಕ್ರೀನ್‌ಗಳಿಂದಲೇ ಕೆಲವೆಡೆ ಅಪಘಾತಗಳಾಗುತ್ತಿವೆ. ಇವುಗಳ ತೀಕ್ಷ್ಣ ಬೆಳಕಿನಿಂದ ವಾಹನ ಚಾಲಕರಿಗೆ ಅಡ್ಡಿ ಉಂಟಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸರ್ಕಲ್, ಜಂಕ್ಷನ್‌ಗಳಿಗೆ ಖುದ್ದು ಪರಿಶೀಲಿಸಿದಾಗ ಎಲ್ಇಡಿ ಸ್ಕ್ರೀನ್‌ಗಳಲ್ಲಿ ಪ್ರದರ್ಶನವಾಗುವ ದೃಶ್ಯಗಳು ವಾಹನ ಚಾಲಕರ ಗಮನ ಸೆಳೆದು, ಅಪಘಾತಕ್ಕೆ ಕಾರಣವಾಗುತ್ತದೆ ಹಾಗೂ ನೋಡುಗರ ಕಣ್ಣಿಗೂ ತೊಂದರೆ ಉಂಟಾಗುತ್ತದೆ ಎಂಬುದು ಕಂಡು ಬಂದಿತು ಎಂದು ತಿಳಿಸಿದರು.

ಮೈಸೂರು ನಗರದ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯ ಚಾಮರಾಜ ಸರ್ಕಲ್, ಹಾರ್ಡಿಂಜ್ ಸರ್ಕಲ್, ರಾಮಸ್ವಾಮಿ ಸರ್ಕಲ್, ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಪ್ರಧಾನ ಕಚೇರಿ ಆವರಣ, ಕೆಆರ್‌ಎಸ್ ರಸ್ತೆಯ ಒಂಟಿಕೊಪ್ಪಲು ವೆಂಕಟೇಶ್ವರ ದೇವಸ್ಥಾನದ ಸರ್ಕಲ್, ದಾಸಪ್ಪ ಸರ್ಕಲ್, ಹುಣಸೂರು ರಸ್ತೆಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)ದ ಆವರಣ, ಸೇಂಟ್ ಜೋಸೆಫ್ ಶಾಲೆ ಆವರಣ, ಬೋಗಾದಿ ರಸ್ತೆಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH) ಆವರಣ ಸೇರಿ ದಂತೆ ನಗರದಾದ್ಯಂತ ಪ್ರಮುಖ ಸರ್ಕಲ್, ಜಂಕ್ಷನ್, ರಸ್ತೆಗಳ ವಾಹನ ದಟ್ಟಣೆ ಇರುವೆಡೆ ಎಲ್ಇಡಿ ಜಾಹೀರಾತು ಸ್ಕ್ರೀನ್‌ಗಳಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ವೇದ್ಯವಾಗಿದೆ ಎಂದು ಮೇಯರ್ ತಿಳಿಸಿದ್ದಾರೆ.

ಸರ್ಕಾರಿ ಕಚೇರಿಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಎಲ್ಇಡಿ ಸ್ಕ್ರೀನ್‌ಗಳನ್ನು ರಸ್ತೆ, ಜಂಕ್ಷನ್‌ಗಳಿಗಭಿಮುಖವಾಗಿ ಅವರವರ ಸಂಸ್ಥೆ ಆವರಣದಲ್ಲೇ ಜಾಹೀರಾತು ಎಲ್ಇಡಿ ಸ್ಕ್ರೀನ್‌ಗಳನ್ನು ಅಳವಡಿಸಿಕೊಂಡಿದ್ದರಾದರೂ, ಅವು ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದು ಕಂಡು ಬಂದಿದೆ ಎಂದು ಅವರು ತಿಳಿಸಿದ್ದಾರೆ.

ಅತೀ ಶೀಘ್ರ ಎಲ್ಇಡಿ ಸ್ಕ್ರೀನ್‌ಗಳನ್ನು ತೆರವುಗೊಳಿಸುವಂತೆ ಆಯಾ ಸಂಸ್ಥೆಗಳಿಗೆ ನೋಟಿಸ್ ಜಾರಿಗೊಳಿಸಲಾಗುವುದು. ಅವರು ಕ್ರಮ ವಹಿಸದಿದ್ದಲ್ಲಿ ಮೈಸೂರು ಮಹಾನಗರ ಪಾಲಿಕೆಯಿಂದಲೇ ಅವುಗಳನ್ನು ತೆರವುಗೊಳಿಸುತ್ತೇವೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಗ್ಯಾರಂಟಿ ಜಾರಿಗೆ ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನ ಬಳಸದಂತೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಆ.3(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣಕ್ಕೆ ಮೀಸಲಿರುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಅನುದಾನವನ್ನು ಗ್ಯಾರಂಟಿಗಳ ಜಾರಿಗೆ ಬಳಕೆ ಮಾಡಬಾರದು ಎಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ದಸಂಸ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಗೆ ಮೀಸಲಿರಿಸಿದ ಅನುದಾನವನ್ನು ಅನ್ಯ ಕಾರ್ಯಕ್ರಮಗಳಿಗೆ ವರ್ಗಾವಣೆ ಮಾಡಬಾರದು ಎಂದು ಒತ್ತಾಯಿಸಿದರು. ಇದೇ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಮೂಲ ಸೌಕರ್ಯಗಳಿಂದ ಪರಿಶಿಷ್ಟ ಜಾತಿ–ಪಂಗಡ ಸಮುದಾಯಗಳು ವಂಚಿತವಾಗಿರುವುದನ್ನು ಮನಗಂಡು 2013ರಲ್ಲಿ ರಾಜ್ಯ ಸರ್ಕಾರ, ಆಂಧ್ರಪ್ರದೇಶ ರಾಜ್ಯ ಸರ್ಕಾರದ ಮಾದರಿಯಲ್ಲಿ ವಿಶೇಷ ಕಾಯ್ದೆ ರೂಪಿಸಿ, ಈ ಶೋಷಿತ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಜಾರಿಗೆ ತಂದಿತು. ಆದರೆ ಇದೀಗ ಈ ಯೋಜನೆಯ ಮೂಲ ಉದ್ದೇಶಕ್ಕೆ ವಿರುದ್ಧವಾಗಿ ರಾಜ್ಯ ಸರ್ಕಾರ ಗ್ಯಾರಂಟಿ ಕಾರ್ಯಕ್ರಮಗಳಿಗೆ ಅನುದಾನ ಬಳಸಲು ತೀರ್ಮಾನಿಸಿದ್ದು, ಇದು ಖಂಡನೀಯ ಎಂದು ಕಿಡಿಕಾರಿದರು.

ಈ ಯೋಜನೆಯಡಿ ಅನುದಾನ ಉಳಿದರೆ ಬೇರೆ ಉದ್ದೇಶಕ್ಕೆ ಬಳಸುವ ಸಲುವಾಗಿ ಕಲಂ 7ಡಿ ಅಳವಡಿಸಲಾಗಿತ್ತು. ಆದರೆ ಈ ಕಾರಣಕ್ಕಾಗಿ ದಲಿತರಿಗೆ ಮೀಸಲಾದ ಹಣ ದುರುಪಯೋಗ ಆಗಲು ಪ್ರಾರಂಭವಾಗಿದ್ದ ಹಿನ್ನೆಲೆಯಲ್ಲಿ ಈಗಿನ ರಾಜ್ಯ ಸರ್ಕಾರವೇ ಕಲಂ 7ಡಿ ಅನ್ನು ರದ್ದುಪಡಿಸಿದೆ. ಆದರೆ ಈಗ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದಲ್ಲಿ ಸುಮಾರು 11 ಸಾವಿರ ಕೋಟಿಯನ್ನು ಗ್ಯಾರಂಟಿಗಳ ಜಾರಿಗೆ ಬಳಸಲು ಇದೇ ಸರ್ಕಾರ ಮುಂದಾಗಿದೆ. ಇದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಯೋಜನೆಯಡಿ ಮೀಸಲಿರುವ ಅನುದಾನವು ಪರಿಶಿಷ್ಟ ಜಾತಿ ಮತ್ತು ಪಂಗಡ ಪಾವತಿಸಿರುವ ತೆರಿಗೆ ಹಣ. ಇದನ್ನು ದಲಿತ ಸಮುದಾಯ ವಿದ್ಯಾರ್ಥಿನಿಲಯ ನಿರ್ವಹಣೆ, ವಿದ್ಯಾರ್ಥಿವೇತನ ವಿತರಣೆ ಸೇರಿದಂತೆ ಈ ಸಮುದಾಯ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರವೇ ಬಳಸಬೇಕೆಂದು ಒತ್ತಾಯಿಸಿದರು. ದಸಂಸ ಸಂಘಟನಾ ಸಂಚಾಲಕ ಕೆ.ವಿ.ದೇವೇಂದ್ರ, ಖಜಾಂಚಿ ಶಿವಮೂರ್ತಿ ಶಂಕರಪುರ, ಮುಖಂಡರಾದ ಕೆಂಪಯ್ಯನಹುಂಡಿ ರಾಜು, ಮರಿಸ್ವಾಮಿ, ಶಿವರಾಜು, ಚನ್ನಕೇಶವಮೂರ್ತಿ, ರಾಮಚಂದ್ರ, ಮಹದೇವ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ಮೈಸೂರಲ್ಲಿ ಗೃಹಜ್ಯೋತಿಗೆ ಚಾಲನೆ

ಮೈಸೂರು,ಆ.3– ಕರ್ನಾಟಕ ಸರ್ಕಾರದ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಆ.5ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯರ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ನೆರವೇರಿಸಲಿದ್ದು, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವಹಿಸುವರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ ಹಾಗೂ ಉಪಮೇಯರ್ ಡಾ.ಜಿ.ರೂಪ ಭಾಗವಹಿಸುವರು ಎಂದು ಕಾರ್ಯ ಮತ್ತು ಪಾಲನಾ ವೃತದ ಅಧೀಕ್ಷಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಆ.3–2023–24ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಪಿರಿಯಾಪಟ್ಟಣ ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ವಿಜ್ಞಾನ ವಿಭಾಗದಲ್ಲಿ (ಪಿ.ಸಿ.ಎಂ.ಬಿ), ವಾಣಿಜ್ಯ ವಿಭಾಗ (ಸಿ.ಇ.ಬಿ.ಎ) ವಿಷಯಗಳ ಬೋಧನೆಗಾಗಿ ಅತಿಥಿ ಉಪನ್ಯಾಸಕರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿನ ಮೊರಾರ್ಜಿ ದೇಸಾಯಿ ಶಾಲೆಗೆ ವಿವರದೊಂದಿಗೆ ಅರ್ಜಿ ಸಲ್ಲಿಸಲು ಆ.10 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ದೂ.ಸಂ:0821–2422088, 9008831045 ಅಥವಾ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿನ ಮೊರಾರ್ಜಿ ದೇಸಾಯಿ ಶಾಲೆಯ ದೂ.ಸಂ:81973 65501, 9611787204 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಿಎಂಎ ಕೋರ್ಸ್‌ಗೆ ಅರ್ಜಿ ಅವಧಿ ವಿಸ್ತರಣೆ

ಮೈಸೂರು,ಆ.3–ದಿ ಇನ್ಸ್‌ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಸಿಎಂಎ), ಮೈಸೂರು ಚಾಪ್ಟರ್ ವತಿಯಿಂದ ಫೌಂಡೇಷನ್, ಇಂಟರ್‌ಮೀಡಿಯೇಟ್ ಮತ್ತು ಫೈನಲ್ ತರಗತಿಗಳ ಪ್ರವೇಶಾವಕಾಶವನ್ನು ಆ.10ರವರೆಗೆ ವಿಸ್ತರಿಸಲಾಗಿದೆ.

ಅರ್ಜಿಗಳನ್ನು ನೋಂದಾಯಿಸಿಕೊಳ್ಳಲು ಆಸಕ್ತ ವಿದ್ಯಾರ್ಥಿಗಳು ಕೃಷ್ಣಮೂರ್ತಿಪುರಂ, 7ನೇ ಅಡ್ಡ ರಸ್ತೆಯಲ್ಲಿರುವ ಮೈಸೂರು ಚಾಪ್ಟರ್ ಕಚೇರಿಗೆ ನೇರವಾಗಿ ಅಥವಾ ದೂ.0821–2331083, ಮೊ.9731789222, 9900111552 ಮೂಲಕ ಬೆಳಗ್ಗೆ 10ರಿಂದ 12ರವರೆಗೆ ಮತ್ತು ಸಂಜೆ 5ರಿಂದ 7.30ರವರೆಗೆ ಸಂಪರ್ಕಿಸಿ.

ಮೈಸೂರಲ್ಲಿ ನಾಳೆಯಿಂದ ಎರಡು ದಿನಗಳ ಆರ್ತ್ರೋಸ್ಕೊಪಿ ಸಭೆ



ಮೈಸೂರು,ಆ.3(ಜಿಎ)–ಮೈಸೂರಿನಲ್ಲಿ 2 ದಿನಗಳ ಆರ್ತ್ರೋಸ್ಕೊಪಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ಸದಸ್ಯ ಡಾ.ವಿಜಯ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ಆ.5 ಮತ್ತು 6ರಂದು ನಗರದ ಜೆಪಿ ಫಾರ್ಚುನ್ ಹೋಟೇಲ್‌ನಲ್ಲಿ ಆಯೋಜಿಸಿದ್ದು, ಕಾರ್ಯಕ್ರಮಕ್ಕೆ ವಿಶೇಷ ಅತಿಥಿಯಾಗಿ ಆಗಮಿಸುತ್ತಿರುವ ಯುಕೆಯ ಭುಜ ಮತ್ತು ಮೊಣಕೈ ಶಸ್ತ್ರಚಿಕಿತ್ಸ ತಜ್ಞರಾದ ಆಂಡ್ರ್ಯೂ ಚೇಂಬ್ಲರ್ ಅವರು ಬೆಳಗ್ಗೆ 11.00 ಗಂಟೆಗೆ ಉದ್ಘಾಟಿಸಲಿದ್ದಾರೆ ಎಂದರು.

2 ದಿನಗಳ ಸಭೆಗೆ ದೇಶ ವಿವಿಧ ಭಾಗಗಳಿಂದ 200ಕ್ಕೂ ಅಧಿಕ ಕೀಲು ಮತ್ತು ಮೂಳೆ ವೈದ್ಯರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಪ್ರಮುಖವಾಗಿ ಕ್ರೀಡಾಪಟುಗಳ ಭುಜ ಮತ್ತು ಮೊಣಕೈ ಗಾಯಗಳ ಬಗ್ಗೆ ಚರ್ಚೆ, ಸಂವಾದ ಮತ್ತು ಶಸ್ತ್ರ ಚಿಕಿತ್ಸೆಯ ನೇರಪ್ರಸಾರ ನಡೆಯಲಿದ್ದು, ಜಿಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಿಂದ ಮೊದಲ ದಿನ ಭುಜ ಗಾಯದ ಶಸ್ತ್ರ ಚಿಕಿತ್ಸೆಯನ್ನು ನೇರಪ್ರಸಾರ ಮಾಡಲಿದ್ದಾರೆ. ಸಭೆಯಲ್ಲಿ ಕೀಲು ಮತ್ತು ಮೂಳೆ ತಜ್ಞರು, ಕ್ರೀಡಾಪಟುಗಳು ಮತ್ತು ಕೋಚ್‌ಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಗಿರೀಶ್ ಚಂದ್ರ, ಡಾ.ಪರಮೇಶ್ ಮತ್ತು ಡಾ.ಶ್ರೇಯಸ್ ಉಪಸ್ಥಿತರಿದ್ದರು.

ನಾಳೆ ಮೈಸೂರಿನಲ್ಲಿ ಸೀತೂ ಮದುವೆ ನಾಟಕ ಪ್ರದರ್ಶನ



ಮೈಸೂರು,ಆ.3(ಜಿಎ)–ಬೆಂಗಳೂರಿನ ಸೈಡ್ ವಿಂಗ್ ರಂಗತಂಡದ ವತಿಯಿಂದ ಆ.5ರಂದು ಮೈಸೂರಿನಲ್ಲಿ 'ಸೀತೂ ಮದುವೆ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಕದಂಬ ವೇದಿಕೆಯ ರಾಜಶೇಖರ್ ಕದಂಬ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6.30ಕ್ಕೆ ನಗರದ ರಾಮಗೋವಿಂದ ರಂಗಮಂದಿರದಲ್ಲಿ ಬಿಜಿ ರಚನೆಯ ಹಾಸ್ಯ ನಾಟಕ ಸೀತೂ ಮದುವೆ ಪ್ರದರ್ಶನ ಏರ್ಪಡಿಸಿದ್ದು, ಪ್ರವೇಶ ಶುಲ್ಕ 100 ರೂ. ಎಂದರು. ಸೈಡ್ ವಿಂಗ್ ರಂಗ ತಂಡದ ಕಲಾವಿದ ರಾಹುಲ್ ಮಾತನಾಡಿ, ಈಗಾಗಲೇ ಈ ನಾಟಕವು 11 ಪ್ರದರ್ಶನ ಕಂಡಿದ್ದು, ಎಲ್ಲಾ ಕಡೆ ಹೌಸ್‌ಫುಲ್ ಪ್ರದರ್ಶನದೊಂದಿಗೆ ಪ್ರೇಕ್ಷಕರಿಂದ ಭಾರೀ ಮೆಚ್ಚುಗೆಗೆ ಪಾತ್ರವಾಗಿದೆ. ಕಳೆದ ಬಾರಿ ಮೈಸೂರಿನ ಕದಂಬ ರಂಗೋತ್ಸವದಲ್ಲಿ ನಾಟಕ ಪ್ರದರ್ಶನವಾದ ವೇಳೆ ಪ್ರೇಕ್ಷಕರು ಮತ್ತೊಂದು ಪ್ರದರ್ಶನವನ್ನು ಮೈಸೂರಿನಲ್ಲಿ ಆಯೋಜಿಸುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಈ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಅಶ್ವತ್ ಕದಂಬ, ಬಸವರಾಜು ಮತ್ತು ಡಿ.ತಿಪ್ಪಣ್ಣ ಉಪಸ್ಥಿತರಿದ್ದರು.

ಮಣಿಪುರ ಘಟನೆ: ಇಂದು ಪ್ರತಿಭಟನೆ



ಮೈಸೂರು, ಆ.3(ಜಿಎ)–ಮಣಿಪುರದಲ್ಲಿ ಶಾಂತಿ ಮರುಸ್ಥಾಪನೆಗೆ ಆಗ್ರಹಿಸಿ ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್ ವತಿಯಿಂದ ಆ.4ರಂದು ಮೈಸೂರಿನಲ್ಲಿ ಪ್ರತಿಭಟನೆ ನಡೆಸುವುದಾಗಿ ಮುಖಂಡ ಎಂ.ಎಫ್.ಕಲೀಂ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್ ಮತ್ತು ವಿವಿಧ ಸಾಂಸ್ಕೃತಿಕ ಮತ್ತು ಪ್ರಗತಿಪರ ಮತ್ತು ಜನಪರ ಕಾಳಜಿಯ ಸಂಘಟನೆಗಳ ಸಹಯೋಗದೊಂದಿಗೆ ಮಧ್ಯಾಹ್ನ 1.30ರಿಂದ 3 ಗಂಟೆವರೆಗೂ ನಗರದ ಸಂತ ಫಿಲೋಮಿನಾ ಚರ್ಚ್‌ನ ಮುಂಭಾಗ ಬೃಹತ್ ಶಾಂತಿಯುತ ಪ್ರತಿಭಟನೆಯನ್ನು ಆಯೋಜಿಸಲಾಗಿದ್ದು, ಪ್ರತಿಭಟನೆಯಲ್ಲಿ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ನಂಜರಾಜ ಅರಸ್, ಅಜದ್ ಪಾಷಾ, ಜಾವಿದುಲ್ಲ ಮತ್ತು ಗೋಪಾಲ್ ಕೃಷ್ಣ ಉಪಸ್ಥಿತರಿದ್ದರು.



ಮೈಸೂರು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಚಕರಾಗಿದ್ದ ಪುರುಷೋತ್ತಮ್ ಬಡ್ತಿ ಹೊಂದಿ ಮಂಡ್ಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕೃಷ್ಣರಾಜ ಯುವ ಬಳಗ ಹಾಗೂ ಅಹಿಂದ ಸಂಘಟನೆ ವತಿಯಿಂದ ಮೈಸೂರಿನ ವಸಂತ್‌ಮಹಲ್ ಆವರಣದಲ್ಲಿ ಅಭಿನಂದಿಸಿ, ಬೀಳ್ಕೊಡಲಾಯಿತು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಎಂ.ಪಿ.ರಾಜೇಶ್, ಪವನ್ ಸಿದ್ದರಾಮು, ರಾಕೇಶ್, ದೈಹಿಕ ಶಿಕ್ಷಕಿ ಹೊನ್ನಮ್ಮ, ಪ್ರವಾಚಕ ಸೋಮಶೇಖರ್ ಇನ್ನಿತರರಿದ್ದರು.



ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ ಅಮಾನುಷ ಕೃತ್ಯಕ್ಕೆ ಕಾರಣರಾದ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ವೇಳೆ ಲೋಕೇಶ್, ಎಸ್.ಜೆ.ದೊಡ್ಡಉಗ್ರಯ್ಯ, ಹೆಚ್.ಎಸ್.ಗೋಪಾಲಕೃಷ್ಣಸ್ವಾಮಿ, ಆರ್.ಮಹೇಶ್, ಅನಿಲ್‌ಕುಮಾರ್, ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ನಿಧನ



ಎಚ್.ಎಂ.ಗೌಡೇಗೌಡ

ಮೈಸೂರು, ಆ.3– ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್.ಎಂ.ಗೌಡೇಗೌಡ (76) ಗುರುವಾರ ಸರಸ್ವತಿಪುರಂನ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ.

ಮೃತದೇಹವನ್ನು ಶುಕ್ರವಾರ ಬೆಳಗ್ಗೆ 9 ಗಂಟೆವರೆಗೆ ಸ್ವಗೃಹದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿದ್ದು, ಅವರ ಅಂತ್ಯಸಂಸ್ಕಾರವು (ಶುಕ್ರವಾರ) ಮಧ್ಯಾಹ್ನ 12 ಗಂಟೆಗೆ ಅವರ ಹುಟ್ಟೂರಾದ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು ಹೊನ್ನಾವರ ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಮೈಸೂರಲ್ಲಿ ಆಟಿಡೊಂಜಿ ವಿಶೇಷ ಕಾರ್ಯಕ್ರಮ



ಮೈಸೂರು, ಆ.3(ಜಿಎ)–ತುಳುನಾಡು ಸೀಮೆಯ ಸಂಸ್ಕೃತಿ ಸಂಪ್ರದಾಯವನ್ನು ಯುವ ಜನತೆಗೆ ಪರಿಚಯಿಸುವ ನಿಟ್ಟಿನಲ್ಲಿ ಮೈಸೂರು ಬಂಟರ ಸಂಘದ ಮಹಿಳಾ ಘಟಕದ ವತಿಯಿಂದ ಆಟಿಡೊಂಜಿ ದಿನದ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ವಿಜಯನಗರದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಂಘದ ಹಿರಿಯರಾದ ಗೀತಾ ನಾರಾಯಣ್ ಶೆಟ್ಟಿ ಮತ್ತು ತಾರಾ ವಸಂತ ಹೆಗ್ಡೆ ಉದ್ಘಾಟಿಸಿದರು.

ತುಳುನಾಡಿನಲ್ಲಿ ಆಷಾಢ ಮಾಸದಲ್ಲಿ ನಡೆಯುವ ಸಾಂಪ್ರದಾಯಿಕ ಆಚರಣೆಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಆಟಿಡೊಂಜಿ ದಿನವನ್ನು ಆಚರಿಸಲಾಗುತ್ತಿದೆ ಎಂದು ಮಹಿಳಾ ಘಟಕದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ವೇದಾ ರೈ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ದಿನದ ಕಾರ್ಯಕ್ರಮದಲ್ಲಿ ತುಳು ನಾಡಿನಲ್ಲಿ ಈ ಹಿಂದೆ ಅಡುಗೆ ಮಾಡಲು ಬಳಸುತ್ತಿದ್ದ ಪಾತ್ರೆ ಮತ್ತು ಸಲಕರಣೆಗಳ ಪ್ರದರ್ಶನ, ಧಾನ್ಯ ಮತ್ತು ತರಕಾರಿಗಳನ್ನು ಹೇಗೆ ಸಂರಕ್ಷಣೆ ಮಾಡುತ್ತೇವೆ ಎಂಬುದರ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಗೆ ನಮ್ಮ ಘಟಕದ ಮಹಿಳೆಯರು ಅಲ್ಲಿನ ಸಾಂಸ್ಕೃತಿಕ ನೃತ್ಯ, ಸಂಗೀತ ಪ್ರದರ್ಶನ ಮಾಡಿದರು. ಪ್ರಮುಖವಾಗಿ ತುಳುನಾಡಿಗೆ ಸಂಬಂಧಿಸಿದಂತೆ ಆಟಿಂ ಕಲಂಜ ವೇಷಧಾರಿ ಎಲ್ಲರನ್ನು ಆಕರ್ಷಿಸಿದರು. ಕಾರ್ಯಕ್ರಮದಲ್ಲಿ ಆಟಿ ತಿಂಗಳ ವಿಶೇಷತೆ ಬಗ್ಗೆ ಸೌಮ್ಯ ವಿ.ಶೆಟ್ಟಿ ಸುದೀರ್ಘವಾಗಿ ಮಾಹಿತಿ ನೀಡಿದರು. ಸುಮಾರು 180ಕ್ಕೂ ಅಧಿಕ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ತುಳುನಾಡಿನ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ವೈಭವದಿಂದ ಆಚರಿಸಿದರು. ತುಳುನಾಡಿನ ಬಂಟರ ಶೈಲಿಯ ವಿಶೇಷ ಖಾದ್ಯಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಆ.3– ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಆ.7ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭವಾಗಲಿದೆ. ಈ ಸಂಬಂಧ ಆ.6ರಂದು ಸಂಜೆ 6.30ಕ್ಕೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448458050, 8618762110 ಸಂಪರ್ಕಿಸಬಹುದು.

ಸರ್ವ ಸದಸ್ಯರ ಸಭೆ

ಮೈಸೂರು, ಆ.3–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆಯ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಆ.20ರಂದು ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿನ ಬೊಂಬಾಪುರದ ಕಬಿನಿ ಕಾನನ ಗೃಹದಲ್ಲಿ ಜಿಲ್ಲಾ ಸಂಘದ ಅಧ್ಯಕ್ಷ ಜೆ.ಗೋವಿಂದ ರಾಜು ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.8.2023 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಸಿಲ್ಕ್ ಇಂಡಿಯಾ–2023:** ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.

■ **ಕರುನಾಡ ಸೇವಾ ಸೇನೆ, ರಕ್ತನಿಧಿ, ಕೆ.ಆರ್. ಆಸ್ಪತ್ರೆ:** ಕಾರ್ಗಿಲ್ ವಿಜಯೋತ್ಸವದ ಪ್ರಯುಕ್ತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಅಧ್ಯಕ್ಷತೆ: ಕರುನಾಡ ಸೇವಾ ಸೇನೆ ಅಧ್ಯಕ್ಷ ಬಿ. ಗಣೇಶ್, ಸ್ಥಳ: ಆರಾಧ್ಯ ಮಹಾಸಭಾ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಕೆವಿಆರ್‌ಬಿ ಟ್ರಸ್ಟ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ಪರಿಸರ ದಿನದ ಅಂಗವಾಗಿ ಮಗುವಿಗೊಂದು ಮರ ಶಾಲೆಗೊಂದು ವನ ಗಿಡ ಹಾಗೂ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಕೆವಿಆರ್‌ಬಿ ಟ್ರಸ್ಟ್ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಅಜಯ್ ಶಾಸ್ತ್ರಿ, ಸ್ಥಳ: ಸರ್ಕಾರಿ ಶಾಲೆ (ಗುಬ್ಬಚ್ಚಿ ಶಾಲೆ), ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ದಿ ಏನ್ಷಿಯೆಂಟ್ ಟೈಮ್ಸ್:** ಕಾಯಿನ್ ಶೋ ಇಂಡಿಯಾ–2023, ಸ್ಥಳ: ಕನ್ಯಾಕಾ ಮಹಲ್, ಅಶೋಕ ರಸ್ತೆ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ, ಬೆಳಗ್ಗೆ 10ರಿಂದ.

■ **ಫೆಸ್ಟಿವಾ:** ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ಕರಕುಶಲ ಉಡುಪುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ವಿಂಡ್ ಚಿಮ್ಸ್ ಹೋಟೆಲ್, ವಸಂತಮಹಲ್ ರಸ್ತೆ, ಬೆಳಗ್ಗೆ 10ರಿಂದ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.


■ **ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್:** ಚಾಮುಂಡಿಬೆಟ್ಟದ ಪಾದದ ತಪ್ಪಲಿನಿಂದ ಬೆಟ್ಟ ಹತ್ತಿ ಪೂಜೆ ಸಲ್ಲಿಕೆ, ಉಪಸ್ಥಿತರು: ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜಾ ಮತ್ತು ಮಹಿಳಾ ಪದಾಧಿಕಾರಿಗಳು, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು, ಮಧ್ಯಾಹ್ನ 12.15ಕ್ಕೆ.

■ **ನೃತ್ಯ ವಿದ್ಯಾಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ :** ನರ್ತನ ದೀಪ್ತಿ (ನೃತ್ಯ ವಿದ್ಯಾಪೀಠದ ಸೀನಿಯರ್ ಹಂತದ ನೃತ್ಯ ವಿದ್ಯಾರ್ಥಿನಿಯರಿಂದ ಭರತನಾಟ್ಯ ಪ್ರದರ್ಶನ), ಸಂಸ್ಕೃತಿ ಚಿಂತಕ ಡಾ. ಜ್ಯೋತಿಶಂಕರ್ ಅವರಿಂದ ಭಾಗವತದಲ್ಲಿ ಶ್ರೀ ಕೃಷ್ಣ ಕುರಿತು ಪ್ರವಚನ, ಮುಖ್ಯ ಅತಿಥಿಗಳು : ಸೌಮ್ಯ ನೃತ್ಯಶಾಲಾ ನಿರ್ದೇಶಕರಾದ ವಿದುಷಿ ಎಸ್.ಸೌಮ್ಯರಾಣಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 5.45ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ ಅವರಿಂದ ಅರಣ್ಯಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ನೂಪುರೋತ್ಸವ, ಸಂಜೆ 6.30ರಿಂದ ಶಿಖಾ ಮಾಥುರ್ ಬೆಂಗಳೂರು (ಶ್ರೀಹರಿ ಮತ್ತು ಚೇತನಾ ಅವರ ಶಿಷ್ಯೆ) ಅವರಿಂದ ಕಥಕ್, ಸಂಜೆ 7.30ರಿಂದ ವಿದುಷಿ ಮಿತ್ರಾ ನವೀನ್ ಅವರ ಶಿಷ್ಯರಿಂದ ನಾದವಿದ್ಯಾಲಯ ಅಕಾಡೆಮಿ, ಮೈಸೂರು ಭರತನಾಟ್ಯ, ಸ್ಥಳ: ಗಾನಭಾರತೀ, ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದಸಂಸ್ಕೃತಿ–ಟಿ.ಎಸ್.ಗೋಪಾಲ್, 7.15 ಭಾವಗೀತೆಗಳು–ಎಂ.ಕೆ.ಜಯಶ್ರೀ, ಮೈಸೂರು ಅನಂತಸ್ವಾಮಿ, ಸುಲೋಚನ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಡಾ.ಎಸ್.ವಿಜಯ ರಾಘವನ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಹೆಚ್.ಆರ್.ಲೀಲಾವತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ಕೃಷ್ಣಪ್ಪ–ಹಾಡುಗಾರಿಕೆ, 4.00 ಮಹಿಳಾರಂಗ, 4.30ವೃತ್ತಿ ಮಾರ್ಗದರ್ಶನ–ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ ಕುರಿತು ಡೀನ್ ಡಾ.ವಿಷ್ಣುವರ್ಧನ್ ಅವರೊಂದಿಗೆ ಸಂದರ್ಶನ, 6.50 ಕೃಷಿರಂಗ–ಕಬ್ಬು ಹಾಗೂ ಭತ್ತದ ಬೇಸಾಯ ಕುರಿತು ಸಂವಾದದಲ್ಲಿ ಭಾಗವಹಿಸುವವರು ಎಂ.ವಿ.ರಮೇಶ್, ಎಂ.ಶಕುಂತಲಾ ಮತ್ತು ಎನ್.ಕೇಶವಮೂರ್ತಿ, 8.00 ಸಂಸದ್ ಸಮೀಕ್ಷಾ, 8.15 ವರ್ಣತಂತು ವ್ಯತ್ಯಾಸದ ಕಾಯಿಲೆಗಳು ಕುರಿತು ಮಾತನಾಡುತ್ತಾರೆ ಪ್ರೊ.ಎಸ್.ಮಾಲಿನಿ, 9.30 ಗಾನಲಹರಿ–ಪ್ರಸ್ತುತಿ ಶ್ರೀಕಾಂತ ಕುಲಕರ್ಣಿ, ಮಾಯಾ ರಾಮನ್, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ, 10.30 ಸವಿನೆನಪು

ಕಳುವಾದ 30 ಲಕ್ಷದ 135 ಮೊಬೈಲ್ ವೈಜ್ಞಾನಿಕ ವಿಧಾನದನ್ವಯ ಪತ್ತೆ; ವಾರಸುದಾರರಿಗೆ ಹಸ್ತಾಂತರ

ಮೈಸೂರು,ಆ.3(ಎಸ್‌ಬಿಡಿ)–ಸೆಂಟ್ರಲ್ ಎಕ್ಯೂಪ್ಮೆಂಟ್ ಐಡೆಂಟಿಟಿ ರಿಜಿಸ್ಟರ್(ಸಿಇಐಆರ್) ಪೋರ್ಟಲ್ ಮೂಲಕ ಮೈಸೂರು ನಗರ ಪೊಲೀಸರು ಪತ್ತೆಹಚ್ಚಿದ ಸುಮಾರು 30 ಲಕ್ಷ ರೂ. ಮೌಲ್ಯದ 135 ಮೊಬೈಲ್‌ಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಮೈಸೂರು ನಗರ ಸಿಇಎನ್(ಸೆನ್) ಕ್ರೈಂ ಪೊಲೀಸ್ ಠಾಣೆ ತಂಡ, ಸಿಇಐಆರ್ ಪೋರ್ಟಲ್ ಹಾಗೂ ನಗರಕ್ಕೆ ಸೀಮಿತವಾದ ಚಾಟ್‌ಬಾಟ್(ವಾಟ್ಸಆಪ್ ಮೆಸೇಜ್) ಮೂಲಕ ಮಾಹಿತಿ ಪಡೆದು ಕಳೆದುಹೋಗಿದ್ದ ಮೊಬೈಲ್‌ಗಳನ್ನು ಪತ್ತೆಹಚ್ಚಿದ್ದು, ಅವುಗಳನ್ನು ನಗರ ಪೊಲೀಸ್ ಆಯುಕ್ತರಾದ ಬಿ.ರಮೇಶ್ ತಮ್ಮ ಕಚೇರಿಯಲ್ಲಿ ಗುರುವಾರ ವಾರಸುದಾರರಿಗೆ ಒಪ್ಪಿಸಿದರು.

ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಬಿ.ರಮೇಶ್, ಸಿಇಐಆರ್ ಪೋರ್ಟಲ್‌ನಲ್ಲಿ 2022ರ ಸೆಪ್ಟೆಂಬರ್‌ನಿಂದ ಮೈಸೂರು ನಗರ ವ್ಯಾಪ್ತಿಯ ಒಟ್ಟು 3,075 ಮೊಬೈಲ್ ಕಳೆದು ಹೋಗಿರುವ ಬಗ್ಗೆ ದೂರು ದಾಖಲಾಗಿದ್ದು, ಈಗಿನ 135 ಸೇರಿ ಈವರೆಗೆ 270 ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದೆ. 2 ತಿಂಗಳ ಹಿಂದೆ ಸಿಇಐಆರ್ ಪೋರ್ಟಲ್ ಬಳಕೆ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಮೊ.ಸಂ.6363255135ಗೆ Hi(ಹಾಯ್) ಎಂದು ವಾಟ್ಸಾಪ್ ಮೆಸೇಜ್ ಮಾಡಿದರೆ ಲಭ್ಯವಾಗುವ ಲಿಂಕ್ ಮೂಲಕ ಸರಳವಾಗಿ ಮಾಹಿತಿ ದಾಖಲಿಸಬಹುದು ಎಂದು ಸಾರ್ವಜನಿಕರಿಗೆ ತಿಳಿಸಲಾಗಿತ್ತು. ಈ ಮುಖೇನ ದಾಖಲಾದ ದೂರುಗಳನ್ನು ಆಧರಿಸಿ, ಮೊಬೈಲ್‌ಗಳನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದರು.

ಹೊರ ರಾಜ್ಯಗಳಲ್ಲಿದ್ದವು: ಸದ್ಯ 135 ಮೊಬೈಲ್‌ಗಳನ್ನು ಪತ್ತೆಹಚ್ಚಿ, ವಾರಸುದಾರರಿಗೆ ನೀಡಲಾಗಿದೆ. ಇವುಗಳಲ್ಲಿ ಸುಮಾರು 30 ಮೊಬೈಲ್‌ಗಳು ಅಸ್ಸಾಂ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿದ್ದವು. ಇವೆಲ್ಲವನ್ನೂ ಕಳವು ಮಾಡಿ, ಬೇರೆ ರಾಜ್ಯಗಳಿಗೆ ಮಾರಾಟ ಮಾಡಲಾಗಿದೆ ಎಂದು ಹೇಳಲಾಗುವುದಿಲ್ಲ. ಪ್ರಯಾಣದ ಸಂದರ್ಭದಲ್ಲೂ ಕಳೆದುಕೊಂಡಿದ್ದಿರಬಹುದು ಎಂದು ಪೊಲೀಸ್ ಆಯುಕ್ತ ರಮೇಶ್ ಹೇಳಿದರು.

ಎಲ್ಲಾ ಪ್ರಕರಣ ಪೋರ್ಟಲ್‌ಗೆ: ಸಿಇಐಆರ್ ಪೋರ್ಟಲ್ ಕಾರ್ಯಾರಂಭಕ್ಕೂ ಮುನ್ನ ಮೈಸೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮೊಬೈಲ್ ಕಳೆದಿರುವ ಪ್ರಕರಣಗಳ ಮಾಹಿತಿಯನ್ನೂ ಪೋರ್ಟಲ್‌ಗೆ ದಾಖಲಿಸುವಂತೆ ಸೂಚನೆ ನೀಡಲಾಗಿದೆ. ಈ ಹಿಂದೆ ಕಳೆದಿರುವ ಮೊಬೈಲ್‌ನ ಐಎಂಇಐ ಸಂಖ್ಯೆಯನ್ನು ನಮೂದಿಸಿ, ಪರಿಶೀಲಿಸಬೇಕಿತ್ತು. ಆ ಸಂದರ್ಭದಲ್ಲಿ ಸದರಿ ಮೊಬೈಲ್ ಚಾಲನೆ (ಆನ್)ಯಲ್ಲಿದ್ದರೆ ಮಾತ್ರ ಪತ್ತೆ ಕಾರ್ಯ ಮುಂದುವರೆಸಬಹುದಿತ್ತು. ಇಲ್ಲದಿದ್ದರೆ ಕೆಲ ದಿನಗಳ ನಂತರ ಮತ್ತೆ ಇದೇ ಕ್ರಮ ಅನುಸರಿಸಬೇಕಿತ್ತು. ಪ್ರಕರಣಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಪರಿಣಾಮಕಾರಿಯಾಗಿ ಕ್ರಮ ವಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಸಿಇಐಆರ್ ಪೋರ್ಟಲ್‌ನಲ್ಲಿ ಒಮ್ಮೆ ಮಾಹಿತಿ ದಾಖಲಿಸಿದರೆ, ಯಾವಾಗ ಮೊಬೈಲ್ ಆನ್ ಮಾಡಿದರೂ ತಕ್ಷಣ ಸಂಬಂಧಪಟ್ಟ ಠಾಣೆಗೆ ಮಾಹಿತಿ ಲಭಿಸುತ್ತದೆ ಎಂದು ಪೊಲೀಸ್ ಆಯುಕ್ತರು ವಿವರಿಸಿದರು.

ಕೊರಿಯರ್ ಮಾಡುತ್ತಿದ್ದಾರೆ: ಕಳ್ಳತನ ಮಾಡಿದವರು ತಾವೇ ಮೊಬೈಲ್ ಬಳಸುವುದಿಲ್ಲ. ಅಪರಿಚಿತರು ಅಮಾಯಕರಿಗೆ ಮಾರಾಟ ಮಾಡುತ್ತಾರೆ. ಕಡಿಮೆ ಬೆಲೆಗೆ ಸೆಕೆಂಡ್ಸ್ ಮೊಬೈಲ್ ಸಿಗುತ್ತದೆ ಎಂದು ಅನೇಕರು ಕೊಳ್ಳುತ್ತಾರೆ. ಎಲ್ಲಾದರೂ ಮೊಬೈಲ್ ಸಿಕ್ಕರೆ ಕೆಲವರು ತಕ್ಷಣ ವಾರಸುದಾರರಿಗೆ ವಾಪಸ್ ನೀಡುವುದಿಲ್ಲ. ಆದರೆ ಬಳಸಲು ಆರಂಭಿಸಿದ ತಕ್ಷಣ ಪೋರ್ಟಲ್ ಮೂಲಕ ಮಾಹಿತಿ ಲಭ್ಯವಾಗುವುದರಿಂದ ನಮ್ಮ ಸಿಬ್ಬಂದಿ ಅವರನ್ನು ಸಂಪರ್ಕಿಸಿ ವಿಚಾರಿಸುತ್ತಾರೆ. ಅದು ಕಳುವಾಗಿರುವ ಮೊಬೈಲ್ ಅನ್ನು ಬಳಸುತ್ತಿದ್ದೀರಿ, ಸಂಬಂಧಪಟ್ಟವರಿಗೆ ತಲುಪಿಸಲು ಸಹಕಾರ ನೀಡಿ ಎಂದು ಕೇಳುತ್ತಾರೆ. ಹೀಗೆ ಹೇಳಿದಾಗ ಬಹುತೇಕರು ಕೊರಿಯರ್ ಮೂಲಕ ಮೊಬೈಲ್ ಕಳುಹಿಸಿಕೊಟ್ಟಿದ್ದಾರೆ. ಕಳುಹಿಸಲು ಅನುಕೂಲವಿಲ್ಲ ಎನ್ನುವುದಾದರೇ ನಮ್ಮವರೇ ಹೋಗಿ ಮೊಬೈಲ್ ಪಡೆದುಕೊಂಡು ಬರುತ್ತಾರೆ ಎಂದು ತಿಳಿಸಿದರು.

ಒಂದು ಗ್ಯಾಂಗ್ ಮೊಬೈಲ್ ಕಳ್ಳತನ ಮಾಡಿ, ಅದನ್ನು ಒಬ್ಬನಿಗೆ ನೀಡಿದ ಬಳಿಕ ಆತ ಐಎಂಇಐ ಸಂಖ್ಯೆ ಬದಲಿಸಿ, ತಮ್ಮದೇ ಜಾಲದಲ್ಲಿ ಮಾರಾಟ ಮಾಡುವಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆಹಚ್ಚಬಹುದು. ಆದರೆ ಪೋರ್ಟಲ್‌ನಲ್ಲಿ ದಾಖಲಾಗುವ ದೂರುಗಳಲ್ಲಿ ಕಳೆದುಕೊಂಡ ಪ್ರಕರಣಗಳೂ ಹೆಚ್ಚಾಗಿರುತ್ತವೆ. ಕದ್ದವನಿಂದ ಖರೀದಿಸಿದವರಿಗೂ ಆತನ ಬಗ್ಗೆ ಮಾಹಿತಿ ಇರುವುದಿಲ್ಲ. ಹಾಗಾಗಿ ಕಳೆದು ಹೋದ ಮೊಬೈಲ್‌ಗಳನ್ನು ಪತ್ತೆಹಚ್ಚಿ ವಾರಸುದಾರರಿಗೆ ನೀಡುವುದು ಮುಖ್ಯ ಉದ್ದೇಶವಾಗಿದೆ ಎಂದರು.

ಇದುವರೆಗೆ 270 ಮೊಬೈಲ್ ಪತ್ತೆ ಮಾಡಿದ ದಾಖಲೆ



ಮೊಬೈಲ್ ಕಳೆದರೆ ಹೀಗೆ ಮಾಡಿ...

ಮೊಬೈಲ್ ಕಳೆದರೆ ಕೂಡಲೇ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ. ನಂತರ **https://www.ceir.gov.in** ವೆಬ್‌ಸೈಟ್ ಸಂಪರ್ಕಿಸಿದರೆ ಪೋರ್ಟಲ್ ತೆರೆದುಕೊಳ್ಳುತ್ತದೆ. ಮೇಲ್ಭಾಗದಲ್ಲಿ ಕೆಂಪುಬಣ್ಣದ ಪಟ್ಟಿಯ ಮೇಲಿರುವ ಬ್ಲಾಕ್ ಸ್ಟಾಲನ್/ಲಾಸ್ಟ್ ಎಂಬುದರ ಮೇಲೆ ಕ್ಲಿಕ್ ಮಾಡಿ, ಅಗತ್ಯ ಮಾಹಿತಿ ದಾಖಲಿಸಬೇಕು. ಮೊಬೈಲ್ ಖರೀದಿಸಿ ದಾಖಲೆ(invoice), ದೂರು ಸ್ವೀಕೃತಿ, ಆಧಾರ್, ಡಿಎಲ್ ಇನ್ನಿತರ ಗುರುತಿನ ಚೀಟಿ, ಇ–ಮೇಲ್ ಐಡಿ, ಮೊಬೈಲ್ ಐಎಂಇಐ ಸಂಖ್ಯೆಯನ್ನು ದಾಖಲಿಸಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ಸರಳಗೊಳಿಸುವ ನಿಟ್ಟಿನಲ್ಲಿ ಮೈಸೂರು ನಗರ ಪೊಲೀಸರು ನೀಡಿರುವ **ಮೊ.ಸಂ. 6363255135**ಗೆ Hi(ಹಾಯ್) ಎಂದು ವಾಟ್ಸಾಪ್ ಮೆಸೇಜ್ ಮಾಡಿದರೆ ತಕ್ಷಣ ಪೋರ್ಟಲ್ ಲಿಂಕ್ ಕಳುಹಿಸಲಾಗುತ್ತದೆ. ನಂತರ ಪ್ರಾಥಮಿಕ ಮಾಹಿತಿಯನ್ನು ದಾಖಲಿಸುವ ಮೂಲಕ ದೂರು ಸಲ್ಲಿಸಬಹುದು. ದೂರಸಂಪರ್ಕದ ಉಪಕ್ರಮವಾದ ಸಿಇಐಆರ್ ಪೋರ್ಟಲ್ ಸೇವೆ ಕರ್ನಾಟಕದಲ್ಲಿ 2022ರ ಸೆ.6ರಿಂದ ಚಾಲ್ತಿಯಲ್ಲಿದೆ. ಆಗಿನಿಂದ ಮೈಸೂರು ನಗರ ವ್ಯಾಪ್ತಿಯ 3075 ಪ್ರಕರಣಗಳ ಮಾಹಿತಿ ದಾಖಲಿಸಲಾಗಿದ್ದು, ಸೆನ್ ಠಾಣೆ ಮೂಲಕ ಸದ್ಯ ಈಗಿನ 135 ಸೇರಿ ಈವರೆಗೆ 270 ಮೊಬೈಲ್ ಪತ್ತೆಹಚ್ಚಲಾಗಿದೆ.

ತಂಡಕ್ಕೆ ಪ್ರಶಂಸೆ: ಡಿಸಿಪಿಗಳ ಮಾರ್ಗದರ್ಶನ, ದೇವರಾಜ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ಸಿಇಎನ್ (ಸೆನ್) ಕ್ರೈಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ಎನ್.ಅನಿಲ್‌ಕುಮಾರ್, ಎಂ.ಎಲ್.ಸಿದ್ದೇಶ್, ಎಎಸ್‌ಐ ಸುಭಾಷ್‌ಚಂದ್ರ ಹಾಗೂ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸಿ, ಮೊಬೈಲ್‌ಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಪೊಲೀಸ್ ಆಯುಕ್ತ ಬಿ.ರಮೇಶ್ ಇದೇ ವೇಳೆ ಪ್ರಶಂಸಿಸಿದರು. ಡಿಸಿಪಿಗಳಾದ ಎಂ.ಮುತ್ತುರಾಜು, ಜಾಹ್ನವಿ, ದೇವರಾಜ ಎಸಿಪಿ ಶಾಂತಮಲ್ಲಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

ಹಸೆಮಣೆ ಏರಲು ಸಜ್ಜಾಗಿರುವ ಕೊಡಗಿನ ಜೋಡಿ ಹರ್ಷಿಕಾ–ಭುವನ್

ಆ.23, 24ರಂದು ಅಮ್ಮತ್ತಿಯಲ್ಲಿ ವಿವಾಹ ಮಹೋತ್ಸವ



ಮೈಸೂರು, ಆ.3– ಕನ್ನಡ ಚಿತ್ರರಂಗದ ಉದಯೋನ್ಮುಖ ನಟಿ ಕೊಡಗಿನ ಹರ್ಷಿಕಾ ಪೂಣಚ್ಚ ಹಾಗೂ ನಟ ಭುವನ್ ಪೊನ್ನಣ್ಣ ಆಗಸ್ಟ್ 24ರಂದು ಹಸೆಮಣೆ ಏರಲಿದ್ದಾರೆ.

ವಿರಾಜಪೇಟೆಯ ಅಮ್ಮತ್ತಿ ಕೊಡವ ಸಮಾಜದಲ್ಲಿ ಆ.23 ಹಾಗೂ 24ರಂದು ವಿವಾಹ ಮಹೋತ್ಸವ ನಿಗದಿಯಾಗಿದ್ದು, ಗುರುಹಿರಿಯರ ಸಮ್ಮುಖದಲ್ಲಿ ಕೊಡವ ಸಂಪ್ರದಾಯದಂತೆ ಹರ್ಷಿಕಾ–ಭುವನ್ ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಚಿತ್ರರಂಗ ಹಾಗೂ ರಾಜಕೀಯ ಕ್ಷೇತ್ರದ ಹಲವು ಗಣ್ಯರಿಗೆ ಆಮಂತ್ರಣ ನೀಡುತ್ತಿದ್ದಾರೆ.

'ಪಿಯುಸಿ' ಸಿನಿಮಾದ ಮೂಲಕ ಚಿತ್ರರಂಗಕ್ಕೆ ಪರಿಚಿತರಾದ ನಟಿ ಹರ್ಷಿಕಾ ಪೂಣಚ್ಚ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿ, ಗಮನ ಸೆಳೆದಿದ್ದಾರೆ. 'ತಮಸ್ಸು', 'ಜಾಕಿ' ಚಿತ್ರದಲ್ಲಿ ಅಮೋಘ ಅಭಿನಯದ ಮೂಲಕ ಸಿನಿರಸಿಕರ ಮನ ಗೆದ್ದಿದ್ದಾರೆ. ಇನ್ನು 'ಜಸ್ಟ್ ಮಾತ್ ಮಾತಲ್ಲಿ' ಚಿತ್ರದ ಮೂಲಕ 2010ರಲ್ಲಿ ಸಿನಿಮಾರಂಗ ಪ್ರವೇಶಿಸಿದ ಭುವನ್ ಪೊನ್ನಣ್ಣ, ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಕೂಲ್' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ಅಭಿನಯದ ನಡುವೆ ಕಿಚ್ಚ ಸುದೀಪ್ ನಿರೂಪಣೆಯ ಬಿಗ್ ಬಾಸ್ ಶೋನಲ್ಲಿ ಭಾಗವಹಿಸಿದ ಭುವನ್, ಆ ಮೂಲಕ ಕನ್ನಡಿಗರ ಮನೆ–ಮನ ಮುಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಡಗಿನವರೇ ಆದ ಹರ್ಷಿಕಾ ಹಾಗೂ ಭುವನ್ ನಡುವಿನ ಹಲವು ವರ್ಷಗಳ ಗೆಳೆತನ, ಪ್ರೀತಿಯಾಗಿ ಈಗ ಸತಿ–ಪತಿಯಾಗಲು ಸಜ್ಜಾಗಿದ್ದಾರೆ. ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಇಬ್ಬರೂ ಸಮಾಜಮುಖಿ ಕಾರ್ಯಗಳಲ್ಲೂ ಜೊತೆಯಾಗಿರುವುದು ವಿಶೇಷ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಅನೇಕರಿಗೆ ನೆರವಾಗುವ ಮೂಲಕ ಮಾದರಿಯಾಗಿದ್ದರು. ಇಬ್ಬರ ನಡುವೆ ಪ್ರೀತಿ ಇದೆ ಎಂದು ಹಲವು ಬಾರಿ ಗಾಸಿಪ್ ಹರಿದಾಡಿತ್ತಾದರೂ ಈ ಬಗ್ಗೆ ಬಹಿರಂಗವಾಗಿ ಹೇಳಿಕೊಂಡಿರಲಿಲ್ಲ. ಸದ್ಯ ಹರ್ಷಿಕಾ–ಭುವನ್ ಜೋಡಿ ವಿವಾಹ ನಿಗದಿಯಾಗಿದ್ದು, ಎರಡೂ ಕುಟುಂಬಗಳು ಮದುವೆಗೆ ತಯಾರಿ ಮಾಡಿಕೊಳ್ಳುತ್ತಿವೆ. ಇತ್ತೀಚೆಗೆ ಹರಿಪ್ರಿಯಾ–ವಸಿಷ್ಠ ಸಿಂಹ, ಅಭಿಷೇಕ್ ಅಂಬರೀಷ್–ಅವಿವಾ ಜೋಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದು, ಇದೀಗ ಹರ್ಷಿಕಾ–ಭುವನ್ ದಾಂಪತ್ಯ ಬದುಕಿಗೆ ಅಣಿಯಾಗುತ್ತಿದ್ದಾರೆ. ಒಟ್ಟಾರೆ ಕನ್ನಡ ಚಿತ್ರರಂಗದಲ್ಲಿ ಮದುವೆ ಸಂಭ್ರಮ ಮನೆ ಮಾಡಿದ್ದು, ಅಭಿಮಾನಿಗಳಲ್ಲೂ ಸಂತಸ ಮೂಡಿದೆ.

ಮಂಗಳೂರು ಜಂಕ್ಷನ್ ರೈಲು ನಿಲ್ದಾಣ: ವಿಶ್ವದರ್ಜೆಗೇರಿಸುವ ಕಾಮಗಾರಿಗೆ ಆ.6ರಂದು ಪ್ರಧಾನಿ ಮೋದಿ ಶಂಕುಸ್ಥಾಪನೆ



ಮಂಗಳೂರು, ಆ.3– ಮಂಗಳೂರು ಜಂಕ್ಷನ್ ರೈಲು ನಿಲ್ದಾಣವನ್ನು ವಿಶ್ವದರ್ಜೆಗೇರಿಸುವ ನಿಟ್ಟಿನಲ್ಲಿ ಕಾಮಗಾರಿಗೆ ಆಗಸ್ಟ್ 6ರಂದು ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಮಂಗಳೂರು ಜಂಕ್ಷನ್ ರೈಲು ನಿಲ್ದಾಣವನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಪ್ರಧಾನಿ ವಿಡಿಯೋ ಕಾನ್ಫರೆನ್ಸ್ ಮೂಲಕ ಶಿಲಾನ್ಯಾಸ ನೆರವೇರಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಮುಂದಾದ ಪ್ರಧಾನಿ ಮೋದಿ ಮತ್ತು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಕಟೀಲ್ ಧನ್ಯವಾದ ತಿಳಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2023–24ರ ಬಜೆಟ್ ಭಾಷಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಜಂಕ್ಷನ್, ಮಂಗಳೂರು ಸೆಂಟ್ರಲ್, ಬಂಟ್ವಾಳ ಮತ್ತು ಸುಬ್ರಹ್ಮಣ್ಯ ರೈಲು ನಿಲ್ದಾಣಗಳನ್ನು ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಮೇಲ್ದರ್ಜೆಗೇರಿಸುವುದಾಗಿ ಘೋಷಿಸಿದ್ದರು ಎಂದು ಅವರು ಉಲ್ಲೇಖಿಸಿದರು. ಮಂಗಳೂರು ಜಂಕ್ಷನ್ ನಿಲ್ದಾಣವನ್ನು 19.32 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಈ ಯೋಜನೆಯಡಿ ಇತರ ರೈಲು ನಿಲ್ದಾಣಗಳ ಅಭಿವೃದ್ಧಿಯನ್ನು ಶೀಘ್ರದಲ್ಲೇ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.







ಎರಡು ದಿನಗಳ ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸೌಜನ್ಯ ಭೇಟಿಯಾದರು. ಈ ವೇಳೆ ರಾಜ್ಯಕ್ಕೆ ಬರಬೇಕಿರುವ ಜಿಎಸ್‌ಟಿ ಬಾಕಿ ಸೇರಿದಂತೆ ಹಲವು ಹಣಕಾಸಿನ ಯೋಜನೆಗಳ ಸಂಬಂಧ ಚರ್ಚೆ ನಡೆಸಿದರು. ಅವರೊಂದಿಗೆ ರಾಜ್ಯದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್ ಇದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ(ಮಧ್ಯದ ಚಿತ್ರ), ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ (ಬಲಚಿತ್ರ) ಅವರನ್ನೂ ಸಿದ್ದರಾಮಯ್ಯ ಬೆಂಗಳೂರಿಗೆ ಮರಳುವ ಮುನ್ನ ಭೇಟಿಯಾಗಿ, ಸಮಾಲೋಚನೆ ನಡೆಸಿದರು.



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಸದಿಲ್ಲಿಯಲ್ಲಿ ಭೇಟಿಯಾಗಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಮುಖಂಡ ಎಂ.ಅರವಿಂದ ಇತರರಿದ್ದರು.

ಉಡುಪಿ ಕಾಲೇಜು ವಿಡಿಯೋ ಪ್ರಕರಣ: ಎಸ್‌ಐಟಿ ತನಿಖೆ ಕೋರಿ ರಾಜ್ಯಪಾಲರ ಭೇಟಿಗೆ ಬಿಜೆಪಿ ನಿರ್ಧಾರ

ಬೆಂಗಳೂರು, ಆ.3– ಉಡುಪಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ವಿಡಿಯೋ ರೆಕಾರ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆಗೆ ಒತ್ತಾಯಿಸಲು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಬಿಜೆಪಿ ಶಾಸಕರು ಶುಕ್ರವಾರ ರಾಜ್ಯಪಾಲ ತಾವರ ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಲಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ, ಬಿಜೆಪಿ ಎಂಎಲ್‌ಸಿ ಕೋಟ ಶ್ರೀನಿವಾಸ ಪೂಜಾರಿ, ಎರಡು ಜಿಲ್ಲೆಗಳ ಎಲ್ಲಾ ಶಾಸಕರು ಮತ್ತು ಎಂಎಲ್‌ಸಿಗಳು ಶುಕ್ರವಾರ ಮಧ್ಯಾಹ್ನ 12.30ಕ್ಕೆ ರಾಜ ಭವನದಲ್ಲಿ ರಾಜ್ಯಪಾಲರನ್ನು ಭೇಟಿ ಯಾಗುತ್ತಿದ್ದಾರೆ ಎಂದರು. ಪ್ರಕರಣವನ್ನು ನಿಭಾಯಿಸಿದ ರೀತಿಯ ಬಗ್ಗೆ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ದೂರು ಸಲ್ಲಿಸಲಾಗುವುದು. ಡಿವೈಎಸ್ಪಿ ದರ್ಜೆಯ ಅಧಿಕಾರಿಯೊಬ್ಬರು ಪ್ರಕರಣವನ್ನು ನಿರ್ವಹಿಸುತ್ತಿದ್ದಾರೆ ಎಂದು ಸರ್ಕಾರ ಹೇಳಿದೆ. ಆದರೆ, ಅವರು ಸರ್ಕಾರ ಏನು ಹೇಳಿದರೂ ಕೇಳಬೇಕಾಗುತ್ತದೆ. ಆದ್ದರಿಂದ ಪ್ರಕರಣವನ್ನು ಎಸ್‌ಐಟಿಗೆ ಹಸ್ತಾಂತರಿಸಿ ತನಿಖೆ ನಡೆಸಬೇಕೆಂದು ನಾವು ಬಯಸುತ್ತೇವೆ ಎಂದು ಪೂಜಾರಿ ಹೇಳಿದರು.

ವಾಶ್ ರೂಂನಲ್ಲಿ ಹಿಂದೂ ಯುವತಿಯರ ವಿಡಿಯೋ ರೆಕಾರ್ಡ್ ಮಾಡಿದ ಮೂವರು ಮುಸ್ಲಿಂ ಯುವತಿಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಇದು ಹಿಂದೂ ಹೆಣ್ಣು ಮಕ್ಕಳ ಮೇಲಿನ ಸಂಘಟಿತ ಅಪರಾಧ ಎಂದು ಬಿಜೆಪಿ ಮುಖಂಡರು ಕಿಡಿ ಕಾರಿದ್ದಾರೆ. ಈ ವಿಷಯದ ಬಗ್ಗೆ ಧ್ವನಿ ಎತ್ತಿದ್ದಕ್ಕಾಗಿ ಮಹಿಳಾ ಕಾರ್ಯಕರ್ತೆ ರಶ್ಮಿ ಸಾಮಂತ್ ಅವರಿಗೆ ಪೊಲೀಸರು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಲಂಚ ಸ್ವೀಕಾರ: ಇಬ್ಬರ ಬಂಧನ; ಓರ್ವ ಪರಾರಿ

ಬೆಂಗಳೂರು, ಆ.3– ಬನಶಂಕರಿಯ ಕರಿಸಂದ್ರದ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ಸಿಬ್ಬಂದಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರಿಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಪ್ರಮುಖ ಆರೋಪಿ ರಾಜಗೋಪಾಲ್ ತಲೆಮರೆಸಿಕೊಂಡಿದ್ದಾನೆ.

ಲಕ್ಷ ರೂ. ಲಂಚ ಸ್ವೀಕರಿಸುವಾಗ ಬಿಬಿಎಂಪಿ ಕಂದಾಯ ಸಿಬ್ಬಂದಿ ಲೋಕಾ ಬಲೆಗೆ ಬಿದ್ದಿದ್ದು, ಇಬ್ಬರನ್ನು ಬಂಧಿಸಲಾಗಿದ್ದು, ಒಬ್ಬ ಪರಾರಿಯಾಗಿದ್ದಾನೆ. ವಾರ್ಡ್ ನಂ.166ರ ರೆವೆನ್ಯೂ ಇನ್ಸ್‌ಪೆಕ್ಟರ್ ರಾಜಗೋಪಾಲ್ ಪರಾರಿಯಾಗಿದ್ದು, ಎಫ್‌ಡಿಎ ರಾಘವೇಂದ್ರ, ಡಾಟಾ ಎಂಟ್ರಿ ಆಪರೇಟರ್ ಸುರೇಶ್ ದತ್ತಾರನ್ನು ಅಧಿಕಾರಿಗಳು ಬಂಧಿಸಿದ್ದಾರೆ. ಖಾತಾ ಬದಲಾವಣೆ ಮಾಡಿಕೊಡಲು ಮಾಚೋಹಳ್ಳಿಯ ಅರುಣ್ ಎಂಬಾತನಿಂದ 1 ಲಕ್ಷದ 25 ಸಾವಿರ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಮುಂಗಡವಾಗಿ 1 ಲಕ್ಷ ಹಣ ಸ್ವೀಕರಿಸುವಾಗ ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾರೆ. ಪೊಲೀಸರ ಪ್ರಕಾರ, ಮಾಚೋಹಳ್ಳಿಯ ಅರುಣ್‌ಕುಮಾರ್ ಕರಿಸಂದ್ರದಲ್ಲಿರುವ ಬಿಬಿಎಂಪಿ ವಾರ್ಡ್ ಕಚೇರಿಯಲ್ಲಿ ಖಾತಾ ವರ್ಗಾವಣೆಗೆ ಅರ್ಜಿ ಸಲ್ಲಿಸಿದರು. ಕಂದಾಯ ನಿರೀಕ್ಷಕ ರಾಜಗೋಪಾಲ್ ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಅರುಣ್‌ಕುಮಾರ್ ಅವರಿಂದ ಹಣ ವಸೂಲಿ ಮಾಡಲು ಇಬ್ಬರು ಸಹೋದ್ಯೋಗಿಗಳನ್ನು ಕಳುಹಿಸಿದ್ದರು.

ಸೌಜನ್ಯ ಹತ್ಯೆ ಮರು ತನಿಖೆಗೆ ಆಗ್ರಹಿಸಿ

ಮೈಸೂರಲ್ಲಿ ಒಕ್ಕಲಿಗರ ಸಂಘಟನೆಗಳ ಒಕ್ಕೂಟದಿಂದ ಭಾರೀ ಮೌನ ಪ್ರತಿಭಟನೆ

- ನಿಜವಾದ ಅಪರಾಧಿಗೆ ಶಿಕ್ಷೆ ಆಗಲೇಬೇಕು
- ಈ ಸಂಬಂಧ ಇಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ



ಮೈಸೂರು,ಆ.3(ಎಂಕೆ)–ಸೌಜನ್ಯ ಹತ್ಯೆ ಪ್ರಕರಣದ ಮರು ತನಿಖೆಗೆ ಒತ್ತಾಯಿಸಿ ಒಕ್ಕಲಿಗರ ಸಂಘಟನೆಗಳ ಒಕ್ಕೂಟದ ವತಿಯಿಂದ ಕಪ್ಪುಪಟ್ಟಿ ಧರಿಸಿ, ಮೌನ ಪ್ರತಿಭಟನೆ ನಡೆಸಲಾಯಿತು. ಗುರುವಾರ ಸಂಜೆ ಮೈಸೂರು ಅರಮನೆ ಉತ್ತರದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಜಮಾವಣೆಗೊಂಡ ಒಕ್ಕೂಟದ ನೂರಾರು ಮಂದಿ ಹಣೆಗೆ ಕಪ್ಪುಪಟ್ಟಿ ಕಟ್ಟಿಕೊಂಡು, ಕ್ಯಾಂಡಲ್ ಲೈಟ್ ಹಿಡಿದು ಗಾಂಧಿ ವೃತ್ತದವರೆಗೆ ಕಾಲ್ನಡಿಗೆ ಜಾಥಾ ನಡೆಸುವ ಮೂಲಕ ಮೌನ ಪ್ರತಿಭಟನೆ ನಡೆಸಿದರು.

2012ರ ಅ.9ರಂದು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ನೇತ್ರಾವತಿ ನದಿ ದಡದ ಅರಣ್ಯ ಪ್ರದೇಶದಲ್ಲಿ ಅತ್ಯಾಚಾರವೆಸಗಿ, ಹತ್ಯೆ ಮಾಡಲಾದ ಕುಮಾರಿ ಸೌಜನ್ಯಳ ಪ್ರಕರಣ ಇಂದು ರಾಷ್ಟ್ರ ವ್ಯಾಪಿ ಸುದ್ದಿ ಮಾಡುತ್ತಿದೆ. ಸೌಜನ್ಯಳ ಪೋಷಕರು ಪೊಲೀಸರು ಪ್ರಕರಣದಲ್ಲಿ ಆರೋಪಿ ಎಂದು ಬಂಧಿಸಿದ ಸಂತೋಷರಾವ್ ಅಮಾಯಕ. ಆರೋಪಿಗಳು ಬೇರೆಯೇ ಇದ್ದಾರೆ ಎಂದು ಹೇಳಿದಾಗಿಯೂ ಪ್ರಕರಣವನ್ನು ಸಂತೋಷ್‌ರಾವ್ ಮೇಲೆ ಕೇಂದ್ರೀಕರಿಸಿ ತನಿಖೆ ನಡೆಸಲಾಯಿತು. ಆದರೆ ನ್ಯಾಯಾಲಯ ಸಂತೋಷ ರಾವ್ ನಿರಪರಾಧಿ. ಈ ಕೃತ್ಯಕ್ಕೂ ಆತನಿಗೂ ಸಂಬಂಧವಿಲ್ಲ ಎಂದು ಹೇಳಿದೆ. ಹಾಗಾದರೆ ನಿಜವಾದ ಅಪರಾಧಿ ಯಾರು? ಹಾಗಾಗಿ ಸೌಜನ್ಯ ಹತ್ಯೆ ಪ್ರಕರಣವನ್ನು ಮರು ತನಿಖೆಗೆ ಒಳಪಡಿಸಬೇಕು. ನಿಜವಾದ ಅಪರಾಧಿಗೆ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್ ಮಾತನಾಡಿ, ಪ್ರಕರಣ ನಡೆದು 12 ವರ್ಷಗಳಾದರೂ ಇಂದಿಗೂ ನಿಜವಾದ ಆರೋಪಿ ಪತ್ತೆಯಾಗದಿರುವುದು ದುರ್ದೈವ. ಈ ಪ್ರಕರಣ ಸಂಬಂಧ ಪೊಲೀಸ್ ಇಲಾಖೆ ಸರಿಯಾಗಿ ತನಿಖೆ ನಡೆಸದೆ ಅಮಾಯಕ ವ್ಯಕ್ತಿಯೂ ಶಿಕ್ಷೆ ಅನುಭವಿಸುವಂತಾಗಿದೆ. ಆದ್ದರಿಂದ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ತಪ್ಪಿತಸ್ಥ ಎಷ್ಟೇ ಪ್ರಭಾವಿಯಾಗಿದ್ದರೂ ಶಿಕ್ಷೆಯಾಗಲೇಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿಗಳಿಗೆ ಮನವಿ: ಇಂದು ಮೌನ ಪ್ರತಿಭಟನೆ ಮೂಲಕ ನ್ಯಾಯಕ್ಕಾಗಿ ಆಗ್ರಹಿಸಿದ್ದು, ಶುಕ್ರವಾರ ಜಿಲ್ಲಾಧಿಕಾರಿಗಳಿಗೆ ಒಕ್ಕಲಿಗರ ಸಂಘಟನೆಗಳ ಒಕ್ಕೂಟದ ವತಿಯಿಂದ ಮನವಿ ಸಲ್ಲಿಸಲಾಗುವುದು. ತನಿಖೆ ವ್ಯವಸ್ಥಿತವಾಗಿ ನಡೆದಿದ್ದರೆ ಇಷ್ಟೊತ್ತಿಗೆ ಅಪರಾಧಿ ಯಾರೆಂಬುದು ತಿಳಿಯುತ್ತಿತ್ತು. ಸೌಜನ್ಯ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಮರು ತನಿಖೆ ಮಾಡಿಸಬೇಕು ಎಂದು ಮನವಿ ಮಾಡಿದರು.

ರಾಜ್ಯಮಟ್ಟದ ಹೋರಾಟ: ನಗರ ಪಾಲಿಕೆ ಸದಸ್ಯೆ ಪ್ರೇಮಾಶಂಕರೇಗೌಡ ಮಾತನಾಡಿ, ಸೌಜನ್ಯ ಹತ್ಯೆ ಪ್ರಕರಣ ಸಮಗ್ರ ತನಿಖೆಯಾಗಬೇಕು. ಒಂದು ವೇಳೆ ಸರ್ಕಾರ ಪ್ರಕರಣದ ಮರು ತನಿಖೆಗೆ ಸ್ಪಂದಿಸದಿದ್ದರೆ, ರಾಜ್ಯಮಟ್ಟದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಒಕ್ಕಲಿಗ ಸಮುದಾಯದ ಮುಖಂಡರಾದ ಕವೀಶ್‌ಗೌಡ, ಪ್ರಶಾಂತ್‌ಗೌಡ, ರಾಜ್ಯ ಮಹಿಳಾ ಆಯೋಗ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಗಂಗಾಧರ್, ಮಂಜೇಗೌಡ, ತೇಜಸ್ ಲೋಕೇಶ್‌ಗೌಡ, ಮರಿಸ್ವಾಮಿ, ಚೇತನ್, ಲತಾ ರಂಗನಾಥ್, ಚುಂಚಾದ್ರಿ ಮಹಿಳಾ ಬಳಗದ ಅಧ್ಯಕ್ಷೆ ವಸಂತ ಮನೀಶ್, ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ರಾಜ್‌ಕುಮಾರ್, ಸಂಘದ ನಿರ್ದೇಶಕಿ ಸುಶೀಲಾ ನಂಜಪ್ಪ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ದೇವರು ನಿನಗೆ ಎರಡು ಕಣ್ಣು ಕೊಟ್ಟಿದ್ರೂ ಅಕ್ಕಿಯಲ್ಲಿ ಇರೋ ಕಲ್ಲು ಆರಿಸಲಿಕ್ಕೆ ಆಗೋಲ್ವಾ?

ಹೆಂಡತಿ : ದೇವರು ಕೊಟ್ಟ ಒಂದಲ್ಲ, ಎರಡಲ್ಲ, ಮೂವತ್ತೆರಡು ಹಲ್ಲುಗಳು ಇವೆಯಲ್ಲಾ... ಅಗಿಯೋದಿಕ್ಕೆ ಆಗೋಲ್ವಾ?

ಮೈಸೂರು ಮಿತ್ರ
ಶುಕ್ರವಾರ, 4 ಆಗಸ್ಟ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪರರಿಗೆ ಹೇಳಿದ ಕೆಲಸ ಭರವಸೆಯುದಲ್ಲ. ಸ್ವಂತಕ್ಕೆ ಟೊಂಕ ಕಟ್ಟಿಕೊಂಡು ನಿಂತರೆ ಮಾತ್ರ ಅದು ಸಾಧ್ಯ –ಪಂಚತಂತ್ರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಡ್ಡಿ ಇದ್ದುದನ್ನೂ ಗುಡ್ಡ ಮಾಡಿದರು

ನಿಮ್ಮ ಪತ್ರಗಳು

ರಾಜ್ಯದ ಮೊದಲ ಸರ್ಕಾರಿ ಮಹಿಳಾ ಕಾವಾಡಿಯಾಗಿ ನೇಮಕ ಸ್ವಾಗತಾರ್ಹ

ಮಾನ್ಯರೆ,



ಆಸ್ಕರ್ ಪ್ರಶಸ್ತಿ ಪುರಸ್ಕೃತ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರದ ಪ್ರೇರಣೆಯಾಗಿದ್ದ ಬೆಳ್ಳಿ ಅವರನ್ನು ಮೊದಲ ಸರ್ಕಾರಿ ಮಹಿಳಾ ಕಾವಾಡಿಯಾಗಿ ತಮಿಳುನಾಡು ಸರ್ಕಾರ ನೇಮಕ ಮಾಡಿದೆ. ಸರ್ಕಾರ ತನ್ನ ಹೇಳಿಕೆಯಲ್ಲಿ ಬೆಳ್ಳಿ ಅವರು ಆನೆ ಮರಿಗಳನ್ನು ಸಾಕಿ ಸಲುಹಿದ ಪರಿಗೆ ರಾಜ್ಯದ ಮೊದಲ ಸರ್ಕಾರಿ ಮಹಿಳಾ ಕಾವಾಡಿಯಾಗಿ ನೇಮಕ ಮಾಡಿದೆ. ತಾತ್ಕಾಲಿಕ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದ ಬೆಳ್ಳಿ, ಈಗ ರಾಜ್ಯದ ಮೊದಲ ಸರ್ಕಾರಿ ಮಹಿಳಾ ಕಾವಾಡಿಯಾಗಿ ನೇಮಕಗೊಂಡಿದ್ದಾರೆ. ಇವರು ನೀಲಗಿರಿ ಜಿಲ್ಲೆಯಲ್ಲಿರುವ ಮದುಮಲೈ ಆನೆ ಬಿಡಾರದಲ್ಲಿ ಕೆಲಸ ನಿರ್ವಹಿಸಲಿದ್ದಾರೆ. ಬೆಳ್ಳಿ ಅವರಿಗೆ ಅಭಿನಂದನೆಗಳು

ದಿ ಎಲಿಫೆಂಟ್ ವಿಸ್ಪರರ್ಸ್ 2022ರ ಭಾರತೀಯ ಸಾಕ್ಷ್ಯಚಿತ್ರವಾಗಿದ್ದು, ಸಾಕ್ಷ್ಯಚಿತ್ರ ನಿರ್ಮಾಪಕ ಕಾರ್ತಿಕಿ ಗೊನ್ಸಾಲ್ವೆಸ್ ಅವರ ನಿರ್ದೇಶನದ ಚೊಚ್ಚಲ ಚಿತ್ರವಾಗಿದೆ. ಈ ಸಾಕ್ಷ್ಯಚಿತ್ರವು ದಂಪತಿಗಳು ಮತ್ತು ಅವರ ಆರೈಕೆಗೆ ಒಪ್ಪಿಸಲಾದ ಅನಾಥ ಮರಿ ಆನೆ ರಘು ನಡುವೆ ಬೆಳೆಯುವ ಬಾಂಧವ್ಯದ ಕುರಿತಾಗಿದೆ. ಇದು ಆಸ್ಕರ್‌ನ ಅತ್ಯುತ್ತಮ ಸಾಕ್ಷ್ಯಚಿತ್ರ ಕಿರುಚಿತ್ರಕ್ಕಾಗಿ ಅಕಾಡೆಮಿ ಪ್ರಶಸ್ತಿಯನ್ನು ಗೆದ್ದ ಮೊದಲ ಭಾರತೀಯ ಚಲನಚಿತ್ರವಾಗಿದೆ.

–ಎನ್. ಅಂಕರಾಜು, ಸಹಾಯಕ ಗ್ರಂಥಪಾಲಕ, ಮೈಸೂರು

ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ತಾರತಮ್ಯ

ಮಾನ್ಯರೆ,



ಬುಧವಾರ ನಂಜನಗೂಡಿನ ಶ್ರೀಕಂಠೇಶ್ವರನ ದರ್ಶನಕ್ಕೆ ಸುಮಾರು 11.30ರ ಸಮಯದಲ್ಲಿ ಹೋಗಿದ್ದಾಗ ಅಲ್ಲಿರುವ ಸಿಬ್ಬಂದಿ ಹಾಗೂ ಕಚೇರಿಯವರು ಸಾರ್ವಜನಿಕರ ಸರದಿ ಸಾಲಿನಲ್ಲಿ 30ಕ್ಕೂ ಅಧಿಕ ಫ್ಯಾನ್‌ಗಳು ಇದ್ದರೂ ಸಹ ಯಾವುದೇ ಫ್ಯಾನ್ ಆನ್ ಮಾಡಿರಲಿಲ್ಲ. ಇದರಿಂದ (ಆದರೆ ಗರ್ಭಗುಡಿಯ ಅಕ್ಕ–ಪಕ್ಕ ಹಾಗೂ ಪುರೋಹಿತ ಶಾಹಿಗಳ ಹತ್ತಿರವಿದ್ದ ಎಲ್ಲಾ ಫ್ಯಾನ್‌ಗಳು ಆನ್ ಆಗಿದ್ದವು.) 1000ಕ್ಕೂ ಅಧಿಕ ಭಕ್ತರು ಹಾಗೂ ಒಂದು ವರ್ಷದೊಳಗಿನ ಸುಮಾರು 60ಕ್ಕೂ ಹೆಚ್ಚು ಮಕ್ಕಳು ಉಷ್ಣತೆಯ ತಾಪಮಾನ ತಾಳಲಾರದೆ ಸತತ 2 ಗಂಟೆಗಳ ಕಾಲ ನಲುಗಿ ಕಿರುಚಾಡುತ್ತಾ ಸತತ ಅಳುತ್ತಿದ್ದರಿಂದ ಇವರನ್ನು ಸಮಾಧಾನ ಮಾಡುವುದರಲ್ಲೇ ಸಮಯ ವ್ಯರ್ಥವಾಗಿ ಸರಿಯಾದ ದರ್ಶನ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಭಕ್ತಾದಿಗಳಿಂದ ಸನ್ನಿಧಾನಕ್ಕೆ ಕೋಟ್ಯಾಂತರ ರೂಪಾಯಿ ಹಣ ಬರುತ್ತಿದ್ದರೂ ಸಹ ಇದರ ಲಾಭವನ್ನು ಗರ್ಭಗುಡಿ ಅಕ್ಕ–ಪಕ್ಕದವರು ಮಾತ್ರ ಪಡೆಯುತ್ತಿರುತ್ತಾರೆ. ಈ ವಿಚಾರವಾಗಿ ಕಚೇರಿಯಲ್ಲಿ ಕೇಳಿದಾಗ ನೀರಸ ಪ್ರತಿಕ್ರಿಯೆ ನೀಡಿರುತ್ತಾರೆ. ದಯವಿಟ್ಟು ಈ ತಾರತಮ್ಯವನ್ನು ಹೋಗಲಾಡಿಸಿ ಸಂಬಂಧಪಟ್ಟವರು ಎಲ್ಲರಿಗೂ ಅನುಕೂಲ ಮಾಡಿಕೊಡಬೇಕಾಗಿ ವಿನಂತಿ.

–ಅನಿಲ್ ಕುಮಾರ್, ನಂಜುಂಡೇಶ್ವರನ ಭಕ್ತ, ಮೈಸೂರು

ಚಾಮುಂಡಿಬೆಟ್ಟದ ಪ್ರಾಧಿಕಾರದ ಅಧ್ಯಕ್ಷರಾಗಿ ವೀರೇಂದ್ರ ಹೆಗ್ಗಡೆಯವರನ್ನು ನೇಮಿಸಲಿ

ಮಾನ್ಯರೆ,

ರಾಜ್ಯ ಸರ್ಕಾರ ಚಾಮುಂಡಿಬೆಟ್ಟದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಸ್ವಾಗತಾರ್ಹ. ಧಾರ್ಮಿಕ ಕೇಂದ್ರ ಅನಿಸಿಕೊಂಡಿರುವ ಚಾಮುಂಡಿಬೆಟ್ಟಕ್ಕೆ ತನ್ನದೇ ಆದ ಇತಿಹಾಸವಿದೆ. ಅಭಿವೃದ್ಧಿ ಎಂದರೆ ಕೇವಲ ಕಾಂಕ್ರೀಟ್‌ನಿಂದ ಕೂಡಿದ್ದಲ್ಲ. ಅದು ಇತಿಹಾಸ ಉಳಿಸಿಕೊಂಡು ಜನಪರವಾಗಿ ಧಾರ್ಮಿಕ ಭಾವನೆಗೆ ಧಕ್ಕೆ ಆಗದ ರೀತಿ ಇರಬೇಕು. ಇಂತಹ ಕಾಳಜಿವುಳ್ಳವರು ಹಾಗೂ ಇದರ ಬಗ್ಗೆ ಅನುಭವವಿರುವವರು ಈಗಾಗಲೇ ಮಾಡಿರುವಂತಹವರು ದೇವಸ್ಥಾನ, ಕೆರೆ, ಕಲ್ಯಾಣಿ, ಪರಿಸರ, ಪ್ರಕೃತಿ, ಜೀವ ಸಂಕುಲದ ಬಗ್ಗೆ ಅರಿವಿರಬೇಕು. ಇದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳವೇ ಮಾದರಿ. ಹಾಗಾಗಿ ವೀರೇಂದ್ರ ಹೆಗ್ಗಡೆಯವರನ್ನು ಚಾಮುಂಡಿಬೆಟ್ಟದ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡುವುದು ಸೂಕ್ತ.

–ರಾಜಶೇಖರ್, ಕುವೆಂಪುನಗರ, ಮೈಸೂರು.

ಯಾವುದು ಸರಿ?

ಮಾನ್ಯರೆ,

ನನ್ನ ಮನೆಯಲ್ಲಿ ಮೂರು ಮೀಟರ್ ಇದೆ. ಎಲ್ಲಾ ನನ್ನ ಹೆಸರಲ್ಲೇ ಇದೆ. ಅದರಲ್ಲಿ ಎರಡು ಮೀಟರ್‌ನ ವಿದ್ಯುತ್ ನಾನು ಉಪಯೋಗಿಸುತ್ತಿದ್ದು, ಒಂದನ್ನು ಬಾಡಿಗೆದಾರರು ಉಪಯೋಗಿಸುತ್ತಿದ್ದಾರೆ. ಗೃಹಜ್ಯೋತಿ ಉಚಿತ ಯೋಜನೆಯಲ್ಲಿ ಕುವೆಂಪುನಗರದಲ್ಲಿನ CESCನಲ್ಲಿ ನೋಂದಾಯಿಸಲು ಹೋಗಿದ್ದೆ. ಅವರು ಒಂದು ಮೀಟರ್‌ಗೆ ಮಾತ್ರ ಈ ಸೌಲಭ್ಯವಿದೆ. ಉಳಿದಿದ್ದಕ್ಕೆ ಕೊಡಲು ಆಗುವುದಿಲ್ಲ ಎಂದು ಹೇಳಿದರು. ಈಗ ಬಾಡಿಗೆದಾರರು ಈ ಸೌಲಭ್ಯದಿಂದ ವಂಚಿತರಾಗುತ್ತಾರೆ. ಇದ್ಯಾವ ನ್ಯಾಯ ತಿಳಿಯಲಿಲ್ಲ. CESCOM ಅಧಿಕಾರಿಗಳು ಈ ಬಗ್ಗೆ ವಿಚಾರಿಸಿ ಗ್ರಾಹಕರಿಗೆ ಆಗುವ ಅನ್ಯಾಯವನ್ನು ತಪ್ಪಿಸಬೇಕು ಎಂದು ಮನವಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ, ಮೈಸೂರು.

ಜೆಟ್ಟಿಹುಂಡಿಯಲ್ಲಿ ದಲಿತ ಜನಾಂಗಕ್ಕೆ ಸ್ಮಶಾನ ಕಲ್ಪಿಸಿ

ಮಾನ್ಯರೆ,

ಮೈಸೂರು ತಾಲೂಕು ಜೆಟ್ಟಿಹುಂಡಿ ಗ್ರಾಮದಲ್ಲಿ ಸುಮಾರು 110 ದಲಿತ ಜನಾಂಗದ ಕುಟುಂಬಗಳು ವಾಸಿಸುತ್ತಿದ್ದು, ಸ್ಮಶಾನವಿಲ್ಲದೆ ತುಂಬಾ ತೊಂದರೆಯಾಗಿದೆ. ಈ ಸಂಬಂಧ ಹಲವಾರು ಬಾರಿ ಕ್ಷೇತ್ರದ ಶಾಸಕರು, ಅಧಿಕಾರಿಗಳಿಗೆ ಮನವಿ ಮಾಡಿದರೂ ಇದುವರೆಗೆ ಸ್ಮಶಾನ ಭಾಗ್ಯ ಕಲ್ಪಿಸಿಲ್ಲ. ಪಂಚಾಯಿತಿ ಅಧಿಕಾರಿಗಳನ್ನು ಕೇಳಿದರೆ ಗ್ರಾಮದಿಂದ 8 ಕಿಲೋಮೀಟರ್ ದೂರದಲ್ಲಿರುವ ಎಮ್ಮೆಕೆರೆ ಕಟ್ಟೆ ಜಾಗವನ್ನು ತೋರಿಸುತ್ತಾರೆ. ಕಾಲು ನಡಿಗೆಯಿಂದ ಶವ ಸಾಗಿಸಲು ಸಾಧ್ಯವಾಗುವುದಿಲ್ಲ. ಅಲ್ಲಿಗೆ ಹೋಗಬೇಕಾದರೆ ಸವರ್ಣೀಯರ ಬೀದಿ, ಅವರ ಜಮೀನಿನ ಮೇಲೆ ಹೋಗಬೇಕಾಗಿರುವುದರಿಂದ ಅವರು ನಮಗೆ ಅವಕಾಶ ಮಾಡಿಕೊಡುವುದಿಲ್ಲ. ಆದ್ದರಿಂದ ಗ್ರಾಮದ ಪಕ್ಕದಲ್ಲಿರುವ ಮೈಸೂರು–ಗದ್ದಿಗೆ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಹೊಸಕೆರೆ ಜಾಗವನ್ನು ಸ್ಮಶಾನಕ್ಕೆ ಕಲ್ಪಿಸಿಕೊಡುವಂತೆ ಮನವಿ.


–ಹೆಚ್. ಮಣಿಕಂಠ, ಜೆಟ್ಟಿಹುಂಡಿ ಗ್ರಾಮ, ಮೈಸೂರು ತಾ.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಮತ್ತೆ ಮುನ್ನೆಲೆಗೆ ಬಂದ ತರಕಾರಿ ರಾಜಕೀಯ



ಕಳೆದ ತಿಂಗಳಿಂದೀಚೆಗೆ ತರಕಾರಿಗಳ ಬೆಲೆ ವಿಶೇಷವಾಗಿ ಉತ್ತರ ಭಾರತದಲ್ಲಿ ಏರಿಕೆಯಾಗುತ್ತಿದ್ದು, ನಿರೀಕ್ಷೆಯಂತೆ ಮತ್ತೊಮ್ಮೆ ಇದೊಂದು ಚುನಾವಣಾ ವಿಷಯವೇ ಆಗುವುದರಲ್ಲಿದೆ. ತರಕಾರಿಗಳು ನಮ್ಮ ಆರೋಗ್ಯಕ್ಕೆ ಮಾತ್ರವಲ್ಲ ರಾಜಕೀಯಕ್ಕೂ ಒಳ್ಳೆಯ ಸರಕು. ಪ್ರಸ್ತುತ ಟೊಮೆಟೋ ಭಾರೀ ಸುದ್ದಿಯಲ್ಲಿದ್ದು, ಈರುಳ್ಳಿಯು ಸಹ ರಾಜಕೀಯವಾಗಿ ಅತ್ಯಂತ ಪುಷ್ಟಿದಾಯಕ ತರಕಾರಿಯಾಗಿದೆ.

ನಮ ದೇಶದ ಸ್ಥಿತಿಗತಿಯು ಈರುಳ್ಳಿಯ ವಹಿವಾಟಿನ ಸ್ಥಿತಿಯ ಮೇಲೆ ಅವಲಂಬಿತವಾಗಿದೆ ಎಂದು ಯಾರಾದರೂ ಹೇಳಬಹುದು. ಹೌದು, ಅಡುಗೆ ಮನೆಯ ಅತ್ಯಂತ ಅನಿವಾರ್ಯ ಈರುಳ್ಳಿಯು ಎರಡು ಸರ್ಕಾರಗಳನ್ನು ಬೀಳಿಸಿದ ಖ್ಯಾತಿಗೆ ಪಾತ್ರವಾಗಿದೆ. ಇವೆರಡೂ ಬಿಜೆಪಿ ಸರ್ಕಾರಗಳೇ ಆಗಿದ್ದವು. ಟೊಮೆಟೋ ಪನ್ನುಗಳಿಂದ ನಾವು ಹಿಡಿಯಲ್ಪಟ್ಟಿದ್ದರೆ, ಈರುಳ್ಳಿಯು ಅತ್ಯಂತ ಬಲಶಾಲಿಯಾದ ರಾಜಕೀಯ ತರಕಾರಿಯಾಗಿದೆ.

1980ರಲ್ಲಿ ಅಂದಿನ ಜನತಾ ಪಕ್ಷದ ಸರ್ಕಾರ, ಉತ್ತಮ ಆಡಳಿತವನ್ನು ನೀಡುವ ಅವಕಾಶವನ್ನು ಕಳೆದುಕೊಂಡ ನಂತರ, ಆಗ ಎದುರಾದ ಲೋಕಸಭಾ ಚುನಾವಣೆಯಲ್ಲಿ ದಿವಂಗತ **ಶ್ರೀಮತಿ ಇಂದಿರಾಗಾಂಧಿ**ಯವರು ಈರುಳ್ಳಿ ಮಾಲೆಯನ್ನು ಧರಿಸಿಕೊಂಡು, ದೇಶಾದ್ಯಂತ ಸಂಚರಿಸಿ, ಈರುಳ್ಳಿಯಂತಹ ಅಗತ್ಯ ತರಕಾರಿಯ ಬೆಲೆಯನ್ನು ನಿಯಂತ್ರಿಸುವ ಸಾಮರ್ಥ್ಯ ಇಲ್ಲದಂತಹ ಸರ್ಕಾರವನ್ನು ನೀವು (ಮತದಾರರು) ಹೇಗೆ ನಂಬುವಿರಿ ಎಂದು ಕೇಳಿದರು. ಕೊನೆಗೆ, ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ ಅವರ ಅಪರಾಧವನ್ನು ಜನರು ಮನ್ನಿಸಿ, ಅವಶ್ಯ ಈರುಳ್ಳಿಯ ದೆಸೆಯಿಂದ ಅವರನ್ನು ಮತ್ತೇ ಅಧಿಕಾರಕ್ಕೆ ತಂದರು.

ಪುನಃ 1998ರಲ್ಲಿ ಭಾರತೀಯ ಜನತಾ ಪಕ್ಷ ನೇತೃತ್ವದ ಎನ್‌ಡಿಎ ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆಗಳ ನಂತರ, ಹೆಚ್ಚು ಕ್ರಿಯಾಶೀಲವಾಗಿ 'ಭಾರತ ಪ್ರಕಾಶಿಸುತ್ತಿದೆ' ಎಂಬ ಘೋಷಣೆಯೊಂದಿಗೆ ಚುನಾವಣೆ ಗೆಲ್ಲಲು ತಯಾರಿ ನಡೆಸಿತ್ತು. ಇದೇ ಈರುಳ್ಳಿ ಅವರ ಗೆಲುವಿನ ಅವಕಾಶವನ್ನು ತುಂಡರಿಸಿ, ಕಣ್ಣೀರು ಸುರಿಸುವಂತೆ ಮಾಡಿತು.

ಪುನಶ್ಚೇತನಗೊಂಡ ಸೋನಿಯಾ ಗಾಂಧಿಯವರು ರ‍್ಯಾಲಿಯೊಂದರಲ್ಲಿ ತಮ್ಮ ಪರಿಶುದ್ಧ ಹಿಂದಿ ಭಾಷೆಯಲ್ಲಿ ಮತದಾರರನ್ನು ಉದ್ದೇಶಿಸಿ 'ಹಮಾರೇ ಬೆಹನೇ ಘರ್ ನಹೀ ಚಲಾ ಸಕ್ತೆ' (ನಮ್ಮ ಸಹೋದರಿಯರು, ತಮ್ಮ ಮನೆ ನಿಭಾಯಿಸಲು ಸಾಧ್ಯವಾಗುತ್ತಿಲ್ಲ) ಎಂದು ತೋಡಿಕೊಂಡಿದ್ದನ್ನು ಕೆಲವರಾದರೂ ಜ್ಞಾಪಿಸಿಕೊಳ್ಳಬಹುದು. ಅವರು ಗಗನಕ್ಕೇರುತ್ತಿರುವ ಈರುಳ್ಳಿಯ ಬೆಲೆಯ ಕುರಿತು ಪ್ರಸ್ತಾಪಿಸಿದ್ದರು.

ತಮ್ಮ ಮಾತನ್ನು ಪುಷ್ಟೀಕರಿಸಲು ಒಂದು ಬೃಹತ್ ಗಾತ್ರದ ಈರುಳ್ಳಿ ಆಕಾರದ ಹೀಲಿಯಂ ಬಲೂನನ್ನು ನೆರೆದಿದ್ದಂತಹ ಜನಸ್ತೋಮದ ಮೇಲೆ ಹಾರಿ ಬಿಡಲಾಗಿತ್ತು. ಪ್ರಕಾಶಿಸುತ್ತಿದ್ದ ಬಿಜೆಪಿಯು ಕೆಳಗುರುಳಿತು.

ಭಾರತೀಯರು ಈರುಳ್ಳಿಯನ್ನು ಕತ್ತರಿಸುವಾಗ ಆನಂದ ಭಾಷ್ಪ ಸುರಿಸದಿದ್ದರೆ, ಸರ್ಕಾರ ಸೋತು ಕಣ್ಣೀರು ಸುರಿಸಬೇಕಾಗುತ್ತದೆ. ಖಂಡಿತವಾಗಿ, 'ಈರುಳ್ಳಿ ರಾಜಕೀಯ' ದಲ್ಲಿ ಪರಿಣಿತಿ ಪಡೆದಿದ್ದ ಕಾಂಗ್ರೆಸ್ ಸರ್ಕಾರ 2010 ಮತ್ತು 2013ರಲ್ಲಿ ಈರುಳ್ಳಿ ಹೆಣೆದ ಬಲೆಗೆ ಬಿದ್ದರೂ, ಅದರಿಂದ ಪಾರಾಗುವಲ್ಲಿ ಯಶಸ್ವಿಯಾಯಿತು.

2011ರಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಹಲವಾರು ಬಾರಿ ಈರುಳ್ಳಿ ಮಾರಾಟಗಾರರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದ ನಂತರ, ಈರುಳ್ಳಿ ಬೆಲೆ ಶೇ.60ರಷ್ಟು ಇಳಿಕೆಯಾಯಿತು ಎಂಬ ಮಾಧ್ಯಮ ವರದಿಗಳನ್ನು ಇಲ್ಲಿ ಸ್ಮರಿಸಬಹುದು. ವಾಸ್ತವವಾಗಿ, ಈರುಳ್ಳಿ ಹಾಗೂ ತರಕಾರಿ ಮಾರುಕಟ್ಟೆ ನಿಯಂತ್ರಣ ಕೂಟಗಳ ವೈಫಲ್ಯತೆ ಹಾಗೂ ನಿರಾಶಾದಾಯಕ ಮುಂಗಾರು ಸಹ ತರಕಾರಿಗಳ ಬೆಲೆಗಳನ್ನು ಸುಸ್ಥಿರವಾಗಿರಿಸುವಲ್ಲಿ ವಿಫಲವಾಗಿದ್ದಕ್ಕೆ ನೀಡಬಹುದಾದ ಸಮರ್ಥವಾದಂತಹ ಪುರಾವೆ ಆಗಬಹುದು.

ಆದರೆ, ಇದು ಎಷ್ಟರ ಮಟ್ಟಿಗೆ ಹಣಕಾಸಿಗೆ ಸಂಬಂಧಟ್ಟಿದೆಯೋ, ಹಾಗೆಯೇ ರಾಜಕೀಯಕ್ಕೂ ಸಂಬಂಧಪಟ್ಟದ್ದಾಗಿದೆ. ತರಕಾರಿ ರಾಜಕೀಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ–ಶರದ್ ಪವಾರ್‌ರವರೇ ರಾಜ!

ಎನ್‌ಡಿಟಿವಿಯ ಒಂದು ವರದಿಯ ಪ್ರಕಾರ 2014ರಲ್ಲಿ ಮಹಾರಾಷ್ಟ್ರದ ನಾಸಿಕ್‌ನಲ್ಲಿನ ಅತ್ಯಂತ ದೊಡ್ಡದಾದ ಈರುಳ್ಳಿ ಮಾರಾಟ ಕೇಂದ್ರದಲ್ಲಿದ್ದ 14 ಈರುಳ್ಳಿ ಮಂಡಿಗಳ ಪೈಕಿ, 9 ಮಂಡಿಗಳು ಶರದ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ನಿಯಂತ್ರಣದಲ್ಲಿದ್ದರೆ, ಉಳಿದ ಮಂಡಿಗಳು ಇತರ ರಾಜಕೀಯ ಪಕ್ಷಗಳ ನಿಯಂತ್ರಣದಲ್ಲಿದ್ದವು.



ಬೆಂಗಳೂರಲ್ಲಿ 120 ಗ್ರಾಂ ತೂಕದ 1 ಟೊಮೆಟೋಗೆ 17 ರೂ. ಬೆಲೆ. ಹೇಗಿದೆ ಟೊಮೆಟೋ ಬೆಲೆ ಬಿಸಿ!

ಅದೇ ಎನ್‌ಡಿ ಟಿವಿಯ ಮತ್ತೊಂದು ವರದಿಯ ಪ್ರಕಾರ, 2013ರಲ್ಲಿ ಈರುಳ್ಳಿ ಮಾರಾಟಗಾರರು ಶೇ.4 ಕಮಿಷನ್ ಪಡೆದರು. ಅಲ್ಲಿ ಒಂದು ಕೆಜಿ ಈರುಳ್ಳಿಗೆ ರೂ. 25ರ ಹಾಗೆ, 40 ಲಕ್ಷ ಟನ್ ಈರುಳ್ಳಿ ಮಾರಾಟವಾಯಿತು. ಇದು ರೂ. 10,000 ಕೋಟಿಯಷ್ಟು ವ್ಯಾಪಾರ ವಹಿವಾಟಿಗೆ ಕಾರಣವಾಯಿತು! ಹಾಗೂ ಆ ವಹಿವಾಟಿನಲ್ಲಿ ಶೇ. 4 ಕಮಿಷನ್, ಅಂದರೆ 400 ಕೋಟಿ ರೂ. ಪಕ್ಕಾ ಲಾಭವಾಯಿತು! ರಾಜಕಾರಣಿಗಳು ಯಾವಾಗಲೂ ಮತದಾರರ ಮೇಲೆ ಪ್ರಭಾವ ಬೀರುವ ಸ್ಥಳಗಳ ಮೇಲೆ ಹಿಡಿತ ಹೊಂದುತ್ತಾ, ಸುಲಭವಾಗಿ ಹಣ ಗಳಿಸುತ್ತಾರೆ. ಅದು ಕ್ರಿಕೆಟ್, ರಿಯಲ್ ಎಸ್ಟೇಟ್ ಇಲ್ಲವೇ ತರಕಾರಿಗಳ ಮಂಡಿಯಾಗಿರಬಹುದು. ನಿಮಗೆ ಗೊತ್ತಿರಲಿ, ಶರದ್ ಪವಾರ್ ಅವರು ಈ ಎಲ್ಲವುಗಳ ಮೇಲೆ ಹಿಡಿತ ಸಾಧಿಸಿದ್ದಾರೆ.

ಪರಿಸ್ಥಿತಿ ಲಾಭ ಪಡೆಯಲು, ಬಿಜೆಪಿ ಸರ್ಕಾರವು ಕನಿಷ್ಠ ರಫ್ತು ದರವನ್ನು ನಿಗದಿಪಡಿಸಿ, ಈರುಳ್ಳಿಯನ್ನು ಪುನಃ 'ಅಗತ್ಯ ವಸ್ತುಗಳ ಕಾಯ್ದೆ' ವ್ಯಾಪ್ತಿಗೆ ತಂದಿತು. ಆದರೆ, ಈರುಳ್ಳಿ ದಾಸ್ತಾನಿಗಾಗಿ ದೇಶದಲ್ಲಿ ಅತ್ಯಾಧುನಿಕ ಉಗ್ರಾಣಗಳನ್ನು ಸ್ಥಾಪಿಸುವತ್ತ ಸರ್ಕಾರ ಗಂಭೀರವಾಗಿ ಯೋಚಿಸಬೇಕಾದ ಸಮಯ ಈಗ ಬಂದಿರಬಹುದು. ಏಕೆಂದರೆ, ಈರುಳ್ಳಿಯ ಕೊರತೆಯನ್ನು ನೀಗಲು ನಮ್ಮ ದೇಶಕ್ಕೆ 15 ರಿಂದ 20 ಲಕ್ಷ ಟನ್ ಈರುಳ್ಳಿ ಶೇಖರಣೆಗೆ ಸೂಕ್ತ ಸ್ಥಳಾವಕಾಶ (ಗೋದಾಮು) ಬೇಕಾಗುತ್ತದೆ.

ಸಾಮಾನ್ಯವಾಗಿ, ಈರುಳ್ಳಿಯ ಬೆಲೆ ಗಗನಕ್ಕೇರಿದಾಗ ಇಲ್ಲವೇ ಈರುಳ್ಳಿಯ ಅಭಾವ ಉಂಟಾದಾಗ, ಸರ್ಕಾರ ಈರುಳ್ಳಿಯ ರಫ್ತನ್ನು ನಿಷೇಧಿಸುತ್ತದೆ. ಆಮದು ತೆರಿಗೆಯನ್ನು (import tax) ಕಡಿತಗೊಳಿಸುತ್ತದೆ ಹಾಗೂ ಈರುಳ್ಳಿಯನ್ನು ನೆರೆ ಹೊರೆಯ ದೇಶಗಳು, ಕೆಲವು ವೇಳೆ ಪಾಕಿಸ್ತಾನದಿಂದಲೂ ಖರೀದಿಸುತ್ತದೆ. ಅಲ್ಲಿನ ಈರುಳ್ಳಿ ಭಾರತೀಯರ ಆದ್ಯತೆಯ ಆಯ್ಕೆಯಾಗಿದೆ. ಆದರೆ, ಯಕಶ್ಚಿತ್ ತರಕಾರಿಗಾಗಿ ನಾವು ಪಾಕಿಸ್ತಾನದಂತಹ ಪ್ರತಿಕೂಲ ವಿರೋಧಿ ದೇಶದ ಮೇಲೆ ಅವಲಂಬಿತವಾಗಬೇಕೇ? ಅದೂ ನಮ್ಮ ಸರ್ಕಾರ ಬೀಳಿಸುವ ಸಾಮರ್ಥ್ಯವಿರುವಂತಹ ತರಕಾರಿಗಾಗಿ!?

ವಿಶ್ವ ಸಮುದಾಯಕ್ಕೆ ದಕ್ಷಿಣ ಏಷ್ಯಾ ಉಪ ಖಂಡದಲ್ಲಿ ಭಾರತವು ಶಕ್ತಿ ಕೇಂದ್ರ ಎಂದು ತೋರಿಸಬೇಕಾದರೆ, ಯಾವುದೇ ಪಕ್ಷದ ಸರ್ಕಾರವಿರಲಿ, ದೇಶದ ಜನರು ಸಂತೋಷದಿಂದ ಆನಂದಭಾಷ್ಪ ಸುರಿಸುವುದನ್ನು ನೋಡಲು ಬಯಸುವುದಾದರೆ, ಈರುಳ್ಳಿಯ ತೀವ್ರ ಸಮಸ್ಯೆಗೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕು. ಇಲ್ಲವಾದರೆ, ನಾವು ಈರುಳ್ಳಿಯ ಎಸಳು ತಿಂದು ಪಾಕಿಸ್ತಾನ್ ಭಾಯಿ–ಭಾಯಿ ಎಂದು ಹೇಳಬೇಕಾಗುತ್ತದೆ.

ದೇಶದಲ್ಲಿ ಪ್ರಸ್ತುತ ಟೊಮೆಟೋ ರಾಜಕೀಯ ಕೇಂದ್ರ ಬಿಂದುವಾಗಿ ರಾರಾಜಿಸುತ್ತಿದ್ದು, ಭಾರೀ ಚರ್ಚಾ ವಿಷಯವೂ ಆಗಿದೆ. ಆದರೆ ಅದರ ರಾಜಕೀಯ ಪರಿಣಾಮ ಇನ್ನಷ್ಟೇ ಅನುಭವಕ್ಕೆ ಬರಬೇಕಾಗಿದೆ. ಇದೇ ವೇಳೆ ಕೆಲವು ಹಣ್ಣುಗಳು ಇದರೊಟ್ಟಿಗೆ ಸೇರಿವೆ. ರಾಜಕೀಯ ಹಣ್ಣಿನ ಸಲಾಡ್–**ಭಾರತೀಯ ರಾಷ್ಟ್ರೀಯ ಅಭಿವೃದ್ಧಿಶೀಲ ಎಲ್ಲರನ್ನೂ ಒಳಗೊಳ್ಳುವ ಮೈತ್ರಿಕೂಟ** (ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಯನ್ಸ್–'ಇಂಡಿಯಾ') ರಚನೆಯಾಗಿದೆ. ಇದು 26 ರಾಜಕೀಯ ಪಕ್ಷಗಳಿಂದ ಕೂಡಿದೆ. ಅವು ತಮ್ಮ ತಮ್ಮಲ್ಲೇ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದು, ವಿವಿಧ ತರಕಾರಿಗಳ ಬೆಲೆ ಏರಿಕೆಯು ಪ್ರಸ್ತುತ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರವನ್ನು ಕೆಳಗಿಳಿಸಲು ತಮಗೆ ಸಹಕಾರಿಯಾಗಲಿದೆ ಎಂದು ಅವು ನಂಬಿವೆ.

ಕುತೂಹಲಕಾರಿ ಸಂಗತಿ ಎಂದರೆ, "ಇಂಡಿಯಾ"ದ ನಾಯಕ ರಾಹುಲ್ ಗಾಂಧಿ ಸಹ ಒಂದು ರೀತಿ ಟೊಮೆಟೋ ಥರವೇ! ಈ ಹಣ್ಣುಗಳ ಸಲಾಡ್‌ನಲ್ಲಿರುವ ಅನೇಕರು. ರಾಹುಲ್ ಗಾಂಧಿಯವರನ್ನು ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಿಸಲು ಬಯಸಿದ್ದಾರೆ. ಆದರೆ, ಟೊಮೆಟೋ ತರಹ ರಾಹುಲ್ ಗಾಂಧಿ ಸಹ ತುಂಬಾ ಗೊಂದಲದಲ್ಲಿದ್ದಾರೆ. ಅವರ ಗೆಳೆಯರಿಗೂ ರಾಹುಲ್ ಗಾಂಧಿ ಯುವಕರೋ ಅಥವಾ ವಯಸ್ಸಾದವರೋ; ವೃತ್ತಿಪರರೋ, ಪೂರ್ಣಕಾಲಿಕ ರಾಜಕಾರಣಿಯೋ ಅಥವಾ ಅವಿಶ್ರಾಂತವಾಗಿ ಕೆಲಸ ಮಾಡುವ ನಾಯಕನೋ ಎಂಬುದು ಇನ್ನೂ ಮನದಟ್ಟಾಗಿಲ್ಲ. ಅದೇ ರೀತಿ ಟೊಮೆಟೋ ಸಹ ಅನಿಶ್ಚಯವಾದದ್ದು–ಅದು ಒಂದು ತರಕಾರಿಯೋ ಇಲ್ಲವೇ ಹಣ್ಣೋ?

ಇಂಡಿಯಾದ ಸದಸ್ಯರು ಪ್ರಸಿದ್ಧ ಟೊಮೆಟೋ ಗಾದೆಯಿಂದ ಕೆಲವು ಪಾಠಗಳನ್ನು ಕಲಿಯಬೇಕಿದೆ–ಜ್ಞಾನದ ಪ್ರಕಾರ ಟೊಮೆಟೋ ಒಂದು ಹಣ್ಣು; ಬುದ್ಧಿವಂತಿಕೆ ಪ್ರಕಾರ ಅದನ್ನು ಹಣ್ಣಿನ ಸಲಾಡ್‌ನಲ್ಲಿ ಸೇರಿಸುವಂತಿಲ್ಲ. ಹಾಗಾಗಿ, ಇಂಡಿಯಾವೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಪ್ರಚಾರದ ವೇಳೆ ಅದಕ್ಕೆ ಎದಿರೇಟು ನೀಡಬೇಕೆಂದರೆ, ಅವರು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳಬೇಕು– ರಾಜಕೀಯ ಹಣ್ಣಿನ ಸಲಾಡ್ ಬಟ್ಟಲಿಗೆ ತರಕಾರಿಯ ರುಚಿವುಳ್ಳಂತಹ ಹಣ್ಣಿನ ನಾಯಕತ್ವ ಬೇಕೆ!? ಏಕೆಂದರೆ, ಅವರು ಹಾಗೆ ಮಾಡಿದರೆ, ಸಿಹಿಯಾದ ಹಣ್ಣಿನ ಸಲಾಡ್ ಬದಲು ಅವರಿಗೆ ಅಂತಿಮವಾಗಿ ಸಪ್ಪೆಯಾದ ರಾಜಕೀಯ ತರಕಾರಿ ಸಲಾಡ್ ಸಿಗಬಹುದು!

email: vikram@starofmysore.com

ಬ್ರಹ್ಮ ಬಲಕ್ಕಿಂತ ಯಾವ ವಿದ್ಯೆಯೂ ಇಲ್ಲ: ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ

ಮೈಸೂರು, ಆ.3(ಸಿಎನ್)–ಬ್ರಹ್ಮ ಬಲಕ್ಕಿಂತ ಯಾವ ವಿದ್ಯೆಯೂ ಇಲ್ಲ. ಇದರಿಂದ ಎಲ್ಲವನ್ನು ಮೆಟ್ಟಿ ನಿಲ್ಲುವ ಶಕ್ತಿ ನಮ್ಮಲ್ಲಿ ಬರುತ್ತದೆ. ನಾವು ದುರ್ಬಲ ಎಂದುಕೊಂಡರೆ ಅಶಕ್ತರಾಗಿಯೇ ಉಳಿಯಬೇಕಾಗುತ್ತದೆ ಎಂದು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು. ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ಸಂಕಲ್ಪ ಅಂಗವಾಗಿ ಗುರುವಾರ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ವೇಳೆ ಮಾತನಾಡಿದರು. ವಸಿಷ್ಠ ಋಷಿ ಹಾಗೂ ವಿಶ್ವಾಮಿತ್ರರ ನಡುವೆ ನಡೆದ ಸಂಘರ್ಷವನ್ನು ವಿವರಿಸುತ್ತಾ, ವಿಶ್ವಾಮಿತ್ರ ಮಹರ್ಷಿ ರಾಜರಾಗಿದ್ದಾಗ, ಒಂದು ಯುದ್ಧಕ್ಕೆ ತೆರಳುವ ಸಂದರ್ಭದಲ್ಲಿ ವಸಿಷ್ಠರು ಅವರ ಪಡೆಯನ್ನು ಭೋಜನ ಕೂಟಕ್ಕೆ ಆಹ್ವಾನಿಸುತ್ತಾರೆ. ಸಂತೋಷದಿಂದ ವಿಶ್ವಾಮಿತ್ರ ಹಾಗೂ ಸೈನ್ಯ ಭೋಜನ ಸ್ವೀಕರಿಸುತ್ತಾರೆ.



ವಸಿಷ್ಠರೇ ನಿಮ್ಮ ಔತಣಕೂಟ ಅದ್ಭುತವಾಗಿತ್ತು ಎಂದು ವಿಶ್ವಾಮಿತ್ರರು ಹೊಗಳುತ್ತಾರೆ. ಬಳಿಕ ವಿಶ್ವಾ ಮಿತ್ರರು ಹೇಳುತ್ತಾರೆ ನನ್ನ ಬಳಿಯಿರುವ ಸಕಲ ಸಂಪತ್ತು, ಮುತ್ತು, ರತ್ನ, ಸ್ವರ್ಣ ಎಲ್ಲವನ್ನು ಕೊಡುತ್ತೇನೆ ನಿಮ್ಮ ಬಳಿ ಇರುವ ನಂದಿನಿ ಎಂಬ ಗೋವನ್ನು ನನಗೆ ಕೊಡಿ. ಇದಕ್ಕೆ ವಸಿಷ್ಠ ಉತ್ತರಿಸುತ್ತಾರೆ, ನೀವು ಲಕ್ಷ–ಕೋಟಿ, ಧನ–ಕನಕ, ಸ್ವರ್ಣ ಯಾವುದನ್ನೇ ನೀಡಿದರೂ ನಾನು ನಂದಿನಿಯನ್ನು ಕೊಡುವುದಿಲ್ಲ. ಅಷ್ಟಕ್ಕೂ ಆ ಗೋವು ನನ್ನನ್ನು ಬಿಟ್ಟು ಹೋಗುವುದಿಲ್ಲ ಎನ್ನುತ್ತಾರೆ. ವಿಶ್ವಾ ಮಿತ್ರರು ತನ್ನ ಭಟ್ಟರಿಗೆ ಹೇಳಿ ನಂದಿನಿ ಗೋವನ್ನು ಎಳೆದು ಹೊಯ್ಯುತ್ತಿರುವಾಗ, ನಂದಿನಿಯೂ ಭಟ್ಟರಿಂದ ತಪ್ಪಿಸಿಕೊಂಡು ಬಂದು, ವಸಿಷ್ಠರನ್ನು ಪ್ರಶ್ನೆ ಮಾಡುತ್ತದೆ. ಗುರುಗಳೇ ನಾನು ನಿಮ್ಮ ಬಳಿ ಭಕ್ತರಂತೆ ಇದ್ದೇನೆ ನೀವು ನನ್ನನ್ನು ಭಟ್ಟರಿಗೆ ಕೊಡಲು ಕಾರಣವೇನು ಎಂದಾಗ, ವಸಿಷ್ಠರು ಹೇಳುತ್ತಾರೆ, ನಾನು ನಿನ್ನನ್ನು ಕೊಡಲಿಲ್ಲ ಅವರೇ ನಿನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ. ನಾನು ಆ ಬಲಿಷ್ಠ ಸೈನ್ಯದ ಎದುರು ಹೋರಾಡಿ ಗೆಲ್ಲಲಾರೇ, ಅಸಹಾಯಕನಾಗಿದ್ದೇನೆ ಎನ್ನುತ್ತಾರೆ. ಇದಕ್ಕೆ ನಂದಿನಿ ಗೋವು ಮಾತನಾಡುತ್ತಾ, ಬ್ರಹ್ಮ ಬಲಕ್ಕಿಂತ ಯಾವ ವಿದ್ಯೆಯೂ ಇಲ್ಲ. ನೀವು ನನಗೆ ಅನುಮತಿ ನೀಡಿದರೆ ನಾನು ವಿಶ್ವಾಮಿತ್ರ ಸೈನ್ಯವನ್ನು ಎದುರಿಸುತ್ತೇನೆ ಎನ್ನುತ್ತದೆ. ವಸಿಷ್ಠರ ಒಪ್ಪಿಗೆ ಮೇರೆಗೆ ಗೋವು–ವಿಶ್ವಾಮಿತ್ರ ಪಡೆಯ ನಡುವೆ ಘೋರ ಯುದ್ಧ ಏರ್ಪಡುತ್ತದೆ. ಯುದ್ಧ ನಡೆಯುವ ವೇಳೆ ವಿಶ್ವಾಮಿತ್ರನ 100 ಮಂದಿ ಮಕ್ಕಳು ವಸಿಷ್ಠರಿಂದ ಸುಟ್ಟು ಭಸ್ಮರಾಗುತ್ತಾರೆ. ಮಕ್ಕಳನ್ನು ಕಳೆದುಕೊಂಡ ವಿಶ್ವಾಮಿತ್ರನ ಕೋಪ ತಣ್ಣಗಾಗಿ, ಗೋವನ್ನು ವಸಿಷ್ಠರಿಗೆ ಒಪ್ಪಿಸಿ ಅಲ್ಲಿಂದ ತೆರಳುತ್ತಾರೆ ಎಂದರು. ಈ ವೇಳೆ ಜರ್ಮನ್‌ನಿಂದ ಆಗಮಿಸಿದ್ದ ಶಾಸ್ತ್ರೀಯ ಸಂಗೀತಗಾರ ಸುದರ್ಶನ್ ತಂಡದಿಂದ ಮೃದಂಗ, ಪಿಟೀಲು ವಾದ್ಯಗಳ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 4 ಆಗಸ್ಟ್ 2023

ಐಎಎಸ್–1,365, ಐಪಿಎಸ್‌ನಲ್ಲಿ 703 ಹುದ್ದೆಗಳು ಖಾಲಿಯಿವೆ



ಜಿತೇಂದ್ರ ಸಿಂಗ್

ನವದೆಹಲಿ, ಆ.3– ಭಾರತೀಯ ಆಡಳಿತ ಸೇವೆಯಲ್ಲಿ (ಐಎಎಸ್) 1,365 ಮತ್ತು ಭಾರತೀಯ ಪೊಲೀಸ್ ಸೇವೆಯಲ್ಲಿ (ಐಪಿಎಸ್) 703 ಹುದ್ದೆಗಳು ಖಾಲಿ ಇವೆ ಎಂದು ಗುರುವಾರ ರಾಜ್ಯಸಭೆಗೆ ತಿಳಿಸಲಾಗಿದೆ.

ಇವುಗಳಲ್ಲದೆ, ಭಾರತೀಯ ಅರಣ್ಯ ಸೇವೆಯಲ್ಲಿ (ಐಎಫ್‌ಎಸ್) 1,042 ಮತ್ತು ಭಾರತೀಯ ಕಂದಾಯ ಸೇವೆಯಲ್ಲಿ (ಐಆರ್‌ಎಸ್) 301 ಖಾಲಿ ಇವೆ ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಖಾಲಿ ಹುದ್ದೆಗಳು ಉಂಟಾಗುವುದು ಮತ್ತು ಭರ್ತಿ ಮಾಡುವುದು ನಿರಂತರ ಪ್ರಕ್ರಿಯೆಯಾಗಿದೆ. ಖಾಲಿ ಇರುವ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದರು.

ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಐಆರ್‌ಎಸ್ ಸೇರಿದಂತೆ ನಾಗರಿಕ ಸೇವೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡಲು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಪ್ರತಿ ವರ್ಷ ನಾಗರಿಕ ಸೇವಾ ಪರೀಕ್ಷೆಗಳನ್ನು (ಸಿಎಸ್‌ಇ) ನಡೆಸುತ್ತದೆ ಎಂದು ಅವರು ಹೇಳಿದರು.

ಐಎಎಸ್ ಮತ್ತು ಐಪಿಎಸ್ ಬಡ್ತಿ ಕೋಟಾದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು, ಎಲ್ಲಾ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಕೇಂದ್ರ ಲೋಕಸೇವಾ ಆಯೋಗವು ಆಯ್ಕೆ ಸಮಿತಿ ಸಭೆಗಳನ್ನು ನಡೆಸುತ್ತದೆ ಎಂದು ಸಚಿವರು ಹೇಳಿದರು.

2022ರಲ್ಲಿ ನಾಗರಿಕ ಸೇವಾ ಪರೀಕ್ಷೆ ಮೂಲಕ ಐಎಎಸ್ ಅಧಿಕಾರಿಗಳ ವಾರ್ಷಿಕ ಭರ್ತಿಯನ್ನು ಸರ್ಕಾರ 180ಕ್ಕೆ ಹೆಚ್ಚಿಸಿದೆ. 2020ರಿಂದ ಐಪಿಎಸ್ ಅಧಿಕಾರಿಗಳ ಭರ್ತಿ 200ಕ್ಕೆ, 2022ರಿಂದ ಐಎಫ್‌ಎಸ್‌ನ ಭರ್ತಿಯನ್ನು 50ಕ್ಕೆ ಹೆಚ್ಚಿಸಿದೆ. 2023ರಲ್ಲಿ ಭರ್ತಿ ಮಾಡಲು ಕಂದಾಯ ಇಲಾಖೆ 301 ಹುದ್ದೆಗಳು ಖಾಲಿ ಇರುವುದಾಗಿ ತಿಳಿಸಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದರು.



ಮೈಸೂರಿನ ಅಂಧತ್ವ ನಿಯಂತ್ರಣ ಸಂಸ್ಥೆ ಮತ್ತು ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ವತಿಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಸುಮಾರು 280ಕ್ಕೂ ಹೆಚ್ಚು ಸಾರ್ವಜನಿಕರು ಕಣ್ಣಿನ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು. 30 ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ವೇಳೆ ಮೌಲಾನ ಆಜಾದ್ ಶಾಲೆಯ ಹೆಚ್‌ಎಂ ಸಾದಿಕ್ ವಾರ್ ರೆಹಾನ್, ಬನಾನಾ ರವಿ, ಗಾಯತ್ರಿ, ಚಂದ್ರಶೇಖರ್, ಮಮತಾ, ರಾಜಶೇಖರ ಮೂರ್ತಿ, ಟಿ.ವೀರಣ್ಣ, ಅರವಿಂದ ಆಸ್ಪತ್ರೆಯ ವಿಜಯ್, ಆಯೋಜಕರಾದ ಮೈಕ್ ಪ್ರಕಾಶ್ ಇದ್ದರು.

ನಾಳೆ ಉಚಿತ ಆರೋಗ್ಯ ತಪಾಸಣೆ



ಮೈಸೂರು, ಆ.3(ಜಿಎ)– ದಿವಂಗತ ಆರ್.ಧ್ರುವನಾರಾಯಣ್ ಅವರ ಅಭಿಮಾನಿಗಳಿಗೆ ಮತ್ತು ಕಾಂಗ್ರೆಸ್ ಕಾರ್ಯಕರ್ತರಿಗೆ ಆ.5ರಂದು ಉಚಿತ ಆರೋಗ್ಯ ತಪಾಸಣೆ ಆಯೋಜಿಸಲಾಗಿದೆ ಎಂದು ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ರಫೀಕ್ ಅಲೀ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ದಿವಂಗತ ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಅಂಗವಾಗಿ ಅರ್ಥಪೂರ್ಣವಾಗಿ ಆಚರಿಸಲು ಆ.5ರಂದು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳಿಗೆ ನಗರದ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ರಕ್ತದಾನ, ನೇತ್ರದಾನ, ನೇತ್ರ ತಪಾಸಣೆ ಹಾಗೂ ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ ಎಂದರು.

ಆರ್.ಧ್ರುವನಾರಾಯಣ್ ಅವರಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಮೇಲೆ ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಮೇಲೆ ಹೊಂದಿದ್ದ ಅಪಾರ ಪ್ರೀತಿ, ಕಾಳಜಿಯನ್ನು ಅರಿತು ಅವರ ಅಭಿಮಾನಿಗಳಿಗಾಗಿ ಈ ಶಿಬಿರವನ್ನು ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಮೈಸೂರು ನಗರಾಧ್ಯಕ್ಷ ಎನ್.ಮನೋಜ್ ಮತ್ತು ಗ್ರಾಮಾಂತರ ಅಧ್ಯಕ್ಷ ಬಾಲರಾಜ್ ಉಪಸ್ಥಿತರಿದ್ದರು.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.3– 2022–23ನೇ ಸಾಲಿನ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಲು ಇಲಾಖೆಯಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ವೃತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಮತ್ತು ವಿದ್ಯುತ್ ಚಾಲಿತ ಮರಗೆಲಸ ಹಾಗೂ ದೋಬಿ ಉಪಕರಣಗಳನ್ನು ಪಡೆಯಲು, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯಲು ಮತ್ತು ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಸಹಾಯಧನವನ್ನು ನೀಡುವ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು https://mysore.nic.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಸೆ.4 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ತಾಲೂಕಿನ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಕೈಗಾರಿಕಾ ವಿಸ್ತರಣಾಧಿಕಾರಿಗಳು ಅಥವಾ ಉಪನಿರ್ದೇಶಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಪಟಾಕಿ ಪರೀಕ್ಷೆಯಲ್ಲಿ ಪಾಸಾದ ದಸರಾ ಗಜಪಡೆ

● ಇದೇ ಮೊದಲು ಕ್ಯಾಂಪ್‌ಗಳಲ್ಲೇ ಪಟಾಕಿ ಸಿಡಿಸಿ ಆನೆಗಳ ಧೈರ್ಯ ಪರೀಕ್ಷೆ ● ವಾಹನಗಳ ಶಬ್ದದಿಂದ ಹೆದರುವಿಕೆ ಗುಣ ಪರಿಶೀಲನೆ ● ಸಣ್ಣ ಪ್ರಮಾಣದ ಬೆದರಿಕೆಯನ್ನು ಸಾವರಿಸಿಕೊಂಡ ಹೊಸ ಆನೆಗಳು



ದುಬಾರೆ ಕ್ಯಾಂಪ್‌ಗೆ ತೆರಳಿದ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್‌ಕುಮಾರ್ ನೇತೃತ್ವದ ತಂಡ ಎಂಟು ಆನೆಗಳನ್ನು ಪರಿಶೀಲಿಸಿತು.

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.3– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರಬಿಂದುವಾದ ಗಜಪಡೆಯನ್ನು ಈ ಬಾರಿ ಸಜ್ಜುಗೊಳಿಸುವ ಪ್ರಕ್ರಿಯೆ ಆರಂಭವಾಗಿದ್ದು, ಪಟ್ಟಿ ಅಂತಿಮಗೊಳ್ಳುವ ಮುನ್ನವೇ ಗುರುತಿಸಲ್ಪಟ್ಟ ಆನೆಗಳಿಗೆ ಕ್ಯಾಂಪ್‌ಗಳಲ್ಲೇ ಪಟಾಕಿ ಸಿಡಿಸಿ ಭಾರಿ ಶಬ್ದಕ್ಕೆ ಗಜಪಡೆ ಬೆದರದಂತೆ ಅಣಿಗೊಳಿಸಲಾಗುತ್ತಿದೆ.

ದಸರಾ ಮಹೋತ್ಸವ ಯಶಸ್ವಿಯಲ್ಲಿ ಗಜಪಡೆಯ ಪಾತ್ರ ಬಹುಮುಖ್ಯವಾಗಿದ್ದು, ವಿವಿಧ ಕ್ಯಾಂಪ್‌ಗಳಿಂದ ಮೈಸೂರಿಗೆ ಆನೆಗಳನ್ನು ಕರೆತಂದು ತರಬೇತಿ ನೀಡುವ ಪದ್ಧತಿ ಮೊದಲಿನಿಂದಲೂ ಚಾಲ್ತಿಯಲ್ಲಿದೆ. ಆದರೆ, ಗಜಪಡೆಯಲ್ಲಿ ಹಿರಿಯ ಹಾಗೂ ಅನುಭವಿ ಆನೆಗಳ ಸಂಖ್ಯೆ ಕ್ಷೀಣಿಸತೊಡಗಿದ್ದು, ಮುಂದಿನ 5ರಿಂದ 10 ವರ್ಷದ ನಂತರ ಚಿನ್ನದ ಅಂಬಾರಿ ಹೊರುವ ಸಾಮರ್ಥ್ಯವಿರುವ ಹೊಸ ಆನೆಗಳನ್ನು ಪಳಗಿಸುವ ಪ್ರಕ್ರಿಯೆಗೆ ಅರಣ್ಯ ಇಲಾಖೆ ಚಾಲನೆ ನೀಡಿದೆ. ಗಜಪಡೆಯ ಕ್ಯಾಪ್ಟನ್ ಅಭಿಮನ್ಯುವಿಗೆ ಈಗ 57 ವರ್ಷವಾಗಿದ್ದು, ಇನ್ನು ಮೂರು ವರ್ಷ ಅಂಬಾರಿ ಹೊರಲಿದ್ದಾನೆ. ಆ ಬಳಿಕ ವಯೋನಿವೃತ್ತಿ ಹೊಂದುವುದರಿಂದ ಅಭಿಮನ್ಯುವಿನ ಬಳಿಕ ಅಂಬಾರಿ ಹೊರುವ ಆನೆಗಳನ್ನು ಸಜ್ಜುಗೊಳಿಸುವ ಜವಾಬ್ದಾರಿ ಅರಣ್ಯ ಇಲಾಖೆ ಮುಂದೆ ಇದೆ.

ಇದರಿಂದ ಈ ಬಾರಿ ದಸರಾ ಗಜಪಡೆಯಲ್ಲಿ ಹೊಸ ಆನೆಗಳಿಗೆ ಮಣೆ ಹಾಕಲು ನಿರ್ಧರಿಸಲಾಗಿದೆ. ಅದಕ್ಕಾಗಿ ವಿವಿಧ ಪ್ರಯೋಗ ಮಾಡುವ ಮೂಲಕ ಗಜಪಡೆಗೆ ಕ್ಯಾಂಪ್‌ಗಳಲ್ಲೇ ತಾಲೀಮು ನಡೆಸುವುದಕ್ಕೆ ನಿರ್ಧರಿಸಲಾಗಿದೆ.

ಪಟಾಕಿ ಪರೀಕ್ಷೆ: ಈ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಪಡೆಯುವ ಆನೆಗಳೂ ಸೇರಿದಂತೆ ಸಂಭವನೀಯ ಆನೆಗಳಿಗೂ ಪರೀಕ್ಷೆ ಹಾಗೂ ವಿವಿಧ ತಾಲೀಮು ನಡೆಸಲು ನಿರ್ಧರಿಸಲಾಗಿದೆ. ಈ ಬಾರಿ 14 ರಿಂದ 16 ಆನೆಗಳನ್ನು ಅಂತಿಮಗೊಳಿಸಲಾಗುತ್ತದೆ. ಅಲ್ಲದೆ, 2–3 ಹೆಚ್ಚುವರಿ ಆನೆಗಳನ್ನು ಗುರುತಿಸಿ, ಕ್ಯಾಂಪ್‌ನಲ್ಲೇ ಕಾಯ್ದಿರಿಸಲು ನಿರ್ಧರಿಸಲಾಗಿದೆ.

ಹಿರಿಯ ಆನೆಗಳೊಂದಿಗೆ ಮೈಸೂರಿಗೆ ಬರುವ ಹೊಸ ಆನೆಗಳು ನಗರದಲ್ಲಿ ತಾಲೀಮಿನ ವೇಳೆ ವಾಹನ ಶಬ್ದ, ಸೈರನ್ ಶಬ್ದ ಹಾಗೂ ಸಿಡಿಮದ್ದಿನ ಶಬ್ದಕ್ಕೆ ಹೆದರದಂತೆ ನೋಡಿಕೊಳ್ಳಲು ಕ್ಯಾಂಪ್‌ಗಳಲ್ಲೇ ತರಬೇತಿ ಆರಂಭಿಸಲಾಗಿದೆ. ಆ ಕಾರಣದಿಂದ ದಸರಾ ಆನೆಗಳು ಬೀಡುಬಿಟ್ಟಿರುವ ಮತ್ತಿಗೂಡು, ದುಬಾರೆ ಕ್ಯಾಂಪ್‌ನಲ್ಲಿರುವ ಸಂಭವನೀಯ ಆನೆಗಳನ್ನು ಸಾಲಾಗಿ ನಿಲ್ಲಿಸಿ ಪಟಾಕಿ ಸಿಡಿಸಿ ತಾಲೀಮು ನಡೆಸಲಾಯಿತು. ಎರಡೂ ಕ್ಯಾಂಪ್‌ಗಳಲ್ಲೂ ಪಟಾಕಿ ಪರೀಕ್ಷೆ ನಡೆಸಲಾಯಿತು. ಈ ಪರೀಕ್ಷೆಯಲ್ಲಿ ಹಿರಿಯ ಆನೆಗಳೊಂದಿಗೆ ಹೊಸ ಆನೆಗಳು ಸಣ್ಣ ಪ್ರಮಾಣದ ಬೆದರಿಕೆ ಹೊರತುಪಡಿಸಿದರೆ, ಎಲ್ಲಾ ಆನೆಗಳ ವರ್ತನೆ ಪ್ರಶಂಸೆಗೆ ಪಾತ್ರವಾಗಿದೆ.

ಪಟಾಕಿ ಪರೀಕ್ಷೆ ಬಳಿಕ ಮುಖ್ಯ ರಸ್ತೆಯಲ್ಲಿ ಸಂಚರಿಸುವ ಭಾರಿ ವಾಹನಗಳ ಶಬ್ದಕ್ಕೆ ಹೊಂದಿಕೊಳ್ಳುವ ತರಬೇತಿಯನ್ನು ಆರಂಭಿಸಲಾಗಿದೆ. ಮುಖ್ಯ ರಸ್ತೆ ಪಕ್ಕದಲ್ಲೇ ಆನೆಗಳನ್ನು ನಿಲ್ಲಿಸಿ ವಾಹನಗಳ ಶಬ್ದ ಗ್ರಹಿಕೆ ಹಾಗೂ ವಾಹನಗಳಿಗೆ ಭಯಗೊಳ್ಳದಂತೆ ಗಜಪಡೆಯನ್ನು ಸಜ್ಜುಗೊಳಿಸಲಾಗಿತ್ತಿದೆ.

ಭಾರ ಹೊರಿಸುವ ಚಿಂತನೆ: ದಸರಾ ಮಹೋತ್ಸವ ನಂತರ ಕ್ಯಾಂಪ್‌ಗಳಿಗೆ ವಾಪಸಾದ ಬಳಿಕ ಹಲವು ಆನೆಗಳಿಗೆ ಯಾವುದೇ ತರಬೇತಿ ಇಲ್ಲದಂತಾಗುತ್ತದೆ. ಕ್ಯಾಪ್ಟನ್ ಅಭಿಮನ್ಯು ಹಾಗೂ ಕೆಲವು ಆನೆಗಳನ್ನು ಕಾಡಾನೆ ಸೆರೆ, ಹುಲಿ ಸೆರೆ, ಆನೆ, ಹುಲಿ ಕಾಡಿಗೆ ಓಡಿಸುವ ಕಾರ್ಯಾಚರಣೆಯಲ್ಲಿ ಬಳಸಿಕೊಂಡಾಗ ಮಾತ್ರ, ಅವುಗಳ ಬೆನ್ನಿನ ಮೇಲೆ ಗಾದಿ ಇರಿಸಲಾಗುತ್ತದೆ. ಉಳಿದ ಆನೆಗಳಿಗೆ ಬೆನ್ನಿನ ಮೇಲೆ ಯಾವುದೇ ಭಾರ ಹೊರಿಸುವುದಕ್ಕೆ ಮುಂದಾಗುವುದಿಲ್ಲ. ಇದರಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಆನೆಗಳ ಪೈಕಿ ಕೆಲವು ಗಾದಿ ಇಟ್ಟರೆ ಭಯ ಪಡುವ ವರ್ತನೆ ತೋರ್ಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಕ್ಯಾಂಪ್‌ನಲ್ಲಿರುವ ಆನೆಗಳಿಗೆ ಆಗಾಗ ಬೆನ್ನಿನ ಮೇಲೆ ಗಾದಿ ಕಟ್ಟಿ ಓಡಾಡಿಸುವ ತರಬೇತಿ ನೀಡುವ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲೂ ದಸರಾ ಗಜಪಡೆ ಅಣಿಗೊಳಿಸಬಹುದೆಂಬ ಮುಂದಾಲೋಚನೆ ಅರಣ್ಯ ಇಲಾಖೆ ಮುಂದೆ ಇದೆ.

ದುಬಾರೆ ಶಿಬಿರದಲ್ಲಿ ಪರಿಶೀಲನೆ: ದಸರಾ ಮಹೋತ್ಸವ ಸಮೀಪಿಸುತ್ತಿರುವುದರಿಂದ ಗಜಪಡೆ ಆಯ್ಕೆ ಪ್ರಕ್ರಿಯೆ ಅಂತಿಮ ಕಸರತ್ತು ನಡೆಸಲಾಗುತ್ತಿದ್ದು ದುಬಾರೆ ಆನೆ ಶಿಬಿರಕ್ಕೆ ಮೈಸೂರು ವನ್ಯಜೀವಿ ವಿಭಾಗ ಡಿಸಿಎಫ್ ಸೌರಭ್‌ಕುಮಾರ್ ನೇತೃತ್ವದ ತಂಡ ದುಬಾರೆ ಕ್ಯಾಂಪ್‌ಗೆ ಭೇಟಿ ನೀಡಿ 8 ಆನೆಗಳನ್ನು ಪರಿಶೀಲಿಸಿದೆ.

ಈ ಸಾಲಿನ ದಸರಾ ಮಹೋತ್ಸವ ಅ.15ರಿಂದ 24ರವರೆಗೆ ಜರುಗಲಿದ್ದು, ಜಂಬೂಸವಾರಿ ಉತ್ಸವಕ್ಕೂ 55 ದಿನ ಮುನ್ನವೇ ದಸರಾ ಗಜಪಡೆಯ ಮೊದಲ ತಂಡವನ್ನು ಕರೆತರಲು ನಿರ್ಧರಿಸಲಾಗಿದೆ. ಸೆ.1ರಂದು ಮೊದಲ ತಂಡದಲ್ಲಿ 6 ಆನೆಗಳು ವಿವಿಧ ಕ್ಯಾಂಪ್‌ಗಳಿಂದ ಕರೆತರಲಾಗುತ್ತದೆ. ಅದಕ್ಕಾಗಿ ಈಗಾಗಲೇ ಮತ್ತಿಗೂಡು, ಭೀಮನಕಟ್ಟೆ ಹಾಗೂ ದುಬಾರೆ ಕ್ಯಾಂಪ್‌ಗೆ ತೆರಳಿ ದಸರಾ ಗಜಪಡೆಗಾಗಿ ಆನೆಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ. ಇನ್ನು ಎರಡು ದಿನದಲ್ಲಿ ದೊಡ್ಡಹರವೆ ಕ್ಯಾಂಪ್‌ನಲ್ಲಿರುವ ಲಕ್ಷ್ಮೀ, ಬಳ್ಳೆ ಕ್ಯಾಂಪ್‌ನಲ್ಲಿರುವ ಅರ್ಜುನ (ನಿಶಾನೆ) ಹಾಗೂ ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿರುವ ಚೈತ್ರ, ರೋಹಿತ ಹಾಗೂ ಪಾರ್ಥಸಾರಥಿ ಆನೆಗಳನ್ನು ಪರಿಶೀಲಿಸಲಿದ್ದಾರೆ. ಆ.10ರೊಳಗೆ ಗಜಪಡೆಯ ಅಂತಿಮ ಪಟ್ಟಿ ತಯಾರಾಗಲಿದೆ.

ಪ್ರೆಗ್ನೆನ್ಸಿ ಟೆಸ್ಟ್ ವರದಿ ನಿರೀಕ್ಷೆಯಲ್ಲಿ

ಕಳೆದ ಬಾರಿ ಬಂಡೀಪುರದ ರಾಂಪುರ ಕ್ಯಾಂಪ್‌ನಿಂದ ಕರೆತರಲಾಗಿದ್ದ ಲಕ್ಷ್ಮೀ ಆನೆಯು ಅರಮನೆ ಆವರಣದಲ್ಲಿ ಗಂಡು (ದತ್ತಾತ್ರೇಯ) ಮರಿಗೆ ಜನ್ಮ ನೀಡಿದ್ದ ಹಿನ್ನೆಲೆಯಲ್ಲಿ ಈ ಬಾರಿ ದಸರಾ ಗಜಪಡೆಯಲ್ಲಿ ಕರೆತರಲು ಉದ್ದೇಶಿಸಿರುವ 4 ಹೆಣ್ಣಾನೆಗಳಿಗೆ ಕಡ್ಡಾಯವಾಗಿ ಪ್ರೆಗ್ನೆನ್ಸಿ ಟೆಸ್ಟ್ ನಡೆಸಲು ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಆಯ್ಕೆ ಮಾಡಲು ಗುರುತಿಸಿರುವ ಆರು ಹೆಣ್ಣಾನೆಗಳ ಪ್ರೆಗ್ನೆನ್ಸಿ ಟೆಸ್ಟ್‌ಗೆ ರಕ್ತ ಹಾಗೂ ಮೂತ್ರದ ಸ್ಯಾಂಪಲ್ ಅನ್ನು ದೆಹಲಿಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಈ ವರದಿ ಇನ್ನು 2–3 ದಿನದಲ್ಲಿ ಬರುವ ನಿರೀಕ್ಷೆಯಿದ್ದು, ಅದಕ್ಕಾಗಿ ಗಜಪಡೆಯ ಅಂತಿಮ ಪಟ್ಟಿ ಆಯ್ಕೆ ಮುಂದೂಡಿಕೆಯಾಗಿದೆ.

ಮೈಸೂರು ಆಂಗ್ಲೋ-ಇಂಡಿಯನ್ ಅಸೋಸಿಯೇಷನ್ ತಂಡ



ಇತ್ತೀಚೆಗೆ ನಡೆದ ವಾರ್ಷಿಕ ಮಹಾಸಭೆಯಲ್ಲಿ ಅಖಿಲ ಭಾರತ ಆಂಗ್ಲೋ–ಇಂಡಿಯನ್ ಅಸೋಸಿಯೇಷನ್ (ಎಐಎಐಎ), ಮೈಸೂರು ಶಾಖೆಗೆ 2023–24ನೇ ಸಾಲಿಗೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಕರ್ನಾಟಕದ ಗವರ್ನಿಂಗ್ ಬಾಡಿ ಮೆಂಬರ್ ಡಾ.ಲಾರೆನ್ಸ್ ಜೆನ್ಕಿನ್ಸ್ ಸಮಾರಂಭದ ಮುಖ್ಯ ಅತಿಥಿಯಾಗಿದ್ದರು. ಚಿತ್ರದಲ್ಲಿ (ಎಡದಿಂದ) ಗೌರವ ಕಾರ್ಯದರ್ಶಿ ಡಾ.ಲೆಸ್ಟರ್ ನೂನ್ಸ್; ಗೌರವ ಖಜಾಂಚಿ ಜಾಯ್ ಅಂತೋಣಿ ಡವ್; ಕಮಿಟಿ ಮೆಂಬರ್ ಕ್ರೈಗ್ ಪಾರ್ಕರ್; ಅಪರ ಖಜಾಂಚಿ ಇರೆನೆ ಮೇರಿ ಡವ್; ಅಪರ ಕಾರ್ಯದರ್ಶಿ ಬರ್ಬರ ಬ್ರೆಯರ್; ಉಪಾಧ್ಯಕ್ಷ ಗೆರಾರ್ಡ್ ಎಡ್ವರ್ಡ್ಸ್; ಡಾ.ಲಾರೆನ್ಸ್ ಜೆನ್ಕಿನ್ಸ್; ಅಧ್ಯಕ್ಷ ಆಲಿಸ್ಟರ್ ರೋಡ್ರಿಗಸ್; ಕಮಿಟಿ ಮೆಂಬರ್‌ಗಳಾದ ಜಾಕ್ವೆಲಿನ್ ರಾಜಾ, ಲೆವೆಲಿನ್ ರೋಡ್ರಿಗಸ್ ಇದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.3– 2023–24ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ/ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ https://shp.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ https://bcwd.karnataka. gov.in ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ದೂ.ಸಂ: 0821–2445447 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.hostels@karnataka.gov.inಗೆ ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ/ತಾಲೂಕು ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾಣೆಯಾದ ವ್ಯಕ್ತಿ ಪತ್ತೆಗೆ ಮನವಿ

ಮೈಸೂರು,ಆ.3–ಟಿ.ನರಸೀಪುರ ತಾಲೂಕಿನ ಕಂಚನಹಳ್ಳಿ ಗ್ರಾಮದ ಸಿದ್ದಮ್ಮ ಅವರ ಮಗ ಸಿದ್ದರಾಜು (35) ಜುಲೈ 14ರಂದು ಬೆಳಗ್ಗೆ 10.30 ಗಂಟೆಗೆ ಬೆಂಗಳೂರಿಗೆ ಹೋಗಿ ಬರುವೆ ಎಂದು ಹೇಳಿ ಹೋಗಿದ್ದಾಗ ಕಾಣೆಯಾಗಿರುವ ಪ್ರಕರಣ ಮೊ.ನಂ 240/2023 ಕಲಂನಲ್ಲಿ ಬನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದೆ.

ಚಹರೆ: ಮನೆಯಿಂದ ಹೊರಡುವ ಸಂದರ್ಭದಲ್ಲಿ ಸಿಮೆಂಟ್ ಕಲರ್ ಟೀ ಶರ್ಟ್, ಗೋಧಿ ಬಣ್ಣದ ಜರ್ಕಿನ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಕಾಣೆಯಾಗಿರುವ ವ್ಯಕ್ತಿಯು ಪತ್ತೆಯಾದಲ್ಲಿ ಬನ್ನೂರು ಪೊಲೀಸ್ ಠಾಣೆ ದೂ.ಸಂ: 08227–275632 ಅನ್ನು ಸಂಪರ್ಕಿಸಬಹುದು ಎಂದು ಬನ್ನೂರು ಪೊಲೀಸ್ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

76ನೇ ಸ್ವಾತಂತ್ರ್ಯ ಮಹೋತ್ಸವ ಪ್ರಯುಕ್ತ 'ಸ್ವರಾಜ್ಯ-ಸುರಾಜ್ಯ' ಶೀರ್ಷಿಕೆಯಡಿ

ಆ.12ರಂದು ಮೈಸೂರಲ್ಲಿ ಕವಿಗೋಷ್ಠಿ; ಆಸಕ್ತರಿಂದ ಕವಿತೆಗಳ ಆಹ್ವಾನ

ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನಿಂದ ಆಯೋಜನೆ

ಮೈಸೂರು, ಆ.3(ಪಿಎಂ)– ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ 76ನೇ ಸ್ವಾತಂತ್ರ್ಯ ಮಹೋತ್ಸವ ಪ್ರಯುಕ್ತ ಆ.12ರಂದು 'ಸ್ವರಾಜ್ಯ–ಸುರಾಜ್ಯ' ಶೀರ್ಷಿಕೆಯಡಿ ಮೈಸೂರಲ್ಲಿ ಕವಿಗೋಷ್ಠಿ ಏರ್ಪಡಿಸಿದ್ದು, ಆಸಕ್ತರಿಂದ ಕವಿತೆಗಳನ್ನು ಆಹ್ವಾನಿಸಲಾಗಿದೆ.

ಸ್ವಾತಂತ್ರ್ಯ ಯೋಧರು ತಮ್ಮ ಬದುಕಿನ ಸಂಭ್ರಮಕ್ಕೆ ತಿಲಾಂಜಲಿ ಕೊಟ್ಟಿದ್ದನ್ನು ನಾವು ಸ್ಮರಿಸಲೇಬೇಕು. ದೇಶವು ಇಬ್ಭಾಗವಾಗಿ ಲಕ್ಷಾಂತರ ಮಂದಿ ತಮ್ಮ ಜೀವನವನ್ನೇ ಕಳೆದುಕೊಂಡರು ಎಂಬುದೂ ನೆನಪಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಮ್ಮ ಸಾಹಿತ್ಯವೂ ಬೆಳಗಿತು. ನಂತರದ ದಿನಗಳಲ್ಲೂ ಅದರ ಛಾಪು ರಾಷ್ಟ್ರಭಕ್ತಿಯ ಉದ್ದೀಪನಕ್ಕೂ ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಕವಿಗೋಷ್ಠಿ ಏರ್ಪಡಿಸಿದ್ದು, ಯಾವುದೇ ವಯೋಭೇದವಿಲ್ಲದೆ ಎಲ್ಲರೂ ಈ ಕವಿಗೋಷ್ಠಿಯಲ್ಲಿ ಕವಿತೆಯನ್ನು ವಾಚಿಸಬಹುದು. ಕವಿತೆಯು ಭಾರತದ ಯಾವುದೇ ಭಾಷೆಯಲ್ಲಿಯೂ ಇರಬಹುದು. ಆದರೆ ಕನ್ನಡ ಸಾರಾಂಶವನ್ನೂ ಕವಿತೆಯೊಂದಿಗೆ ಕಳುಹಿಸಬೇಕು. ಆ.8ರೊಳಗೆ ಜಯಮಾಲ (72596 82938) ಅವರ ವಾಟ್ಸಾಪ್ ಸಂಖ್ಯೆಗೆ ಕವಿತೆಗಳನ್ನು ಕಳುಹಿಸಬೇಕು.

ವಿಷಯಕ್ಕೆ ಪೂರಕವಾಗಿ ಉತ್ತಮವಾಗಿರುವ ಕವಿತೆಗಳನ್ನು ಆಯ್ಕೆ ಮಾಡಿ, ಕವಿಗೋಷ್ಠಿಯಲ್ಲಿ ವಾಚಿಸಲು ಕವಿಗಳಿಗೆ ವೈಯಕ್ತಿಕವಾಗಿ ತಿಳಿಸಲಾಗುವುದು. ಉತ್ತಮ 3 ಕವಿತೆಗಳಿಗೆ ಕ್ರಮವಾಗಿ 1 ಸಾವಿರ, 750 ಹಾಗೂ 500 ರೂ.ಗಳ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಗುವುದು. ಕನಿಷ್ಠ 60 ಮತ್ತು ಗರಿಷ್ಠ 100 ಪದಗಳಲ್ಲಿ (ಸುಮಾರು 12ರಿಂದ 20 ಸಾಲುಗಳು) ಕವಿತೆಗಳು ಇರಬೇಕು. ಜಿಲ್ಲೆಯ ಕವಿತಾ ರಚನೆಕಾರರು ತಮ್ಮ ಕವಿತೆಗಳನ್ನು ಕಳುಹಿಸಬಹುದು. ಕವಿಗೋಷ್ಠಿಯ ಸ್ಥಳ ಹಾಗೂ ಸಮಯವನ್ನು ನಂತರ ಪ್ರಕಟಣೆಯಲ್ಲಿ ತಿಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯ ಮಟ್ಟದಲ್ಲೂ ಕವಿಗೋಷ್ಠಿ

ಮೈಸೂರು ಜಿಲ್ಲಾ ಸಮಿತಿಯಿಂದ ನಡೆಯುವ ಕವಿಗೋಷ್ಠಿಯಲ್ಲಿ ವಾಚಿಸಲ್ಪಟ್ಟ ಮೂರು ಉತ್ತಮ ಕವಿತೆಗಳನ್ನು (ಬಹುಮಾನಿತ ಕವಿತೆಗಳು) ರಾಜ್ಯ ಸಮಿತಿಗೆ ಕಳುಹಿಸಲಾಗುವುದು. ರಾಜ್ಯದ ವಿವಿಧ ಭಾಗಗಳಿಂದ ಈ ರೀತಿಯಲ್ಲಿ ಬರುವ ಕವಿತೆಗಳಲ್ಲಿ 25 ಕವಿತೆಗಳಿಗೆ ರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ವಾಚಿಸಲು ಅವಕಾಶ ದೊರೆಯಲಿದೆ. ಇಲ್ಲಿ ಆಯ್ಕೆಯಾಗುವ ಮೊದಲ ಮೂರು ಕವಿತೆಗಳಿಗೆ ಕ್ರಮವಾಗಿ 10 ಸಾವಿರ, 7 ಸಾವಿರ ಮತ್ತು 5 ಸಾವಿರ ರೂ. ನಗದು ಬಹುಮಾನ ಮತ್ತು ಪ್ರಮಾಣಪತ್ರ ದೊರೆಯಲಿದೆ.

ಬ್ಯೂಟಿಷಿಯನ್, ಹೊಲಿಗೆ ವೃತ್ತಿಗೆ ಉತ್ತಮ ಅವಕಾಶ



ಮೈಸೂರು,ಆ.3(ಜಿಎ)–ಬ್ಯೂಟಿಷಿಯನ್ ಮತ್ತು ಹೊಲಿಗೆ ವೃತ್ತಿಗೆ ಉತ್ತಮ ಅವಕಾಶಗಳು ದೊರೆಯುತ್ತಿವೆ ಎಂದು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಆರ್.ಎಚ್.ಪವಿತ್ರ ತಿಳಿಸಿದರು.

ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗ ಶಾಲೆಯಲ್ಲಿ ವಿಶ್ವ ಬ್ಯೂಟಿಷಿಯನ್ ದಿನದ ಅಂಗವಾಗಿ ಶ್ರೀ ದುರ್ಗಾ ಫೌಂಡೇಶನ್ ಹಾಗೂ ಶಿವಮೊಗ್ಗ ಬ್ಯೂಟಿಷಿಯನ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಎಲ್ಲರಿಗೂ ಸರ್ಕಾರಿ ಉದ್ಯೋಗ ದೊರೆಯಲು ಸಾಧ್ಯವಿಲ್ಲ. ಹೀಗಾಗಿ ಸ್ವ-ಉದ್ಯೋಗ ಪ್ರಾರಂಭಿಸಿ, ಮತ್ತಷ್ಟು ಮಂದಿಗೆ ಉದ್ಯೋಗ ನೀಡುವ ಮೂಲಕ ಮಾದರಿಯಾಗಿರಬೇಕು. ಹೆಣ್ಣು ಮಕ್ಕಳಿಗೆ ತಾನು ಸುಂದರವಾಗಿರಬೇಕೆನ್ನುವ ಹಂಬಲವಿದೆ. ದೇವರು ಕೊಟ್ಟ ನಮ್ಮ ರೂಪಕ್ಕೆ ಮೆರುಗು ಕೊಡುವ ಕೆಲಸ ಬ್ಯೂಟಿ ಪಾರ್ಲರ್‌ಗಳ ಮೂಲಕ ನಡೆಯುತ್ತಿದೆ. ಇದರಿಂದ ಮಹಿಳೆಯರಲ್ಲಿ ಈಗ ಸೌಂದರ್ಯಪ್ರಜ್ಞೆ ಹೆಚ್ಚುತ್ತಿದೆ. ಸ್ವಉದ್ಯೋಗ ಆರಂಭಿಸಿರುವ ಮಹಿಳೆಯರ ಸಾಧನೆಯನ್ನು ಶ್ಲಾಘಿಸಿದರು.

ಈ ವೇಳೆ ಶಿವಮೊಗ್ಗ ಬ್ಯೂಟಿಷಿಯನ್ ಅಸೋಸಿಯೇಷನ್ ಅಧ್ಯಕ್ಷೆ ಅಶ್ವಿನಿ ಪಿ.ಗೌಡ ಮಾತನಾಡಿ, ಮಹಿಳೆಯರು ಬ್ಯೂಟಿಷಿಯನ್ ಕೇಂದ್ರಗಳನ್ನು ತೆರೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ ಎಂದರು. 21ನೇ ಶತಮಾನದ ವೈಜ್ಞಾನಿಕ ಯುಗದಲ್ಲಿ ಮಹಿಳೆ ಪುರುಷನಷ್ಟೇ ಸಮರ್ಥಳು ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ನಗರ–ಗ್ರಾಮೀಣ ಪ್ರದೇಶವೆನ್ನದೆ ಸೌಂದರ್ಯಪ್ರಜ್ಞೆ ಎಲ್ಲ ವಯೋಮಾನದ ಮಹಿಳೆಯರಲ್ಲಿ ಮೂಡುತ್ತಿದೆ. ಬ್ಯೂಟಿ ಪಾರ್ಲರ್ ಉದ್ಯಮ ಬೇಡಿಕೆಯ ಉದ್ಯಮವಾಗಿದೆ. ಮಹಿಳೆಯರು ಕೂಡ ಯಶಸ್ವಿ ಉದ್ಯಮಿಗಳಾಗಲು ಅವಕಾಶ ಇದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಡಾ.ಶೋಭಾರಾಣಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಬ್ಯೂಟಿಷಿಯನ್ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಹಿರಿಯ ಬ್ಯೂಟಿಷಿಯನ್‌ಗಳಾದ ಮಾಲತಿ, ವಿನುತಾ ಆರ್.ಚೈತ್ರ ಮಹೇಶ್, ಟಿ.ಎನ್.ಗಂಗಾಂಬಿಕಾ, ಸುಮ ನಾಯ್ಡು ಅವರನ್ನು ಅಭಿನಂದಿಸಲಾಯಿತು. ನಂತರ ಶಾಲಾ ಮಕ್ಕಳಿಗೆ ಪಠ್ಯಪುಸ್ತಕ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷೆ ವೇದಾ ರೈ, ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ಉಪಾಧ್ಯಕ್ಷೆ ಅಹಲ್ಯ, ಪೊಲೀಸ್ ಟ್ರಾಫಿಕ್ ವಾರ್ಡನ್ ಮಾಲಿನಿ ಆರ್.ಫಾಲಾಕ್ಷ ಮುಖೋಪಾಧ್ಯಾಯಿನಿ ಸುಗುಣ, ಶ್ರೀದುರ್ಗಾ ಫೌಂಡೇಶನ್ ಉಪಾಧ್ಯಕ್ಷೆ ವಿದ್ಯಾ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ವಾರ್ಡ್ ನಂ.55ರ ಚಾಮುಂಡಿಪುರಂನ 1ನೇ ಮುಖ್ಯ ರಸ್ತೆಯ ಪಾದಚಾರಿ ಮಾರ್ಗಕ್ಕೆ ನಗರಪಾಲಿಕೆಯ 40 ಲಕ್ಷ ರೂ ವೆಚ್ಚ ಅನುದಾನದಲ್ಲಿ ಇಂಟರ್‌ಲಾಕ್ ಟೈಲ್ಸ್ ಅಳವಡಿಸುತ್ತಿದ್ದು, ಈ ಕಾರ್ಯಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಆಡಳಿತ ಪಕ್ಷದ ನಾಯಕ ಮತ್ತು ನಗರಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಮುಖಂಡರಾದ ಸಂದೀಪ್ ಚಂದ್ರಶೇಖರ್, ರಘುಅರಸ್, ಉಮಾಶಂಕರ್, ಪುರುಷೋತ್ತಮ್, ಶಿವಪ್ಪ, ರವಿ, ಮಂಜುನಾಥ್, ಡಿಸಿ ಮಂಜುಳಾ, ಲಲಿತಾಂಬ, ದೇವೇಂದ್ರ ಸ್ವಾಮಿ, ಸುರೇಶ್, ಮುರಳಿ, ಸುಬ್ರಮಣ್ಯನಾಯ್ಕ್, ಗೋವಿಂದ್, ಧನುಷ್, ನಾಗೇಂದ್ರ, ಪ್ರದೀಪ್ ಮತ್ತಿತರರಿದ್ದರು.

ಸೇನಾ ನೇಮಕಾತಿ ರ್‍ಯಾಲಿ; ಇಂದು ವೈದ್ಯಕೀಯ ಪರೀಕ್ಷೆ

● 1,723 ಪೈಕಿ 1,503 ಅಭ್ಯರ್ಥಿಗಳು ಭಾಗಿ ● 220 ಮಂದಿ ಗೈರು

ಮೈಸೂರು,ಆ.3(ಪಿಎಂ)– ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ಭಾರತೀಯ ಸೇನೆಯ ಅಗ್ನಿಪಥ್ ಯೋಜನೆಯಡಿಯ ಅಗ್ನಿವೀರ್ ಸೇನಾ ನೇಮಕಾತಿ ರ್‍ಯಾಲಿ ಪ್ರಕ್ರಿಯೆ ಗುರುವಾರ ಬಹುತೇಕ ಪೂರ್ಣಗೊಂಡಿದ್ದು, ಶುಕ್ರವಾರ (ಆ.4) ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ನಡೆಯಲಿದೆ.

ಇದೇ ಮಾರ್ಚ್‌ನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ರಾಜ್ಯದ 14 ಜಿಲ್ಲೆಗಳ ಒಟ್ಟು 1,723 ಪುರುಷ ಅಭ್ಯರ್ಥಿಗಳನ್ನು ರ್‍ಯಾಲಿಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು. ಅಂತೆಯೇ ದಿನಕ್ಕಿಷ್ಟು ಅಭ್ಯರ್ಥಿಗಳಂತೆ ಭಾಗವಹಿಸಲು ಅವಕಾಶ ಕಲ್ಪಿಸಿ, ಅವರಿಗೆ ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು. ಈ ಪೈಕಿ ಗುರುವಾರ ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ ಶುಕ್ರವಾರ ವೈದ್ಯಕೀಯ ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಪೂರ್ಣಗೊಳಿಸಲಾಗಿದೆ. ದಾಖಲೆಗಳು ಕ್ರಮಬದ್ಧವಾಗಿರುವ ಅಭ್ಯರ್ಥಿಗಳಿಗೆ ಶುಕ್ರವಾರ ವೈದ್ಯಕೀಯ ಪರೀಕ್ಷೆ ನಡೆಯಲಿದೆ. ರ್‍ಯಾಲಿಯ ಮೊದಲ ದಿನವಾದ ಆ.1ರಂದು ಆಹ್ವಾನಿಸಿದ್ದ 559 ಅಭ್ಯರ್ಥಿಗಳ ಪೈಕಿ 492 ಮಂದಿ ಪಾಲ್ಗೊಂಡಿದ್ದರೆ, 67 ಮಂದಿ ಗೈರು ಹಾಜರಿದ್ದರು. ಅಂತೆಯೇ 2ನೇ ದಿನವಾದ ಆ.2ರಂದು 741 ಅಭ್ಯರ್ಥಿಗಳ ಪೈಕಿ 652 ಮಂದಿ ಭಾಗವಹಿಸಿದ್ದರೆ, 89 ಮಂದಿ ಗೈರಾಗಿದ್ದರು. ಅದೇ ರೀತಿ 3ನೇ ದಿನವಾದ ಗುರುವಾರ (ಆ.3) 423 ಅಭ್ಯರ್ಥಿಗಳ ಪೈಕಿ 359 ಮಂದಿ ಭಾಗವಹಿಸಿದ್ದರೆ, 64 ಮಂದಿ ಗೈರು ಹಾಜರಿದ್ದರು. ಒಟ್ಟಾರೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ರ್‍ಯಾಲಿಯಲ್ಲಿ ಭಾಗವಹಿಸಲು ಆಹ್ವಾನಿತರಾಗಿದ್ದ 1,723 ಅಭ್ಯರ್ಥಿಗಳ ಪೈಕಿ 1,503 ಮಂದಿ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರೆ, ಒಟ್ಟು 220 ಮಂದಿ ಗೈರು ಹಾಜರಾಗಿದ್ದರು. ಭಾರತೀಯ ಸೇನಾ ನೇಮಕಾತಿಯ ಬೆಂಗಳೂರು ಕೇಂದ್ರ ಕಚೇರಿ ವತಿಯಿಂದ ರ್‍ಯಾಲಿ ನಡೆದಿದ್ದು, ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ ಹಾಗೂ ವೈದ್ಯಕೀಯ ಪರೀಕ್ಷೆಗಳ ವರದಿಯು ಸದರಿ ಕಚೇರಿಗೆ ತಲುಪಿದೆ. ಆ ಬಳಿಕ ಇಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.



ದೈಹಿಕ ಸಾಮರ್ಥ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳ ದಾಖಲಾತಿಗಳನ್ನು ಗುರುವಾರ ಪರಿಶೀಲನೆ ನಡೆಸುತ್ತಿರುವುದು.

ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಅವಶ್ಯಕ

ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಮಂಜುನಾಥ್



ಮಂಡ್ಯ,ಆ.3– ಪ್ರಸ್ತುತ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಅವಶ್ಯಕ. ಇಂದು ನಾವು ಎಷ್ಟು ಓದಿದ್ದೇವೆ. ಎಷ್ಟು ಪದವಿ ಪಡೆದಿದ್ದೇವೆ. ಎಷ್ಟು ಆವಿಷ್ಕಾರ ನಡೆಸಿದ್ದೇವೆ ಎನ್ನುವುದಕ್ಕಿಂತ ನಮ್ಮ ಜನರ ಮೇಲೆ ಎಷ್ಟು ಬೆಳಕು ಚೆಲ್ಲಿದ್ದೇವೆ ಎಂಬುದು ಮುಖ್ಯ ಎಂದು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ತಿಳಿಸಿದರು.

ಗುರುವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶ್ರೀವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಹಾಗೂ ಅಭಿನವ ಭಾರತಿ ಶಿಕ್ಷಣ ಸಮೂಹ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಶ್ರೀಅನಂತ ಕುಮಾರ ಸ್ವಾಮೀಜಿ ಅವರ 87ನೇ ಜನ್ಮದಿನ ಅಂಗವಾಗಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರದ ದಿನಗಳಲ್ಲಿ ದೇಶದಲ್ಲಿ ಶೇ.15ರಷ್ಟು ಸಾಕ್ಷರತೆ ಇತ್ತು. ಈಗ ಶೇ.85ರಷ್ಟು ಸಾಕ್ಷರತೆ ಇದೆ. ಹಿಂದೆ ಸಾಕ್ಷರತೆ ಕಡಿಮೆ ಇತ್ತು ಸಂಸ್ಕಾರ ಹೆಚ್ಚಿತ್ತು. ಈಗ ಸಾಕ್ಷರತೆ ಹೆಚ್ಚಿದೆ ಸಂಸ್ಕಾರ ಕಡಿಮೆಯಾಗಿದೆ ಎಂದು ಎಚ್ಚರಿಸಿದರು.

ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿ, ರೋಗ ಬರದಂತೆ ತಡೆದಿಡುವ ಒಂದು ಮದ್ದು. ಯೋಗ ಯೋಗಗಳನ್ನು ಹೇಳುವುದು ಸುಲಭ ಮಾಡುವುದು ಕಷ್ಟ. ಇಂದಿನ ದಿನಗಳಲ್ಲಿ ಜಾತಿ ಹೆಸರಿನಲ್ಲಿ ಸಮಾಜ ಕೆಡಿಸುವ, ಧರ್ಮ, ರಾಜಕೀಯದ ಹೆಸರಿನಲ್ಲಿ ಸಮಾಜ ವಿಂಗಡಿಸುವ ಕಾರ್ಯ ಸಾಗುತ್ತಿದೆ. ಆದರೆ ಅನಂತಕುಮಾರ ಸ್ವಾಮೀಜಿ ಅವರು ದೂರದ ಉತ್ತರ ಪ್ರದೇಶದಿಂದ ಮಂಡ್ಯಕ್ಕೆ ಬಂದಾಗ ಸ್ನೇಹಿತರೇ ಇರಲಿಲ್ಲ. ಎಸ್.ಡಿ.ಜಯರಾಂ ಆಶ್ರಯ ನೀಡಿದರು ಎಂದು ಸ್ಮರಿಸಿದರು.

ಅನಂತಕುಮಾರ ಸ್ವಾಮೀಜಿ ಮತ್ತು ನಾವೆಲ್ಲ ಒಂದು ಕ್ಲಿಷ್ಟಕರ ಸಂದರ್ಭ ಕಾರಾಗೃಹ ಅನುಭವಿಸುವಾಗ 19–20 ತಿಂಗಳು ಒಟ್ಟಿಗೆ ಇದ್ದೇವು. 20 ತಿಂಗಳು ಜೈಲಿನಲ್ಲಿರುವುದು ಅಷ್ಟು ಸುಲಭವಲ್ಲ. ಮಾನಸಿಕ ಸ್ಥಿತಿ ಬೇಕಾಗುತ್ತದೆ. ಅನೇಕ ದೊಡ್ಡ ದೊಡ್ಡ ವ್ಯಕ್ತಿಗಳು ಕಣ್ಣೀರು ಹಾಕುತ್ತಿದ್ದರು. ನೋವುಗಳನ್ನು ಅನುಭವಿಸುತ್ತಿದ್ದರು ಎಂದು ತಿಳಿಸಿದರು.

ಇದೇ ವೇಳೆ ಶಿಕ್ಷಣ ಮತ್ತು ಆಧ್ಯಾತ್ಮಕ ಕ್ಷೇತ್ರದಲ್ಲಿ ಪುರುಷೋತ್ತಮನಂದನಾಥ ಸ್ವಾಮೀಜಿ, ವೈದ್ಯಕೀಯ ಕ್ಷೇತ್ರದಲ್ಲಿ ಹೃದ್ರೋಗತಜ್ಞ ಡಾ.ಸಿ.ಎನ್.ಮಂಜುನಾಥ್, ಯೋಗ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ಯೋಗಾತ್ಮ ಶ್ರೀಹರಿ ಅವರಿಗೆ ಗಣ್ಯರ ಸಮ್ಮುಖದಲ್ಲಿ ಶ್ರೀಅನಂತ ಕುಮಾರ ಸ್ವಾಮೀಜಿ ಹೆಸರಿನಲ್ಲಿ ಕೊಡುವ ಶ್ರೀಅನಂತ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಡುಗೊರೆ ನೀಡಲಾಯಿತು.

ವೇದಿಕೆಯಲ್ಲಿ ಚಂದ್ರವನ ಆಶ್ರಮದ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಮಿಯಾಮಿ ಫ್ಲೋರಿಡಾ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಡಿ.ಹಲ್ಲೆಗೆರೆ ಮೂರ್ತಿ, ಶ್ರೀವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಶಿವಮೂರ್ತಿ ಕೀಲಾರ, ಶಿಕ್ಷಣ ಸಂಸ್ಥೆಗಳ ಶಿಕ್ಷಕವೃಂದ, ವಿದ್ಯಾರ್ಥಿಗಳು ಹಾಜರಿದ್ದರು.

ರಸ್ತೆ ಬಂದ್: ರಾಯಶೆಟ್ಟಿಪುರ ಗ್ರಾಮಸ್ಥರ ಪ್ರತಿಭಟನೆ



ಮಂಡ್ಯ, ಆ.3– ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ರಾಯಶೆಟ್ಟಿಪುರದಲ್ಲಿ ಸಾರ್ವಜನಿಕ ರಸ್ತೆ ಬಂದ್ ಮಾಡಿ ಕಬ್ಬು ಸಾಗಿಸಲು ಅಡ್ಡಿಪಡಿಸುತ್ತಿರುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ರಾಯಶೆಟ್ಟಿಪುರ ಗ್ರಾಮಸ್ಥರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆಯಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದ ಮಾಳೆ ಹಳ್ಳದಿಂದ ಹುಲ್ಲೇಕಟ್ಟೆ ಜಮೀನಿನವರೆಗೆ ಕಳೆದ 80 ವರ್ಷದಿಂದ ಸಾರ್ವಜನಿಕ ಬಂಡಿದಾರಿ ಇತ್ತು. ಇದೀಗ ರಾಜಕೀಯ ದ್ವೇಷದಿಂದ ಬಂಡಿದಾರಿ ಅತಿಕ್ರಮಿಸಿ ಜೆಸಿಬಿ ಮೂಲಕ ಮುಚ್ಚಿ, ರೈತ ಮಹಿಳೆ ವಿಜಯಮ್ಮರಿಗೆ ಕಬ್ಬು ಸಾಗಿಸಲು ಅಡ್ಡಿಪಡಿಸಿ ದೌರ್ಜನ್ಯ ಮಾಡಲಾಗಿದೆ ಎಂದು ದೂರಿದರು.

ಬಂಡಿದಾರಿಗೂ, ರಸ್ತೆಗೆ ಅಡ್ಡಿಪಡಿಸುತ್ತಿರುವ ಭೂ ಮಾಲೀಕತ್ವಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ ಗ್ರಾಪಂ ಚುನಾವಣಾ ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಕಬ್ಬು ಸಾಗಾಟಕ್ಕೆ ಅಡ್ಡಿಪಡಿಸಲಾಗುತ್ತಿದೆ. ಕಿಡಿಗೇಡಿಗಳ ವಿರುದ್ಧ ಕೆರಗೋಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದರೂ, ಕಾನೂನು ಕ್ರಮ ಕೈಗೊಂಡಿಲ್ಲ. ಬದಲಾಗಿ ತಹಸೀಲ್ದಾರ್ ಅವರಿಗೆ ವರದಿ ಸಲ್ಲಿಸಿ ಕೈ ತೊಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಸಾರ್ವಜನಿಕ ರಸ್ತೆ ಬಂದ್ ಮಾಡಿರುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅನ್ಯಾಯ, ಅಕ್ರಮಕ್ಕೆ ಕೆಲ ಪಟ್ಟಭದ್ರರು ಬೆಂಬಲ ನೀಡಿದ್ದು, ಅವರ ಒತ್ತಡಕ್ಕೆ ಮಣಿಯದೆ ಅಧಿಕಾರಿಗಳು ಕಾನೂನಿಗೆ ಮಾನ್ಯತೆ ನೀಡಿ ಕಬ್ಬು ಸಾಗಾಣಿಕೆಗೆ ಅವಕಾಶ ನೀಡಬೇಕು. ಸಾರ್ವಜನಿಕ ರಸ್ತೆ ಮುಚ್ಚಿರುವುದನ್ನು ತೆರವುಗೊಳಿಸಿ ಕಬ್ಬು ಸಾಗಾಣಿಕೆಗೆ ಪೊಲೀಸ್ ರಕ್ಷಣೆ ನೀಡಬೇಕು. ಮಾಳೆ ಹಳ್ಳದಿಂದ ಆಬಲವಾಡಿಗೆ ಹೋಗುವ ಬಂಡಿದಾರಿ ನಕಾಶೆ ರಸ್ತೆ ತೆರವುಗೊಳಿಸಿ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಬೇಕು. ದಲಿತರ ಸ್ಮಶಾನಕ್ಕೆ ಅಗತ್ಯವಿರುವ ಸರ್ವೆ ನಂ.20ರ ಗೋಮಾಳದ ಭೂಮಿಯಲ್ಲಿ ರಸ್ತೆ ಮಾಡಿಸಬೇಕು. ಸ್ಮಶಾನ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ದಸಂಸ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ, ಗ್ರಾಪಂ ಸದಸ್ಯ ಕೃಷ್ಣೇಗೌಡ, ವಿಜಯಮ್ಮ, ಆರ್.ಕೆಜಯರಾಮ್, ಯೋಗೇಶ್, ಕೃಷ್ಣ, ರಮೇಶ್, ಸುಷ್ಮಾ ಸೇರಿದಂತೆ ಗ್ರಾಮಸ್ಥರಿದ್ದರು.

ಶತಾಯುಷಿ ಸಾಕಮ್ಮ ನಿಧನ

ಭಾರತೀನಗರ, ಆ.3– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಗ್ರಾಮದ ನಿವಾಸಿ ಕಾಳಯ್ಯ ಅವರ ಪತ್ನಿ ಶತಾಯುಷಿ ಸಾಕಮ್ಮ(101) ಗುರುವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಚಿಕ್ಕರಸಿನಕೆರೆ ತೋಟದ ಮನೆಯಲ್ಲಿ ಶುಕ್ರವಾರ ಬೆಳಗ್ಗೆ 10 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.



ಪಾಂಡವಪುರ ಪ್ರೆಸ್‌ಕ್ಲಬ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ, ಆ.3– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಚಂದ್ರಕೀರ್ತಿ, ಉಪಾಧ್ಯಕ್ಷರಾಗಿ ಎಸ್.ನಾಗಸುಂದರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಕುಮಾರಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅದರಂತೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಚಂದ್ರಕೀರ್ತಿ ಹಾಗೂ ಉಪಾಧ್ಯಕ್ಷರಾಗಿ ಎಸ್.ನಾಗಸುಂದರ್, ಭಾಸ್ಕರ್ ಅವರನ್ನು ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಈ ವೇಳೆ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತಿಕೆರೆ ಜಯರಾಮು, ಕೆರಗೋಡು ಸೋಮಶೇಖರ್, ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್, ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಜಯರಾಮು, ಜಿಲ್ಲಾ ನಿರ್ದೇಶಕರಾದ ಶಿವನಂಜಯ್ಯ, ನಾಗೇಶ್, ಚನ್ನಮಾದೇಗೌಡ, ಸಂಘದ ಮಾಜಿ ಅಧ್ಯಕ್ಷ ಸಿ.ಎ.ಲೋಕೇಶ್, ಪ್ರಧಾನ ಕಾರ್ಯದರ್ಶಿ ರಘುವೀರ್, ಕಾರ್ಯದರ್ಶಿ ಅನಿಲ್ ಕುಮಾರ್, ಹಿರಿಯ ಪತ್ರಕರ್ತರಾದ ಚಂದ್ರಶೇಖರ್, ಎಸ್.ರವಿಕುಮಾರ್, ಬಾಲಕೃಷ್ಣ ಸೇರಿದಂತೆ ಹಲವರಿದ್ದರು.

ಚಿರತೆ, ಆನೆಗಳ ಹಾವಳಿಗೆ ಕಡಿವಾಣ ಹಾಕಲು ಒತ್ತಾಯ



ಮಂಡ್ಯ, ಆ.3– ಇತ್ತೀಚೆಗೆ ರಾಜ್ಯದಲ್ಲಿ ಮಾನವ–ಪ್ರಾಣಿ ಸಂಘರ್ಷ ಹೆಚ್ಚುತ್ತಲಿವೆ. ಕಾಡಿನಿಂದ ನಾಡಿಗೆ ಬರುವ ವನ್ಯಜೀವಿಗಳಿಂದ ಅನೇಕ ಸಾವು–ನೋವು ಸಂಭವಿಸಿವೆ. ಅಲ್ಲದೇ ರೈತರ ಬೆಳೆಗಳಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಒಂದು ಕಡೆ ಅತಿವೃಷ್ಟಿ–ಅನಾವೃಷ್ಟಿಯಂತಹ ಪ್ರಕೃತಿ ವಿಕೋಪದಿಂದ ಕಂಗೆಟ್ಟಿರುವ ರೈತರಿಗೆ ಕಾಡುಪ್ರಾಣಿಗಳಿಂದ ತಮ್ಮ ಬೆಳೆ ರಕ್ಷಿಸಿಕೊಳ್ಳುವ ಸಮಸ್ಯೆ ಎದುರಾಗಿದೆ. ಚಿರತೆ ಹಾವಳಿ ಬಳಿಕ ಇದೀಗ ಮಂಡ್ಯ ಜಿಲ್ಲೆಯಲ್ಲಿ ಆನೆಗಳ ಹಾವಳಿ ಪ್ರಾರಂಭವಾಗಿದೆ. ಇದು ರೈತರು ಸೇರಿದಂತೆ ಸ್ಥಳೀಯರನ್ನು ಕಂಗೆಡಿಸಿದ್ದು, ಇದರಿಂದ ಕೆಲ ತಾಲೂಕಿನ ಜನ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆನೆ ಹಾಗೂ ಚಿರತೆಗಳ ಹಾವಳಿ ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮದ್ದೂರು, ಶ್ರೀರಂಗಪಟ್ಟಣ, ಮಳವಳ್ಳಿ ತಾಲೂಕುಗಳಲ್ಲಿ 9 ಆನೆಗಳು ಕಳೆದ 12 ದಿನಗಳಿಂದ ಕಾಡಿನಿಂದ ನಾಡಿಗೆ ಬರುತ್ತಿವೆ. ದಿನದಿಂದ ದಿನಕ್ಕೆ ಇವುಗಳ ಉಪಟಳ ಹೆಚ್ಚುತ್ತಿದೆ. ಮದ್ದೂರು–ಮಳವಳ್ಳಿ ಹೆದ್ದಾರಿಗೆ ಹೊಂದಿಕೊಂಡಿರುವ ನೆಲಮಾಕನಹಳ್ಳಿಯಲ್ಲಿ ವಾರದ ಹಿಂದೆ ಆನೆಗಳ ಹಿಂಡು ದಾಳಿ ಮಾಡಿ 1 ಎಕರೆ ಕಬ್ಬಿನ ಬೆಳೆ ನಾಶ ಮಾಡಿತ್ತು. ಹೀಗಾದರೆ ರೈತನ ನೆಮ್ಮದಿ ಜೀವನ ಹಾಳಾಗುತ್ತಿದೆ. ಕಾಡುಪ್ರಾಣಿಗಳ ಉಪಟಳದಿಂದ ತಾವು ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗಿಬಿಡಬಹುದು ಎಂಬ ಆತಂಕದಲ್ಲಿ ಯಾವೊಬ್ಬ ರೈತನೂ ಸರಿಯಾಗಿ ನಿದ್ದೆ ಮಾಡದ ಪರಿಸ್ಥಿತಿ ಇದೆ ಎಂದು ವಿಷಾದಿಸಿದ್ದಾರೆ.

ಮದ್ದೂರು ತಾಲೂಕಿನ ಬನ್ನಳ್ಳಿ, ಅಜ್ಜಳ್ಳಿ ಗ್ರಾಮಗಳ ಹೊಲಕ್ಕೆ ಈ ಆನೆಗಳ ಹಿಂಡು ನುಗ್ಗಿತ್ತು. ಮಳವಳ್ಳಿ ತಾಲೂಕಿನ ಯಲದಳ್ಳಿ ಗ್ರಾಮದಲ್ಲಿ ಕಾಣಿಸಿಕೊಂಡಿತ್ತು. ಹಲಗೂರು ಸಮೀಪ ನಂದಿಪುರದಲ್ಲಿ ತೆಂಗಿನ ಮರಗಳನ್ನೇ ಕೆಡವಿ ಹಾಕಿವೆ. ಹೀಗೆ ಪ್ರತಿದಿನ ಒಂದಲ್ಲ ಒಂದು ಕಡೆ ಆನೆಗಳ ಹಿಂಡು, ಹಗಲು ರಾತ್ರಿ ಎನ್ನದೇ ದಾಳಿ ಮಾಡಿ ಬೆಳೆನಾಶ ಮಾಡುತ್ತಿದೆ. ಇದರಿಂದ ಈ ಭಾಗದ ಜನ ಭಯಭೀತರಾಗಿದ್ದಾರೆ. ರೈತರು ಬೆಳೆದ ಭತ್ತ, ಕಬ್ಬು ಬೆಳೆಗಳು ನಿರಂತರವಾಗಿ ನಾಶವಾಗುತ್ತಿವೆ. ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ತೆರಳಲು ಆತಂಕಪಡುತ್ತಿದ್ದಾರೆ. ಎಲ್ಲಿ ಆನೆಗಳು ಬಂದು ಬಿಡುತ್ತವೋ ಎಂಬ ಭಯದಲ್ಲಿಯೇ ಅಲ್ಲಿ ಸ್ಥಳೀಯ ಜನರು ಹೆಜ್ಜೆ ಇಡದಂತೆ ಆಗಿದೆ. ಹೀಗಾಗಿ ಈ ಕೂಡಲೇ ರೈತರ ಬೆಳೆ ರಕ್ಷಣೆ ಮಾಡಬೇಕು. ಇದುವರೆಗೆ ಆದ ಬೆಳೆ ಹಾನಿಗೆ ಪರಿಹಾರ ನೀಡಬೇಕು. ಈ ಕೆಲಸ ಅರಣ್ಯ ಇಲಾಖೆಯಿಂದ ಈ ಕೂಡಲೇ ಆಗಬೇಕು ಎಂದು ಮನವಿ ಮಾಡಿದ್ದಾರೆ.

ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಆ.3– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆ.5 ರಿಂದ 30ರವರೆಗೆ ಉದರದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಆ.5 ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರ, ಆ.8 ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಆ.9 ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಆ.17 ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಆ.18 ರಂದು ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸರ್ಕಾರಿ ಆಸ್ಪತ್ರೆ, ಆ.19 ಪಾಂಡವಪುರ ಉಪವಿಭಾಗ ಆಸ್ಪತ್ರೆ, ಆ.22 ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಆ.23 ಮದ್ದೂರು ತಾಲೂಕು ಆಸ್ಪತ್ರೆ, ಆ.24 ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಆ.29 ರಂದು ಪಾಂಡವಪುರ ಉಪವಿಭಾಗ ಆಸ್ಪತ್ರೆ, ಆ.30 ರಂದು ಕೆರೆಗೋಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಂಧುಘಟ್ಟ ಗ್ರಾಪಂಗೆ ದಿವ್ಯ ಅಧ್ಯಕ್ಷೆ, ನಂಜಪ್ಪ ಉಪಾಧ್ಯಕ್ಷ



ಕೆ.ಆರ್.ಪೇಟೆ, ಆ.3– ತಾಲೂಕಿನ ಶೀಳನೆರೆ ಹೋಬಳಿ ಸಿಂಧುಘಟ್ಟ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ದಿವ್ಯ ಗಿರೀಶ್, ಉಪಾಧ್ಯಕ್ಷರಾಗಿ ನಂಜಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಗ್ರಾಪಂನ 2ನೇ ಅವಧಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಗುರುವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ದಿವ್ಯ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಂಜಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ, ತಾಪಂ ಇಓ ಸತೀಶ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಪಿಡಿಓ ನವೀನ್, ಕಾರ್ಯದರ್ಶಿ ನಂಜಪ್ಪ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆ ದಿವ್ಯ ಮಾತನಾಡಿ, ನನ್ನ ಅವಿರೋಧ ಆಯ್ಕೆಗೆ ಕಾರಣರಾದ ಶಾಸಕ ಹೆಚ್.ಟಿ.ಮಂಜು, ಜೆಡಿಎಸ್ ತಾಲೂಕು ಅಧ್ಯಕ್ಷ ಜಾನಕೀರಾಂ, ಹೆಚ್.ಟಿ.ಲೋಕೇಶ್ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ನನ್ನ ಅಧಿಕಾರಾವಧಿಯಲ್ಲಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ನೀರು, ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದಾಗಿ ತಿಳಿಸಿದರು.

ಈ ವೇಳೆ ಪಿಡಿಓ ಎ.ಎನ್.ನವೀನ್, ಗ್ರಾಪಂ ಮಾಜಿ ಅಧ್ಯಕ್ಷ ನವೀನ್, ಮಾಜಿ ಅಧ್ಯಕ್ಷೆ ಆಶಾ ಸದಸ್ಯರಾದ ಸೋಮಶೇಖರ್, ಲಾವಣ್ಯ, ರೂಪ, ಸುಮಲತಾ, ರಾಜೇಶ್ವರಿ, ರೂಪ, ನಾಗೇಶ್, ಇರ್ಫಾನ್, ಸೋಮಶೇಖರ್, ರಾಜೇಗೌಡ, ಮಂಜೇಗೌಡ, ಹರಳಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಭೈರಾಪುರ ಹರೀಶ್ ಸೇರಿದಂತೆ ಇತರರಿದ್ದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ಪ್ರಸಕ್ತ ಸಾಲಿನಲ್ಲಿ 4031 ಕೋಟಿ ಅನುದಾನ ಹೆಚ್ಚಳ

● ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟನೆ ● ಪರಿಶಿಷ್ಟರ ಕಲ್ಯಾಣ ಯೋಜನೆ ಅನುದಾನ ಕಡಿತವಾಗಿಲ್ಲ; ಅನ್ಯ ಉದ್ದೇಶಕ್ಕೆ ಬಳಕೆಯಾಗಿಲ್ಲ



ಮೈಸೂರು, ಆ.3(ಎಂಕೆ)–ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯಡಿ 2023–24ನೇ ಸಾಲಿನಲ್ಲಿ ಒಟ್ಟಾರೆ 34,294 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಅನುದಾನದ ಪ್ರಮಾಣವು ಶೇ.13 ರಷ್ಟು ಅಂದರೆ ಸುಮಾರು 4,031 ಕೋಟಿ ರೂಪಾಯಿಗಳಷ್ಟು ಹೆಚ್ಚಳವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕಾಯ್ದೆಯಡಿ ಅನುದಾನ ಹಂಚಿಕೆ ಮಾಡಲಾಗಿದೆ. ಅದರಂತೆ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮಗ್ರ ಅಭಿವೃದ್ಧಿಗೆ ಬದ್ಧವಾಗಿದ್ದು, ಇದಕ್ಕೆ ಪೂರಕವಾಗಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆ 2013ರ ಸೆಕ್ಷನ್ 7(ಡಿ) ಯನ್ನು ಕೈಬಿಡಬೇಕೆಂಬ ಸಮುದಾಯಗಳ ಬೇಡಿಕೆಗೆ ಸ್ಪಂದಿಸಿ 7(ಡಿ) ಅನ್ನು ರದ್ದುಪಡಿಸುವ ಕೆಲಸವನ್ನು ಮಾಡಿದೆ ಎಂದು ಮಾಹಿತಿ ನೀಡಿದ್ದಾರೆ.

ಇಷ್ಟೇ ಅಲ್ಲದೇ ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ನೀಡುತ್ತಿದ್ದ 50 ಲಕ್ಷ ರೂ. ಗುತ್ತಿಗೆ ಮೊತ್ತದ ಪ್ರಮಾಣವನ್ನು 1 ಕೋಟಿ ರೂ.ಗೆ ಏರಿಸಿದೆ. ಇದರೊಂದಿಗೆ ಪಿಟಿಸಿಎಲ್ ಕಾಯ್ದೆಗೆ ಇದ್ದ ಕಾಲಮಿತಿಯನ್ನು ರದ್ದುಪಡಿಸುವ ಮೂಲಕ ಚುನಾವಣೆಗೂ ಮುನ್ನ ನೀಡಿದ್ದ ಭರವಸೆಯಂತೆ ನಡೆದುಕೊಳ್ಳಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಏಳಿಗೆಗಾಗಿ ನಮ್ಮ ಸರ್ಕಾರವು ಈ ಹಿಂದೆ ನುಡಿದಂತೆಯೇ ನಡೆದುಕೊಂಡಿದ್ದು ಶೋಷಿತ ಸಮುದಾಯಗಳ ಮೇಲೆ ನಮಗಿರುವುದು ಕರುಣೆ ಮಾತ್ರವಲ್ಲ ಜವಾಬ್ದಾರಿ ಎಂಬ ಸಂದೇಶವನ್ನೂ ಸಹ ಸ್ಪಷ್ಟವಾಗಿಯೇ ನೀಡಿದ್ದೇವೆ ಎಂದಿದ್ದಾರೆ.

ಈ ಬಾರಿಯ ಆಯವ್ಯಯದಲ್ಲಿ 7(ಡಿ) ಅನ್ನು ರದ್ದು ಮಾಡಿದ ನಂತರದಲ್ಲಿ 2022–23ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕಾಯ್ದೆಯಡಿ ವಿವಿಧ ಇಲಾಖೆಗಳಿಗೆ ಡೀಮ್ಡ್ ವೆಚ್ಚ ಸೇರಿ ಹಂಚಿಕೆ ಮಾಡಲಾಗಿದ್ದ 7,450.80 ಕೋಟಿ ರೂ.ಹಣವು 2023–24ನೇ ಸಾಲಿನಲ್ಲಿ ಸುಮಾರು 2,787.33 ಕೋಟಿ ರೂ.ಗೆ ಇಳಿಕೆಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಈ ಡೀಮ್ಡ್ ಹಂಚಿಕೆಯನ್ನು ರದ್ದುಪಡಿಸಿರುವ ಕಾರಣ ಸರ್ಕಾರದ ವಿವಿಧ ಇಲಾಖೆಗಳಿಗೆ ನೀಡುತ್ತಿದ್ದ ಅನುದಾನದ ಪ್ರಮಾಣವನ್ನು ಕಡಿತಗೊಳಿಸಿ ಅದನ್ನು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅಧಿನಿಯಮ 2103 ರ ಅನ್ವಯ ಪ.ಜಾತಿ/ ಪರಿಶಿಷ್ಟ ಪಂಗಡದವರಿಗೆ ನೇರವಾಗಿ ಪ್ರಯೋಜನವಾಗುವ ವೈಯಕ್ತಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಲು ಅವಕಾಶವಿದ್ದು, ಈ ನಿಯಮದ ಅಡಿಯಲ್ಲಿ ಅನುಸೂಚಿತ ಜಾತಿ ಉಪಯೋಜನೆಗಳು ಹಾಗೂ ಬುಡಕಟ್ಟು ಉಪಯೋಜನೆಗಳ ಅಡಿಯಲ್ಲಿ ಇತರೆ ಸಮುದಾಯಗಳೊಂದಿಗೆ ಪ.ಜಾತಿ/ ಪ.ಪಂಗಡದ ವ್ಯಕ್ತಿಗಳು ಮತ್ತು ಕುಟುಂಬಗಳಿಗೆ ಪ್ರಯೋಜನ ಒದಗಿಸುವ ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಮುಂತಾದ ಸಾಮಾನ್ಯ ಸಾಮಾಜಿಕ ವಲಯದ ಯೋಜನೆಗಳನ್ನು ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕಾಯ್ದೆಯಡಿ ಸೇರಿಸಲು ಅವಕಾಶವಿರುತ್ತದೆ.

ಅದರಂತೆಯೇ ಕಳೆದ 10 ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಿಗೆ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈಗಲೂ ಸಹ ಇದೇ ಆಧಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಅವರ ಬದುಕಿಗೆ ನೇರ ಪ್ರಯೋಜನ ಆಗುತ್ತಿರುವ ಹಿನ್ನಲೆಯಲ್ಲಿ ನಿಯಮಾವಳಿಗಳ ಅಡಿಯಲ್ಲೇ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯಡಿ ಭಾಗಶಃ ಅನುದಾನವನ್ನು ನೀಡಲಾಗಿದ್ದು, ಇಲ್ಲಿ ಎಲ್ಲಿಯೂ ಕೂಡಾ ಕಾಯ್ದೆಯ ನಿಯಮಾವಳಿಗಳನ್ನು ಮೀರಿಲ್ಲ ಮತ್ತು ಅದರ ಆಶಯಗಳಿಗೆ ಧಕ್ಕೆ ಆಗುವಂತೆ ನಡೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಖಂಡನೆ: ಹೀಗಿದ್ದರೂ ಕೂಡ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾಗಿದ್ದ ಹಣವನ್ನು ಈ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರವು ಕಾಯ್ದೆಯ ಆಶಯಕ್ಕೆ ವಿರುದ್ಧವಾಗಿ ಬೇರೆ ಬೇರೆ ಕಾಮಗಾರಿಗಳಿಗೆ ಬಳಸಿಕೊಂಡಿತ್ತು. ಇಂತಹ ಪಕ್ಷದ ನಾಯಕರು ಈ ದಿನ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ನಮ್ಮ ಸರ್ಕಾರದ ಬಗ್ಗೆ ಟೀಕಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದ್ದು ನೈತಿಕತೆ ಇಲ್ಲದೇ ಮಾತನಾಡುತ್ತಿರುವ ಇವರ ಮಾತುಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇನೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ 'ನಮ್ಮ ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗ'ದ ವತಿಯಿಂದ ಹಿನಕಲ್‌ನ ಸರ್ಕಾರಿ ಪ್ರೌಢಶಾಲೆ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ, ಲೇಖನಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್, ಗ್ರಾಪಂ ಮಾಜಿ ಸದಸ್ಯರಾದ ಕೆ.ಜಿ.ನಾಗರಾಜ್, ಶ್ರೀನಿವಾಸ್, ನಗರಾಧ್ಯಕ್ಷ ಹೆಬ್ಬಾಳ್ ವಿಜಯ್, ಜಿಲ್ಲಾಧ್ಯಕ್ಷ ಬೋಗಾದಿ ಮಾದೇವಸ್ವಾಮಿ, ಕನಕ ಮಹಿಳಾ ಶಕ್ತಿ ಅಧ್ಯಕ್ಷೆ ಕಮಲ ಅನಂತರಾಮ್, ಕಿರಣ್ ಬ್ರಾಡ್ವೇ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದಾಚಾರ್, ಶಾಲೆಯ ಮುಖ್ಯ ಶಿಕ್ಷಕಿ ಪ್ರಮೀಳಾ ಇತರರಿದ್ದರು.



ಮೈಸೂರು ತಾಲೂಕಿನ ಯಡಕೊಳ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಪುಟ್ಟಮ್ಮ ರಾಮು, ಉಪಾಧ್ಯಕ್ಷರಾಗಿ ಶಿಲ್ಪ ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾದರು. ಇವರನ್ನು ಯಡಕೊಳ ಗ್ರಾಪಂ ಸದಸ್ಯರು, ಸಿದ್ದರಾಮನಹುಂಡಿ ಗ್ರಾಮಸ್ಥರು, ಮುಖಂಡರು ಅಭಿನಂದಿಸಿದರು. ಈ ವೇಳೆ ಬಸವರಾಜು, ಎಪಿಎಂಸಿ ಮಾಜಿ ನಿರ್ದೇಶಕ ಕೆಂಪಿರಯ್ಯ, ಜಿಪಂ ಮಾಜಿ ಸದಸ್ಯ ಪುಟ್ಟಣ್ಣ, ತಾಪಂ ಮಾಜಿ ಅಧ್ಯಕ್ಷ ಸಿದ್ದರಾಮು, ಗೌತಮ್, ಮಂಜುನಾಥ್, ನಾಗರಾಜ್, ರಾಮಣ್ಣ, ನಂಜುಂಡೇಗೌಡ ಇದ್ದರು.

ಕೈ ಕೊಟ್ಟ ಬ್ಯಾಟ್ಸ್‌ಮನ್ಸ್; ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ಸೋಲು



ತರೌಬಾ, ಟ್ರಿನಿಡಾಡ್, ಆ.3(ಸಿಎನ್)– ಕರಾರುವಾಕ್ ಬೌಲಿಂಗ್ ದಾಳಿಯ ನೆರವಿನಿಂದ ಭಾರತದ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕಿದ ವೆಸ್ಟ್ ಇಂಡೀಸ್ ಮೊದಲ ಟಿ–20 ಪಂದ್ಯದಲ್ಲಿ 4 ರನ್‌ಗಳಿಂದ ಜಯ ಗಳಿಸಿದೆ. ಆ ಮೂಲಕ 5 ಟಿ–20 ಸರಣಿ ಪೈಕಿ 1–0 ಅಂತರದಲ್ಲಿ ವೆಸ್ಟ್ ಇಂಡೀಸ್ ಮುನ್ನಡೆ ಕಾಯ್ದುಕೊಂಡಿದೆ.

ಇಲ್ಲಿನ ಬ್ರಿಯಾನ್ ಲಾರಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮೊದಲ ಟಿ–20 ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 149 ರನ್ ಗಳಿಸಿತು. 150 ರನ್‌ಗಳ ಗುರಿ ಬೆನ್ನಟ್ಟಿದ ಭಾರತ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಪರಾಭವಗೊಂಡಿತು.

ವೆಸ್ಟ್ ಇಂಡೀಸ್ ಪರ ನಾಯಕ ರೊವ್ಮನ್ ಪೊವೆಲ್ 32 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 3 ಬೌಂಡರಿ ಒಳಗೊಂಡ 48 ರನ್ ಗಳಿಸಿದರು. ಇನ್ನೊಂದೆಡೆ ಉತ್ತಮ ಸಾಥ್ ನೀಡಿದ ನಿಕೋಲಾಸ್ ಪೂರನ್ 34 ಎಸೆತಗಳಲ್ಲಿ 2 ಸಿಕ್ಸ್ ಹಾಗೂ 2 ಬೌಂಡರಿ ಒಳಗೊಂಡ 41 ರನ್ ಗಳಿಸಿದರು. ಬ್ರಾಂಡನ್ ಕಿಂಗ್ 28 ರನ್ ಗಳಿಸಿ ತಂಡದ ಮೊತ್ತವನ್ನು 149ಕ್ಕೆ ಕೊಂಡೊಯ್ದರು.

ಭಾರತದ ಪರ ಅರ್ಶದೀಪ್, ಚಹಾಲ್ ತಲಾ ಎರಡು ವಿಕೆಟ್, ಕುಲ್ದೀಪ್ ಯಾದವ್, ಹಾರ್ದಿಕ್ ಪಾಂಡ್ಯ ತಲಾ ಒಂದು ವಿಕೆಟ್ ಉರುಳಿಸಿದರು.

150 ರನ್‌ಗಳ ಗುರಿ ಬೆನ್ನತ್ತಿದ ಭಾರತ, ಆರಂಭಿಕ ಆಟಗಾರರಾದ ಇಶಾನ್ ಕಿಶಾನ್, ಶುಭ್‌ಮನ್ ಗಿಲ್ ವಿಫಲರಾದರು. ಸೂರ್ಯ ಕುಮಾರ್ ಯಾದವ್ 21 ಎಸೆತಗಳಲ್ಲಿ 1 ಸಿಕ್ಸರ್ ಹಾಗೂ 2 ಬೌಂಡರಿ ಒಳಗೊಂಡ 21 ರನ್ ಗಳಿಸಿದರು. ಬಿರುಸಿನ ಬ್ಯಾಟಿಂಗ್ ಆಡಿದ ತಿಲಕ್ ವರ್ಮಾ 22 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 2 ಬೌಂಡರಿ ಒಳಗೊಂಡ 39 ರನ್ ಗಳಿಸಿದರು. ಬಳಿಕ ಹಾರ್ದಿಕ್ ಪಾಂಡ್ಯ 19 ರನ್ ಗಳಿಸಿದ್ದು ಬಿಟ್ಟರೆ ಉಳಿದವರು ಮುಗ್ಗರಿಸಿದರು. ಕೊನೆಗೆ ಟೀಮ್ ಇಂಡಿಯಾ 4 ರನ್‌ಗಳಿಂದ ಪರಾಭವಗೊಂಡಿತು.

ವೆಸ್ಟ್ ಇಂಡೀಸ್ ಪರ ರೊಮಾರಿಯೋ ಶಫರ್ಡ್, ಜೇಸನ್ ಹೋಲ್ಡರ್, ಒಬೆಡ್ ಮೆಕಾಯ್ ತಲಾ 2 ವಿಕೆಟ್ ಪಡೆದರೆ, ಅಕೀಲ್ ಹೊಸೈನ್ ತಲಾ ಒಂದು ವಿಕೆಟ್ ಪಡೆದರು. ಜೇಸನ್ ಹೋಲ್ಡರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರುಚಿಕಟ್ಟಾದ ಗೋಲ್ಗಪ್ಪ ಅಡಿ ಹರಿದಾಡುತ್ತಿದ್ದ ಹುಳು ಕಂಡು ಹೌಹಾರಿದ ಗ್ರಾಹಕರು!



ಮೈಸೂರು, ಆ.3– ಕೊಳೆತ ಈರುಳ್ಳಿ, ಆಲೂಗಡ್ಡೆ ಬಳಸಿ, ಪಾನಿಪುರಿ ಗೋಲ್ಗಪ್ಪ ಮಾಡುತ್ತಿದ್ದ ಬೀದಿಬದಿ ವ್ಯಾಪಾರಿಯನ್ನು ಸಾರ್ವಜನಿಕರು ತರಾಟೆಗೆ ತೆಗೆದುಕೊಂಡಿರುವ ಘಟನೆ ಮೈಸೂರಿನಲ್ಲಿ ವರದಿಯಾಗಿದೆ.

ನಗರದ ಹಾರ್ಡಿಂಜ್ ವೃತ್ತದ ಬಳಿ ಫುಟ್‌ಪಾತ್‌ನಲ್ಲಿ ಗೋಲ್ಗಪ್ಪ ಸವಿಯಲು ಹೋದವರು, ಅಲ್ಲಿದ್ದ ಆಲೂಗಡ್ಡೆ ಹಾಗೂ ಈರುಳ್ಳಿ ಕೊಳೆತಿರುವುದನ್ನು ಗಮನಿಸಿ, ಹೌಹಾರಿದ್ದಾರೆ. ಅಲ್ಲದೆ ಪಾನಿಯಲ್ಲೂ ಹುಳು ಬಿದ್ದಿರುವುದನ್ನು ಕಂಡು ಬೆಚ್ಚಿಬಿದ್ದಿದ್ದಾರೆ. ಈ ಬಗ್ಗೆ ವ್ಯಾಪಾರಿಯನ್ನು ಪ್ರಶ್ನಿಸಿದರೂ ಆತ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಪಾನಿಪುರಿ ಪ್ರಿಯರಲ್ಲಿ ಆತಂಕ ಸೃಷ್ಟಿಸುವ ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಹೊರರಾಜ್ಯಗಳಿಂದ ಬಂದಿರುವ ಹಲವರ ಬದುಕಿಗೆ ಪಾನಿಪುರಿ ಗೋಲ್ಗಪ್ಪ ವ್ಯಾಪಾರ ಆಸರೆಯಾಗಿದೆ. ಮತ್ತೊಂದೆಡೆ ಉಳ್ಳವರೇ ಬಂಡವಾಳ ಹೂಡಿ ಕಂಡ ಕಂಡಲ್ಲಿ ಗೋಲ್ಗಪ್ಪ ಮಾರಾಟ ಮಾಡಿ ಸುತ್ತಿದ್ದಾರೆ. ವ್ಯಾಪಾರ ಮಾಡುವವರಿಗೆ ದಿನಗೂಲಿ ಕೊಟ್ಟು ಭಾರೀ ಆದಾಯ ಬಾಚುತ್ತಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯುವಕ–ಯುವತಿಯರು ಮಾತ್ರವಲ್ಲದೆ ವೃದ್ಧರೂ ಕೂಡ ಗೋಲ್ಗಪ್ಪ ರುಚಿಗೆ ಮಾರುಹೋಗಿದ್ದಾರೆ. ಬೀದಿಯಲ್ಲಿ ನಿಂತು ಒಂದೊಂದೇ ಗೋಲ್ಗಪ್ಪ ಸವಿಯುವುದು ಟ್ರೆಂಡ್ ಆಗಿದೆ. ಆದರೆ ಕಳಪೆ ಗುಣಮಟ್ಟದ ಆಲೂಗಡ್ಡೆ, ಈರುಳ್ಳಿ ಬಳಸಿ, ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುತ್ತಿರುವ ಆತಂಕಕಾರಿ ಸಂಗತಿ. ಎಲ್ಲೆಂದರಲ್ಲಿ ಗೋಲ್ಗಪ್ಪ ಮಾರಾಟ ಮಾಡುತ್ತಿದ್ದರೂ ನಗರ ಪಾಲಿಕೆ ಆರೋಗ್ಯಾಧಿಕಾರಿಗಳು ಕನಿಷ್ಠ ಪ್ರಾಥಮಿಕ ಪರಿಶೀಲನೆಯನ್ನೂ ಮಾಡಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೂರಿಯೊಳಗೆ ಆಲೂಗಡ್ಡೆ, ಈರುಳ್ಳಿ ಮಿಶ್ರಣ ಹಾಕಿ, ಪಾನಿಯಲ್ಲಿ ಅದ್ದಿ ಕೊಟ್ಟರೆ ಆಹಾ ಎಂದು ಸವಿಯುತ್ತೇವೆ. ಆ ಸಂದರ್ಭದಲ್ಲಿ ಪದಾರ್ಥಗಳ ಗುಣಮಟ್ಟ ಗಮನಕ್ಕೆ ಬರುವುದಿಲ್ಲ. ಇದು ತುಂಬಾ ಗಂಭೀರವಾದ ಸಂಗತಿ. ನಿರ್ಲಕ್ಷ್ಯ ಮಾಡದೆ ಸಂಬಂಧಪಟ್ಟವರು ಸೂಕ್ತ ಕ್ರಮ ವಹಿಸಬೇಕು. ದುರಾಸೆಯಿಂದ ಹೀಗೆ ಮಾಡುವ ಕೆಲ ವ್ಯಾಪಾರಿಗಳಿಂದ ಜೀವನೋಪಾಯಕ್ಕೆ ಗೋಲ್ಗಪ್ಪ ಮಾರುವವರಿಗೂ ತೊಂದರೆಯಾಗುತ್ತದೆ. ಈ ಬಗ್ಗೆಯೂ ಗಮನಹರಿಸಬೇಕು. ಮೊದಲಿಗೆ ಸಾರ್ವಜನಿಕರು ಜಾಗೃತವಾಗಿರಬೇಕು ಎಂದು ಮನವಿ ಮಾಡಿದ್ದಾರೆ.

ಸಿದ್ಧಾರ್ಥನಗರ, ಆಲನಹಳ್ಳಿ ಬಡಾವಣೆಯಲ್ಲಿ ಶಾಸಕ ಶ್ರೀವತ್ಸ ಪಾದಯಾತ್ರೆ; ಸಾರ್ವಜನಿಕರ ಅಹವಾಲು ಸ್ವೀಕಾರ



ಮೈಸೂರು, ಆ.3(ಎಂಕೆ)– ಮೈಸೂರಿನ ವಾರ್ಡ್ ನಂ.53ರ ವ್ಯಾಪ್ತಿಯ ಸಿದ್ಧಾರ್ಥನಗರ, ಆಲನಹಳ್ಳಿ ಬಡಾವಣೆಯಲ್ಲಿ ಪಾದಯಾತ್ರೆ ನಡೆಸಿದ ಶಾಸಕ ಟಿ.ಎಸ್. ಶ್ರೀವತ್ಸ, ಮನೆ ಮನೆಗೆ ತೆರಳಿ ಜನರ ಕುಂದು–ಕೊರತೆಗಳನ್ನು ಆಲಿಸಿದರಲ್ಲದೆ ಬಗೆಹರಿಸುವ ಭರವಸೆ ನೀಡಿದರು.

ಗುರುವಾರ ಬೆಳಗ್ಗೆ ಆಲನಹಳ್ಳಿ ಬಡಾವಣೆಯಲ್ಲಿರುವ ಗಣಪತಿ ದೇವಸ್ಥಾನದಿಂದ ಪಾದಯಾತ್ರೆ ಆರಂಭಿಸಿದ ಶಾಸಕರು, ಮನೆ ಮನೆಗೆ ತೆರಳಿ ಸಮಸ್ಯೆಗಳು ಆಲಿಸಿದರು. ಈ ವೇಳೆ ಸ್ಥಳದಲ್ಲಿಯೇ ಹಲವು ಸಮಸ್ಯೆಗಳಿಗೆ ಸ್ಪಂದಿಸಿದರಲ್ಲದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚನೆ ನೀಡಿದರಲ್ಲದೆ ಅಧಿಕಾರಿಗಳು ಸಮಸ್ಯೆಗಳನ್ನು ಬಗೆಹರಿಸಿದ್ದರೆ ನೇರವಾಗಿ ಕರೆ ಮಾಡಿ ಮಾಹಿತಿ ನೀಡುವಂತೆ ತಿಳಿಸಿದರು.

ವ್ಹೀಲಿಂಗ್ ತಪ್ಪಿಸಿ: ಬಡಾವಣೆ ಸುತ್ತಮುತ್ತ ಬೈಕ್ ವ್ಹೀಲಿಂಗ್ ಮಾಡುವ ಪುಂಡರ ಸಂಖ್ಯೆ ಹೆಚ್ಚಾಗಿದೆ. ರಸ್ತೆಯಲ್ಲಿ ತಿರುಗಾಡುವುದೇ ಕಷ್ಟವಾಗುತ್ತಿದ್ದು, ವ್ಹೀಲಿಂಗ್ ಮಾಡುವವರನ್ನು ಬಂಧಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಕೂಡಲೇ ಈ ಸಂಬಂಧ ಬಡಾವಣೆ ವ್ಯಾಪ್ತಿಯ ಪೊಲೀಸರೊಂದಿಗೆ ಮಾತನಾಡಿ, ಮುಂಜಾಗ್ರತೆ ವಹಿಸುವಂತೆ ತಿಳಿಸಲಾಗುವುದು ಎಂದರಲ್ಲದೆ ಸ್ಥಳದಲ್ಲಿಯೇ ಇದ್ದ ಪೊಲೀಸರಿಗೆ ವ್ಹೀಲಿಂಗ್ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಉಪ ಮೇಯರ್ ಡಾ.ರೂಪ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ಜೆ.ರಮೇಶ್, ಬಿಜೆಪಿ ಮುಖಂಡರಾದ ವಿನಯ್ ಪಾಂಚಜನ್ಯ, ಬಾಬು, ಶ್ರೀನಿವಾಸ್, ವಾಣೀಶ್ ಕುಮಾರ್, ಪ್ರದೀಪ್ ಕುಮಾರ್, ಜೋಗಿ ಮಂಜು, ಶಿವರಾಜ್, ನಿಶಾಂತ್, ಕಿಶೋರ್ ಮತ್ತಿತರರಿದ್ದರು.

ರುಡ್‌ಸೆಟ್ ಸಂಸ್ಥೆಯಿಂದ ದ್ವಿಚಕ್ರ ವಾಹನಗಳ ರಿಪೇರಿ; ಸರ್ವಿಸಿಂಗ್ ತರಬೇತಿ ಕಾರ್ಯಕ್ರಮ




ಮೈಸೂರು, ಆ. 3–ರುಡ್‌ಸೆಟ್ ಸಂಸ್ಥೆಯು ಎನ್.ಆರ್.ಎಲ್.ಎಂ. ಮೈಸೂರು ಜಿಲ್ಲಾ ಪಂಚಾಯತ್ ಪ್ರಾಯೋಜಕತ್ವದಲ್ಲಿ 30 ದಿನಗಳ ಉದ್ಯಮಶೀಲತಾಭಿವೃದ್ಧಿ ದ್ವಿಚಕ್ರ ವಾಹನಗಳ ರಿಪೇರಿ ಮತ್ತು ಸರ್ವಿಸಿಂಗ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸುಜುಕಿ ಶೋ ರೂಂ ಇಂಜಿನಿಯರ್ ಯತೀಶ್, ಜ್ಯೋತಿ ಬೆಳಗುವುದರ ಮೂಲಕ ತರಬೇತಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಇಂದಿನ ಜಾಗತೀಕರಣ ಜಗತ್ತಿನಲ್ಲಿ ತಂತ್ರಜ್ಞಾನದ ಜೊತೆಗೆ ಆಟೋಮೊಬೈಲ್ ಸರ್ವಿಸಿಂಗ್ ಕ್ಷೇತ್ರ ವಿನೂತನ ರೀತಿಯಲ್ಲಿ ಬದಲಾವಣೆಗೆ ತೆರೆದುಕೊಳ್ಳುತ್ತಾ ಆಧುನಿಕತೆಯಲ್ಲಿ ಹೊಸ ಛಾಪನ್ನು ಮೂಡಿಸಿದೆ ಎಂದು ಅಭಿಪ್ರಾಯಪಟ್ಟರು.

ಬದಲಾಗುತ್ತಿರುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ವೃತ್ತಿಯಲ್ಲಿ ಆದಾಯ ಹೆಚ್ಚುತ್ತದೆ. ಜೊತೆಗೆ ದುಡಿಯುವ ಕೈಗಳಿಗೆ ಕೆಲಸ ದೊರೆಯುತ್ತದೆ. ಇದನ್ನು ಪ್ರೇರೇಪಿಸುವ ಉದ್ದೇಶದಿಂದ ಪೂರಕವಾಗಿ ರುಡ್‌ಸೆಟ್ ಸಂಸ್ಥೆಯಲ್ಲಿ ದ್ವಿಚಕ್ರ ವಾಹನಗಳ ರಿಪೇರಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಎಲ್ಲಾ ಕೆಲಸಗಳಿಗೂ ತಮ್ಮದೇ ಆದ ಹಿರಿಮೆ ಇರುತ್ತದೆ. ಯಾವ ಕೆಲಸವೂ ಕೀಳಲ್ಲ. ಪ್ರತಿ ಕೆಲಸವನ್ನು ಶ್ರದ್ಧೆ ಮತ್ತು ಪ್ರೀತಿಯಿಂದ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಕಲಿಕೆಗೆ ಕೊನೆಯಿಲ್ಲ. ಪ್ರತಿ ಸನ್ನಿವೇಶಗಳಿಂದಲೂ ಕೆಲಸದಿಂದಲೂ ಹೊಸದಾಗಿ ಕಲಿಕೆಗೆ ಅವಕಾಶಗಳು ಇರುತ್ತವೆ. ಪ್ರಸ್ತುತ ದಿನಗಳಲ್ಲಿ ಬೇಡಿಕೆಯಿರುವಂತಹ ದ್ವಿಚಕ್ರ ವಾಹನಗಳ ಸರ್ವಿಸಿಂಗ್ ವೃತ್ತಿಯನ್ನು ಆಯ್ಕೆ ಮಾಡಿ ತರಬೇತಿಗೆ ಬಂದಿರುವುದು ನಿಮ್ಮ ಜೀವನದಲ್ಲಿ ಹೊಸ ತಿರುವನ್ನು ಸೃಷ್ಟಿ ಮಾಡುತ್ತದೆ ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮ ದಲ್ಲಿ ಸುಜುಕಿ ಶೋ ರೂಂ ಗ್ರಾಹಕ ಸಂಬಂಧಿ ಆಫೀಸರ್ ಶಿಲ್ಪ, ರುಡ್‌ಸೆಟ್ ಸಂಸ್ಥೆ ನಿರ್ದೇಶಕರಾದ ಕೆ.ಎಸ್.ಸರಿತಾ, ಸಂಸ್ಥೆಯ ಉಪನ್ಯಾಸಕರಾದ ಆರ್. ಪಾಲ್‌ರಾಜ್, ಲತಾ ಮಣಿ ಮತ್ತಿತರರು ಹಾಜ ರಿದ್ದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ವಾಹನ, ಆಟೋ ಸಂಚಾರ ನಿರ್ಬಂಧ ಸರಿಯಲ್ಲ



ಮೈಸೂರು, ಆ.3– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ವಾಹನ, ಆಟೋ ಸೇರಿದಂತೆ ಕೆಲ ವಾಹನಗಳಿಗೆ ನಿರ್ಬಂಧ ಹೇರಿರುವುದು ಸರಿಯಲ್ಲ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದ್ದಾರೆ.

ಎಕ್ಸ್‌ಪ್ರೆಸ್ ವೇ ಅವೈಜ್ಞಾನಿಕವಾಗಿ ನಿರ್ಮಾಣವಾಗಿದೆ ಎಂದಿರುವ ಅವರು, ಈ ರಸ್ತೆಯನ್ನು ಎಕ್ಸ್‌ಪ್ರೆಸ್ ಕಾರಿಡಾರ್ ಎಂದು ಒಪ್ಪಲು ಸಾಧ್ಯವಿಲ್ಲ. ದೆಹಲಿ ಮತ್ತು ಆಗ್ರಾ ನಡುವಿನ ಎಕ್ಸ್‌ಪ್ರೆಸ್ ಕಾರಿಡಾರ್ ಸರ್ವಿಸ್ ರಸ್ತೆ ಹೊರತುಪಡಿಸಿ ಹತ್ತು ಪಥಗಳನ್ನು ಹೊಂದಿದೆ. ಅದನ್ನು ಎಕ್ಸ್‌ಪ್ರೆಸ್ ಕಾರಿಡಾರ್ ಎಂದು ಕರೆಯುವುದು ಸರಿ. ಆದರೆ, ಈ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ನಿರ್ಮಾಣ ಮಾಡಿದ್ದು, ಇದನ್ನು ಎಕ್ಸ್‌ಪ್ರೆಸ್ ಕಾರಿಡಾರ್ ಎಂದು ಒಪ್ಪಲು ಸಾಧ್ಯವೇ ಇಲ್ಲ ಎಂದರು. ಎಕ್ಸ್‌ಪ್ರೆಸ್ ಕಾರಿ ಡಾರ್ ಅಲ್ಲದಿರುವ ಈ ರಸ್ತೆಯಲ್ಲಿ ದ್ವಿಚಕ್ರ ವಾಹನ, ಆಟೋ ಸೇರಿದಂತೆ ಸಣ್ಣ ವಾಹನಗಳ ಸಂಚಾರ ನಿಷೇಧಿಸಿರುವುದು ಸರಿಯಾದ ಕ್ರಮವಲ್ಲ. ಅವರಿಂದಲೂ ಟೋಲ್ ಶುಲ್ಕ ವಸೂಲಿ ಮಾಡಿ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದ ಅವರು, ಟೋಲ್ ಶುಲ್ಕ ಕಟ್ಟಲು ಶಕ್ತಿ ಇಲ್ಲದವರು ಸರ್ವಿಸ್ ರಸ್ತೆಯಲ್ಲಿ ಹೋಗುತ್ತಾರೆ. ಶುಲ್ಕ ಕಟ್ಟುವವರನ್ನು ಈ ರಸ್ತೆಯಲ್ಲಿ ಬಿಡಲೇ ಬೇಕು ಎಂದು ಆಗ್ರಹಿಸಿದ್ದಾರೆ.

ಆ.6ರಂದು ಈವಿವಿ ಕಾರ್ಯ ಯೋಜನೆಗೆ ಚಾಲನೆ

ಮೈಸೂರು, ಆ.3– ಮೈಸೂರಿನ ಯಾದವಗಿರಿ, 2ನೇ ಮುಖ್ಯ ರಸ್ತೆಯ 'ಜ್ಞಾನ ಪ್ರಕಾಶ ಭವನ'ದಲ್ಲಿ ಆ.6ರಂದು ಭಾನುವಾರ ಸಂಜೆ 6.30ಕ್ಕೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ 'ಸಕಾರಾತ್ಮಕ ಬದಲಾವಣೆಯ ವರ್ಷ 2023–24' ಕಾರ್ಯಯೋಜನೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಾನ್ನಿಧ್ಯ ಹಾಗೂ ಉದ್ಘಾಟನೆಯನ್ನು ಸುತ್ತೂರು ಕ್ಷೇತ್ರದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಯವರು ನೆರವೇರಿಸಲಿದ್ದು, ಮುಖ್ಯ ಅತಿಥಿಯಾಗಿ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭಾಗವಹಿಸಲಿದ್ದಾರೆ. ಧಿಕ್ಸೂಚಿ ಭಾಷಣವನ್ನು ಅಬು ಪರ್ವತದ ಈವಿವಿ ಆಡಳಿತಾಧಿಕಾರಿಗಳ ಸೇವಾ ವರ್ಗದ ಅಧ್ಯಕ್ಷೆ ರಾಜಯೋಗಿನಿ ಬಿ.ಕೆ. ಆಶಾಜಿ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಈವಿವಿ ಮೈಸೂರು ಉಪ ವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ ವಹಿಸಲಿದ್ದಾರೆ. ವಿಶೇಷ ಅತಿಥಿಯಾಗಿ ಭೂಮಾಪನಾ ತರಬೇತಿ ಸಂಸ್ಥೆಯ ಭೂ ದಾಖಲೆಗಳ ಜಂಟಿ ನಿರ್ದೇಶಕ ಪ್ರಾಂಶುಪಾಲರು ಆಗಮಿಸಲಿದ್ದಾರೆ ಎಂದು ಸಂಸ್ಥೆಯ ಹಿರಿಯ ಸಹೋದರಿ ಬಿ.ಕೆ. ಜಯಂತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು, ಕೊಡಗು ಸೇರಿದಂತೆ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅತೀ ಹೆಚ್ಚು ಮಾದಕ ವಸ್ತು ಸೇವನೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಿಂದ ಸ್ಫೋಟಕ ಮಾಹಿತಿ

- ಮೈಸೂರು, ಕೊಡಗಿಗೆ ಕೇರಳ ಮೂಲಕ ಡ್ರಗ್ಸ್ ಕಳ್ಳ ಸಾಗಾಣಿಕೆ
- ಹೆಚ್.ಡಿ.ಕೋಟೆ, ಪಿರಿಯಾಪಟ್ಟಣಕ್ಕೆ ಹೋಗಿ ಖರೀದಿ
- ಮೈಸೂರು, ಕೊಡಗಿನಲ್ಲಿ ಬೇಡಿಕೆ ಹೆಚ್ಚಿದಂತೆ ಪೂರೈಕೆ ವ್ಯವಸ್ಥೆ
- ಭಾರತದಲ್ಲಿ 37.80 ಕೋಟಿ ಜನರಿಂದ ಮಾದಕ ವಸ್ತು ಬಳಕೆ



■ ಬಾಪುಲಿಂಗ ರಾಜ್ ಅರಸ್

ಮೈಸೂರು, ಆ.3– ಮತ್ತಿನಲ್ಲಿ ತೇಲಾಡಿಸಿ, ಕೊನೆಗೆ ಜೀವಕ್ಕೆ ಆಪತ್ತು ತರುವ ಗಾಂಜಾ, ಅಫೀಮು, ಹೆರಾಯಿನ್ ಸೇರಿದಂತೆ ಇತರೆ ಮಾದಕ ವಸ್ತುಗಳ ಬಳಕೆ ದಿನ ಕಳೆದಂತೆ ಹೆಚ್ಚಾಗುತ್ತಿದೆ. ಮೈಸೂರು, ಕೊಡಗು, ಬೆಂಗಳೂರು ಸೇರಿದಂತೆ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅತೀ ಹೆಚ್ಚಾಗಿ ಮಾದಕ ವಸ್ತುಗಳನ್ನು ಬಳಸಲಾಗುತ್ತಿದೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ನಡೆಸಿರುವ ರಾಷ್ಟ್ರೀಯ ಸಮೀಕ್ಷೆಯಲ್ಲಿ ಈ ಆತಂಕಕಾರಿ ವಿಷಯ ಬಯಲಾಗಿದೆ.

ಇತ್ತೀಚಿನ ದಿನದಲ್ಲಿ ಮಾದಕ ವಸ್ತುಗಳ ಮಾರಾಟ ಭರಾಟೆ ಜೋರಾಗಿದೆ. ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರೂ ಅಜ್ಞಾತ ಸ್ಥಳಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಹೆಚ್ಚು ಹಣ ಕೊಟ್ಟರೆ ಮಾದಕ ವ್ಯಸನಿಗಳು ಇರುವ ಸ್ಥಳಗಳಿಗೆ ಡ್ರಗ್ಸ್ ತಲುಪುತ್ತಿದೆ. ಇತ್ತೀಚೆಗೆ ಮಾದಕ ವಸ್ತು ಮಿಶ್ರಿತ ಚಾಕೊಲೇಟ್ ಕೂಡ ಮಾರಾಟವಾಗುತ್ತಿದೆ. ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕಲು ಪೊಲೀಸರು ಟೊಂಕಕಟ್ಟಿ ನಿಂತಿದ್ದರೂ ಅವರ ಕಣ್ಣು ತಪ್ಪಿಸಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಾ ಡ್ರಗ್ಸ್ ಮಾರುಕಟ್ಟೆಯನ್ನು ವಿಸ್ತರಿಸಲಾಗುತ್ತಿದೆ.

ಸಂಸ್ಕೃತಿಯ ಹೆಗ್ಗುರುತಾಗಿರುವ ಮೈಸೂರನ್ನು ಸಾಂಸ್ಕೃತಿಕ ನಗರಿ, ಶಾಂತ ನಗರಿ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಆದರೆ ಮೈಸೂರಿನಲ್ಲಿ ಮಾದಕ ವಸ್ತುಗಳ ಮಾರಾಟ ಸದ್ದಿಲ್ಲದೆ ನಡೆಯುತ್ತಿದೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ನಡೆಸಿರುವ ಸಮೀಕ್ಷೆ ಇದನ್ನು ಸಾರಿ ಸಾರಿ ಹೇಳುತ್ತದೆ.

ಯುವ ಪೀಳಿಗೆ ಮಾದಕ ವಸ್ತುಗಳಿಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ಹಿನ್ನೆಲೆ ತಂದೆ–ತಾಯಿಗಳು ಮಕ್ಕಳ ಬಗ್ಗೆ ಗಮನ ಹರಿಸಬೇಕು. ಅವರ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಮಾದಕ ವಸ್ತುಗಳ ಬಳಸುತ್ತಿದ್ದರೆ ಕೂಡಲೇ ಎಚ್ಚೆತ್ತು ಮಾದಕ ವ್ಯಸನಿಗಳ ಬಗ್ಗೆ ಕರುಣೆ ತೋರಬೇಕು. ಸೂಕ್ತ ಚಿಕಿತ್ಸೆ ನೀಡಿ ಮನಃಪರಿವರ್ತನೆ ಮಾಡಬೇಕು.



– ಡಾ.ಸುಧಾರಾಣಿ, ಮಾನಸಿಕ ತಜ್ಞರು

ಮೈಸೂರು ಮಾತ್ರವಲ್ಲದೆ ಪಕ್ಕದ ಜಿಲ್ಲೆ ಕೊಡಗು, ರಾಮನಗರ, ಬೆಂಗಳೂರು, ಕೋಲಾರ, ಉಡುಪಿ ಜಿಲ್ಲೆಯಲ್ಲಿ ಮಾದಕ ವಸ್ತುಗಳನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಅಂದರೆ ಮಾದಕ ವಸ್ತುಗಳ ಭರಾಟೆ ಇಲ್ಲಿ ಜೋರಾಗಿದೆ ಎಂದರ್ಥ.

ಮೈಸೂರು ಮತ್ತು ಕೊಡಗಿನಲ್ಲಿ ಮಾದಕ ವಸ್ತುಗಳು ಹೆಚ್ಚಾಗಿ ಮಾರಾಟವಾಗಲು ಪ್ರಮುಖ ಕಾರಣ, ನೆರೆಯ ಕೇರಳ. ವಿದೇಶಗಳಿಂದ ಕಳ್ಳ ಸಾಗಣಿಕೆ ಮೂಲಕ ಬರುವ ಮಾದಕ ವಸ್ತುಗಳನ್ನು ಸುಲಭವಾಗಿ ಮೈಸೂರು ಮತ್ತು ಕೊಡಗು ಜಿಲ್ಲೆಗೆ ಸಾಗಿಸಿ, ಮಾರಾಟ ಮಾಡಲಾಗುತ್ತಿದೆ. ಬಹಳಷ್ಟು ಮಾದಕ ವ್ಯಸನಿಗಳು ಕೇರಳದಿಂದ ಕಳ್ಳ ಸಾಗಾಣಿಕೆಯಿಂದ ಬರುವ ಡ್ರಗ್ಸ್‌ಗಳನ್ನು ಖರೀದಿಸಲು ಗಡಿ ಭಾಗವಾದ ಹೆಚ್.ಡಿ.ಕೋಟೆ ಹಾಗೂ ಪಿರಿಯಾಪಟ್ಟಣಕ್ಕೆ ಹೋಗುವುದಿದೆ.

ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಕರು ಮಾದಕ ವಸ್ತುಗಳ ಮಾರಾಟಗಾರರಿಗೆ ಟಾರ್ಗೆಟ್ ಆಗಿದ್ದಾರೆ. ಮಾದಕ ವಸ್ತುಗಳ ನಶೆ ನೆತ್ತಿಗೇರಿಸಿ, ವ್ಯಸನಿಗಳನ್ನಾಗಿ ಮಾಡುತ್ತಿರುವ ಮಾದಕ ವಸ್ತುಗಳ ಮಾರಾಟಗಾರರು ಕೋಟ್ಯಂತರ ರೂಪಾಯಿ ಹಣ ಸಂಪಾದನೆ ಮಾಡುತ್ತಿದ್ದಾರೆ. ಬೇಡಿಕೆ ಹೆಚ್ಚಾದಂತೆ ಮಾದಕ ವಸ್ತುಗಳ ಮಾರುಕಟ್ಟೆಯನ್ನು ದಿನ ಕಳೆದಂತೆ ವಿಸ್ತರಿಸಿಕೊಳ್ಳುತ್ತಿದ್ದಾರೆ. ಗಾಂಜಾ, ಕೊಕೇನ್, ಹೆರಾಯಿನ್, ಎಂಡಿಎಂಎ ಸೇರಿದಂತೆ ಇತರೆ ಮಾದಕ ವಸ್ತುಗಳು ಮೈಸೂರು, ಕೊಡಗು, ಬೆಂಗಳೂರು ಸೇರಿದಂತೆ ಕರ್ನಾಟಕ ಆರು ಜಿಲ್ಲೆಗಳಲ್ಲಿ ಅತೀ ಹೆಚ್ಚಾಗಿ ಮಾರಾಟವಾಗುತ್ತಿದೆ. ಸಿಲಿಕಾನ್ ಸಿಟಿ ಬೆಂಗಳೂರಂತೂ ಡ್ರಗ್ಸ್ ಮಾರುಕಟ್ಟೆಗೆ ಹಬ್ ಆಗಿದೆ. ಕರ್ನಾಟಕ ಸೇರಿದಂತೆ ಇಡೀ ದೇಶದಲ್ಲಿ ಮಾದಕ ವಸ್ತುಗಳನ್ನು ಬಳಕೆ ಮಾಡುತ್ತಿರುವವರ ಬಗ್ಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ರಾಷ್ಟ್ರೀಯ ಸಮೀಕ್ಷೆ ನಡೆಸಿ ಅಂಕಿ ಅಂಶಗಳ ವಿವರ ನೀಡಿದೆ.

ಭಾರತದಲ್ಲಿ 37.80 ಕೋಟಿ ಜನ ಒಂದಲ್ಲ ಒಂದು ಮಾದಕ ವಸ್ತು ಬಳಕೆ!

ಭಾರತದ 16 ಕೋಟಿ ಜನರು ಮದ್ಯಪಾನ ಸೇವನೆ ಮಾಡುತ್ತಿದ್ದು, ಇವರಲ್ಲಿ 2.90 ಕೋಟಿ ಜನರು ಮದ್ಯಪಾನ ವ್ಯಸನಿಗಳೇ ಆಗಿದ್ದಾರೆ. 3.10 ಕೋಟಿ ಜನರು ಗಾಂಜಾ ಸೇವಿಸುತ್ತಿದ್ದು, ಇವರಲ್ಲಿ 25 ಲಕ್ಷ ಜನ ನಿತ್ಯವೂ ಗಾಂಜಾ ಸೇವಿಸುವ ಚಟ ಬೆಳೆಸಿಕೊಂಡಿದ್ದಾರೆ. 2 ಕೋಟಿ ಜನರು ಹೆರಾಯಿನ್ ಸೇವನೆ ಮಾಡುತ್ತಿದ್ದು, ಇವರಲ್ಲಿ 28 ಲಕ್ಷ ಜನರು ಹೆರಾಯಿನ್‌ಗೆ ದಾಸರಾಗಿದ್ದಾರೆ. 77 ಲಕ್ಷ ಜನರು ಪೆಟ್ರೋಲ್, ಕಾಫ್ ಸಿರಫ್ ಸೇರಿದಂತೆ ಇತರೆ ಸಲ್ಯೂಷನ್ ಸೇವಿಸುತ್ತಿದ್ದು, ಇವರಲ್ಲಿ 8 ಲಕ್ಷ ಜನರು ವ್ಯಸನಿಗಳಾಗಿದ್ದಾರೆ. ಒಟ್ಟಾರೆ ಭಾರತದ 140 ಕೋಟಿ ಜನಸಂಖ್ಯೆಯಲ್ಲಿ ಶೇ.27ರಷ್ಟು ಜನರು ಅಂದರೆ 37.80 ಕೋಟಿ ಜನರು ಒಂದಲ್ಲ ಒಂದು ಮಾದಕ ವಸ್ತು ಸೇವಿಸುತ್ತಿದ್ದಾರೆ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಅಂಕಿ ಅಂಶಗಳ ವಿವರಣೆ ನೀಡಿದೆ. ಸ್ನೇಹಿತರ ಜೊತೆಗೂಡಿ ಪಾರ್ಟಿ ಮಾಡುವಾಗ ಕುತೂಹಲಕ್ಕೆ ತೆಗೆದುಕೊಳ್ಳುವ ಡ್ರಗ್ಸ್ ಆರಂಭದಲ್ಲಿ ಅತೀವ ಸಂತಸವನ್ನು ಉಂಟು ಮಾಡುತ್ತದೆ. ನೇರವಾಗಿ ಮೆದುಳು ಸೇರುವ ಮಾದಕ ವಸ್ತುವಿನ ಅಂಶಗಳು ಸಂತೋಷದ ಕ್ಷಣಗಳನ್ನು ಹುಟ್ಟು ಹಾಕುತ್ತದೆ. ಆದರೆ, ಅದಕ್ಕೆ ದಾಸರಾದರೆ ಜೀವವನ್ನೇ ಬಲಿ ಪಡೆಯುತ್ತವೆ. ದೈಹಿಕ ಮಾತ್ರವಲ್ಲದೆ ಮಾನಸಿಕ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಮಾನಸಿಕ ಖಿನ್ನತೆ, ನರಗಳ ದೌರ್ಬಲ್ಯಕ್ಕೊಳಗಾಗಬೇಕಾಗುತ್ತದೆ. ಶ್ವಾಸಕೋಶದ ಖಾಯಿಲೆ, ಕ್ಯಾನ್ಸರ್ ರೋಗಕ್ಕೂ ತುತ್ತಾಗಬೇಕಾಗುತ್ತದೆ. ಮಾತ್ರವಲ್ಲ ಮಾದಕ ವಸ್ತುಗಳನ್ನು ಬಳಸುತ್ತಿದ್ದಂತೆ ಆಯಸ್ಸು ಕ್ಷೀಣಿಸುತ್ತದೆ.

ಕೊಕೇನ್ ಸೇರಿದಂತೆ ಇತರೆ ಮಾದಕ ವಸ್ತುಗಳ ಬೆಲೆ ದುಬಾರಿ ಆಗಿರುವ ಕಾರಣ ಹೆಚ್ಚಿನ ಜನರು ಕಡಿಮೆ ಬೆಲೆಯ ಗಾಂಜಾ ಹಾಗೂ ಸಲ್ಯೂಷನ್ ಅನ್ನು ಬಳಸುತ್ತಾರೆ. ಇನ್ನು ಐಷರಾಮಿ ಜೀವನ ನಡೆಸುವ ಶ್ರೀಮಂತ ಜನರು ನೈಟ್ ಪಾರ್ಟಿಗಳಲ್ಲಿ ಕೊಕೇನ್, ಹೆರಾಯಿನ್ ಸೇರಿದಂತೆ ಹಲವು ಡ್ರಗ್ಸ್‌ಗಳನ್ನು ತೆಗೆದುಕೊಳ್ಳುತ್ತಾರೆ. ಆಲೋಲಿನೊಜೆನ್ಸ್, ಮೆಥಾಂಫೆಟಮೈನ್, ಮಶ್ರೂಮ್ ಬರ್ನ್ ಪೌಡರ್ ಹಾಗೂ ಕೊಕೇನ್ ಬಹಳ ಅಪಾಯಕಾರಿಯಾದ ಡ್ರಗ್ಸ್‌ಗಳಾಗಿವೆ. ಆದರೆ ದುಬಾರಿ ಬೆಲೆಯ ಈ ಮಾದಕ ವಸ್ತುಗಳನ್ನು ಹಣವಿರುವ ಶ್ರೀಮಂತರು ಮಾತ್ರ ಸೇವಿಸುತ್ತಿದ್ದಾರೆ.

ಒತ್ತಡ ಮುಕ್ತ ಜೀವನ ಶೈಲಿಗೆ ಸಂಗೀತ ಉತ್ತಮ ಔಷಧಿ

ಮೈಸೂರು, ಆ.3(ಎಸ್‌ಪಿಎನ್)– ದಿನನಿತ್ಯ ಕೆಲಸಗಳ ಒತ್ತಡದಿಂದ ಮನುಷ್ಯನ ಜೀವನ ಶೈಲಿ ಬದಲಾಗಿದ್ದು, ಪ್ರತಿಯೊಬ್ಬರು ಒತ್ತಡ ಮುಕ್ತ ಜೀವನ ಶೈಲಿ ರೂಢಿಸಿಕೊಳ್ಳಲು ಸಂಗೀತ ಉತ್ತಮ ಔಷಧಿ ಎಂದು ಮೈಸೂರು ಸ್ತ್ರೀ ರೋಗ ತಜ್ಞೆ ಡಾ.ರೇಖಾ ಅರುಣ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಜನ ಚೈತನ್ಯ ಫೌಂಡೇಷನ್ ವತಿಯಿಂದ 'ಹಾಡೊಂದು ನಾ ಹಾಡುವೆನು' ಶೀರ್ಷಿಕೆಯಡಿ ಸೀಸನ್–3ಯಲ್ಲಿ ಕರೋಕೆ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದರು.


ಇತ್ತೀಚಿನ ದಿನಗಳಲ್ಲಿ ನಗರಜೀವನ ಒತ್ತಡದಿಂದ ಕೂಡಿದ್ದು, ಇದನ್ನು ಹೋಗಲಾಡಿಸಲು ಸಂಗೀತ ಉತ್ತಮ ವೇದಿಕೆ. ಪ್ರತಿಯೊಬ್ಬರು ಸಂಗೀತ ಕಲಿಕೆಯಿಂದ ಒತ್ತಡ ಮುಕ್ತ ಜೀವನ ರೂಢಿಸಿಕೊಳ್ಳಲು ಸಾಧ್ಯವಿದೆ. ಅದರಲ್ಲೂ ಕರೋಕೆ ಗಾಯನ ಬಂದಮೇಲೆ ಗಾಯಕರ ಸಂಖ್ಯೆ ಹೆಚ್ಚಾಗಿದ್ದು, ಈ ಹಿನ್ನೆಲೆಯಲ್ಲಿ ಸಂಗೀತ ಕಾರ್ಯಕ್ರಮಗಳು ಹೆಚ್ಚಾಗಿ ಆಯೋಜನೆಗೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು. ಈ ವೇಳೆ 40ಕ್ಕೂ ಗಾಯಕರು ಕನ್ನಡ, ತಮಿಳು,



ತೆಲುಗು, ಹಿಂದಿ ಸೇರಿದಂತೆ ಇತರೆ ಭಾಷೆಗಳ ಹಾಡುಗಳನ್ನು ಹಾಡಿದರು. ಈ ಸಂದರ್ಭದಲ್ಲಿ ಡಾ.ರೇಖಾ, ಸಹಾಯಕ ಕಾರ್ಯಪಾಲಕ ಅಭಿಯಂತರ ಎನ್. ಶ್ರೀನಿವಾಸಲು, ಸಣ್ಣ ನೀರಾವರಿ ಇಲಾಖೆಯ ಕಿರಿಯ ಅಭಿಯಂತರ ಅಜರುದ್ದೀನ್, ಜನ ಚೈತನ್ಯ ಫೌಂಡೇಶನ್ ಅಧ್ಯಕ್ಷ, ವಕೀಲ ಆರ್.ಲಕ್ಷ್ಮಣ್, ವಕೀಲರಾದ ಉಮೇಶ್, ಎನ್. ಲೋಕೇಶ್ ಉಪಸ್ಥಿತರಿದ್ದರು.

ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಕೆಲಸ ಮಾಡಿ

ಗುಂಬಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರಿಗೆ ಎಂಎಲ್‌ಸಿ ಮಂಜೇಗೌಡರ ಕಿವಿಮಾತು



ಮೈಸೂರು, ಆ. 3– ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ನಿಟ್ಟಿನಲ್ಲಿ ಶಾಲಾ ಕಟ್ಟಡ ಹಾಗೂ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ನನಗೆ ನೀಡುವ ವಿಧಾನ ಪರಿಷತ್ ಸದಸ್ಯರ ಅನುದಾನವನ್ನು ಬಳಸಿಕೊಳ್ಳಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಮೈಸೂರಿನ ಅವರ ನಿವಾಸದಲ್ಲಿ ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷೆ ಮೀನಾ ಗೋವಿಂದರಾಜು, ಉಪಾಧ್ಯಕ್ಷ ಶ್ರೀನಿವಾಸ್‌ರವರನ್ನು ಅಭಿನಂದಿಸಿ ಮಾತನಾಡಿದ ಅವರು, ಮನುಷ್ಯನಿಗೆ ಶುದ್ಧ ಕುಡಿಯುವ ನೀರಿನ ಅವಶ್ಯಕತೆ ಇದ್ದು, ಗ್ರಾಮೀಣ ಭಾಗದ ಜನರ ಆರೋಗ್ಯದ ದೃಷ್ಟಿಯಿಂದ ಜನಸಂಖ್ಯೆಗೆ ಅನುಗುಣವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿಕೊಳ್ಳಿ. ವಿಧವೆಯರಿಗೆ, ಅವರ ಮಕ್ಕಳಿಗೆ ಹಾಗೂ ವೃದ್ಧರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಯತ್ನಿಸಿ. ಗ್ರಾಮೀಣ ಭಾಗದ ರೈತರಿಗೆ ಅನುಕೂಲವಾಗುವಂತೆ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಿ. ಸರ್ಕಾರದಿಂದ ಗ್ರಾಮೀಣ ಪ್ರದೇಶಕ್ಕೆ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಿ. ಎಷ್ಟೇ ಹಣವಿದ್ದರೂ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರಾಗಲು ಆಗುವುದಿಲ್ಲ. ನಿಮಗೆ ಸಂವಿಧಾನದಡಿಯಲ್ಲಿ ಅವಕಾಶ ಸಿಕ್ಕಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಜೆ.ನಟರಾಜ್, ಭಾಗ್ಯ, ವೆಂಕಟರಾಜು, ಕೃಷ್ಣಕುಮಾರ್, ರವಿ, ಕೆ.ಮಾದೇಶ್, ರಾಜೇಂದ್ರ, ರಂಗರಾಮು, ವಿ. ಮಾದೇಶ, ಮುಖಂಡರಾದ ಭರತ್ ಮಂಜೇಗೌಡ, ಶ್ರೀರಾಂಪುರ ರಮೇಶ್, ಸುರೇಂದ್ರ ಕುಮಾರ್ ಮತ್ತಿತರರಿದ್ದರು.

ಗುರುವಿಗೆ ಸಮಾಜ ಬದಲಿಸುವ ವಿಶೇಷ ಶಕ್ತಿ ಇದೆ

ಮೈಸೂರು, ಆ.3(ಎಸ್‌ಪಿಎನ್)–ದೇಶಾದ್ಯಂತ ಎನ್‌ಪಿಎಸ್ ರದ್ದಾಗಬೇಕು, ಓಪಿಎಸ್ ಮರು ಜಾರಿ ಆಗಬೇಕು ಎಂದು ಎಬಿಆರ್‌ಎಸ್‌ಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ ಆಗ್ರಹಿಸಿದರು.

ಮೈಸೂರು ಚಾಮರಾಜಪುರಂನಲ್ಲಿರುವ ಗೋಪಾಲ ಸ್ವಾಮಿ ಕಾಲೇಜು ಆವರಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮೈಸೂರು ಘಟಕದ ವತಿಯಿಂದ ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್.ಗಂಗಾಧರ್, ಮಂಗಳೂರು ವಿವಿ ಇತಿಹಾಸ ಪ್ರಾಧ್ಯಾಪಕ ಹಾಗೂ ಸಿಂಡಿಕೇಟ್ ಸದಸ್ಯ ಪ್ರೊ.ಕೆ.ಸಿ. ಮಹದೇವ್ ಅವರಿಗೆ ಗುರುವಂದನೆ ಹಾಗೂ ಹಾಗೂ ಕೆ.ಆರ್.ಕ್ಷೇತ್ರದ ಟಿ.ಎಸ್.ಶ್ರೀವತ್ಸ ಅವರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ವಿರುದ್ಧ ದೇಶಾದ್ಯಂತ ಹೋರಾಟ ನಡೆಯುತ್ತಿದೆ. ಈ ಹೋರಾಟದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು, ಈ ಮುಂಚೂಣಿ ಹೋರಾಟದಲ್ಲಿ ಎಬಿಆರ್‌ಎಸ್‌ಎಂ ಸಂಘಟನೆಯ ಪಾತ್ರ ಪ್ರಮುಖವಾಗಿದೆ. ಮಾಧ್ಯಮಿಕ ಸಂಘಟನೆ ಉತ್ತರ ಭಾರತದಲ್ಲಿ ಬಲಿಷ್ಠವಾಗಿದ್ದು, ದಕ್ಷಿಣ ಭಾರತದ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶದಲ್ಲಿ ಬಲಿಷ್ಠವಾಗಿದೆ. ಆದರೆ, ಕೇರಳ, ತಮಿಳುನಾಡಿನಲ್ಲಿ ಇನ್ನು ಸಂಘಟನೆಯಾಗಿಲ್ಲ. ಈ ರಾಜ್ಯಗಳಲ್ಲಿ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಯಾ



ವಿಧಾನಸಭಾ ಕ್ಷೇತ್ರದಲ್ಲಿ 1–12ನೇ ತರಗತಿಯವರೆಗೆ ಒಂದೇ ಆವರಣದಲ್ಲಿರುವ ಶಾಲೆಗಳನ್ನು ಅಭಿವೃದ್ಧಿಪಡಿಸಲು ಅನುದಾನ ಒದಗಿಸಲು ಮಾತುಕತೆ ನಡೆಸಬೇಕು. ರಾಜ್ಯ ಪಠ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಗುರುವಿಗೆ ಪರ್ಯಾಯ ಪದವಿಲ್ಲ: 'ಶಿಕ್ಷಕ' ಎನ್ನುವ ಪದಕ್ಕೆ ಇಂಗ್ಲಿಷ್‌ನಲ್ಲಿ 'ಟೀಚರ್' ಎಂದು ಕರೆಯಬಹುದು. ಆದರೆ, 'ಗುರು' ಎನ್ನುವ ಪದಕ್ಕೆ ಪ್ರಪಂಚದ ಯಾವುದೇ ಭಾಷೆಯಲ್ಲೂ ಪರ್ಯಾಯ ಪದಗಳಿಲ್ಲ. ಗುರು ಎಂಬ ಪದಕ್ಕೆ ಭಾರತೀಯ ಪರಂಪರೆಯಲ್ಲಿ ಜಮ್ಮು–ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ವಿಶೇಷ ಸ್ಥಾನವಿದೆ. ಭಾರತದ ಯಾವುದೇ ಭಾಷೆಯಲ್ಲೂ ಗುರು ಎಂದರೆ ಪೂಜ್ಯ ಭಾವನೆಯಿದೆ. ಗುರು ಎಂಬ ಸ್ಥಾನಕ್ಕೆ ಸಮಾಜ ವನ್ನು ಬದಲಿಸುವ ಶಕ್ತಿಯಿದೆ ಎಂದು ತಿಳಿಸಿದರು.

ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಹಾಗೂ ಮಂಗಳೂರು ವಿವಿ ಇತಿಹಾಸ ಪ್ರಾಧ್ಯಾಪಕ ಪ್ರೊ.ಕೆ.ಸಿ.ಮಹದೇಶ್ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಇಂತಹ ಸಾಧಕರಿಗೆ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ 'ಗುರುವಂದನೆ' ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಹಾಗೂ ವಿಭಾಗ ಪ್ರಮುಖ್ ಬಿ.ನಿರಂಜನಮೂರ್ತಿ, ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಜಯದೇವರಾಜೇಅರಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಆರ್. ಉದಯರವಿ ಪ್ರಕಾಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಬಿ.ಅರುಣ್ ಕುಮಾರ್ ಉಪಸ್ಥಿತರಿದ್ದರು.

ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಮಾದರಿ ಶಾಲೆಯಾಗಿ ಅಭಿವೃದ್ಧಿಪಡಿಸಲು ನೀಲನಕ್ಷೆ ರೂಪಿಸುತ್ತಿದ್ದೇವೆ. ಸರ್ಕಾರಿ ಶಾಲೆ ಅಭಿವೃದ್ಧಿ ಮಾಡಿ ಯಾವ ಖಾಸಗಿ ಶಾಲೆಗಳಿಗೂ ಕಡಿಮೆ ಇಲ್ಲದಂತೆ ಅಭಿವೃದ್ಧಿಪಡಿಸಲಾಗುವುದು.
–ಟಿ.ಎಸ್.ಶ್ರೀವತ್ಸ, ಶಾಸಕರು, ಕೆ.ಆರ್.ಕ್ಷೇತ್ರ.

ಶಿಕ್ಷಕ ವೃತ್ತಿಗೆ ನಿವೃತ್ತಿಯಿಲ್ಲ. ವೃತ್ತಿಯಲ್ಲಿ ಇದ್ದಾಗಲೂ, ನಿವೃತ್ತಿ ಹೊಂದಿದ ನಂತರ ಸಮಾಜ ತಿದ್ದಲು ಶಿಕ್ಷಕ ಸದಾ ಸಿದ್ಧನಾಗಿರುತ್ತಾನೆ. ಇದನ್ನು ಉಪಯೋಗಿಸುವ ವಿಧಾನಗಳ ಬಗ್ಗೆ ಸಮಾಜ ಚಿಂತನೆ ನಡೆಸಬೇಕು. – ಪ್ರೊ.ಎಂ.ಆರ್.ಗಂಗಾಧರ್, ಕುಲಪತಿಗಳು, ಚಾಮರಾಜನಗರ ವಿವಿ

ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗೆ ಆಯೋಗ ರಚಿಸಲು ಸಿಎನ್‌ಸಿ ಬೇಡಿಕೆ

ರಾಜ್ಯ ಹೈಕೋರ್ಟ್‌ನಲ್ಲಿ ಅರ್ಜಿಯ ವಿಚಾರಣೆ

ಅರ್ಥಶಾಸ್ತ್ರಜ್ಞ, ಮಾಜಿ ಕೇಂದ್ರ ಸಚಿವ ಡಾ.ಸುಬ್ರಮಣಿಯನ್‌ಸ್ವಾಮಿ ವಾದ ಮಂಡನೆ



- 4 ವಾರಗಳಲ್ಲಿ ಉತ್ತರ ನೀಡಲು ಪ್ರತಿವಾದಿಗಳಿಗೆ ನಿರ್ದೇಶನ
- ಸೆ.5ಕ್ಕೆ ವಿಚಾರಣೆ ಮುಂದೂಡಿಕೆ

ಮಡಿಕೇರಿ,ಆ.3– ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಕುರಿತು ಸಿಎನ್‌ಸಿ ಬೇಡಿಕೆಗೆ ಪೂರಕವಾಗಿ ಆಯೋಗವನ್ನು ರಚಿಸಬೇಕೆಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯಿತು. ವಿಚಾರಣೆಯನ್ನು ಸೆ.5ಕ್ಕೆ ಮುಂದೂಡಲಾಗಿದ್ದು, ಮೂವರು ಪ್ರತಿವಾದಿಗಳು ಮುಂದಿನ 4 ವಾರಗಳಲ್ಲಿ ಉತ್ತರ ನೀಡುವಂತೆ ಕೋರ್ಟ್ ನಿರ್ದೇಶನ ನೀಡಿತು.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಎಂಜೆಎಸ್. ಕಮಲ್ ಅವರ ವಿಭಾಗೀಯ ಪೀಠವು ಪ್ರಕರಣದ ವಿಚಾರಣೆ ನಡೆಸಿತು. ಡಾ. ಸುಬ್ರಮಣಿಯನ್ ಸ್ವಾಮಿ ಅವರು ಹಾಜರಾಗಿ ಹೈಕೋರ್ಟ್ ವಿಭಾಗೀಯ ಪೀಠದ ಮುಂದೆ ಪ್ರಕರಣ ಕುರಿತು ವಾದಿಸಿದರು. ಅರ್ಜಿದಾರರ ಪರವಾಗಿ ವಕೀಲರಾದ ಎಂ.ಎಸ್. ನಾರಾಯಣ ಕಿರಣ್, ವಿಕ್ರಮ್ ಹೆಗ್ಡೆ ಹಾಗೂ ಪಾರ್ಥ್ ಅವರು ಹಾಜರಾಗಿದ್ದರು. ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಹಾಗೂ ವಿಹೆಚ್‌ಎಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಗದೀಶ್‌ಶೆಟ್ಟಿ ಹೈಕೋರ್ಟ್‌ನಲ್ಲಿ ಉಪಸ್ಥಿತರಿದ್ದರು.

ಡಾ.ಸುಬ್ರಮಣಿಯನ್ ಸ್ವಾಮಿ ಅವರು ಹೈಕೋರ್ಟ್‌ಗೆ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ–7769/2023ರ ಪಿಐಎಲ್ ದೀರ್ಘಕಾಲ ಬಾಕಿ ಉಳಿದಿರುವುದನ್ನು ಖಚಿತಪಡಿಸಿಕೊಳ್ಳಲು ಆಯೋಗವನ್ನು ಕೋರಿದರು. ಕೊಡವ ನ್ಯಾಷನಲ್ ಕೌನ್ಸಿಲ್‌ನ ಕೊಡವಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆಯ ನ್ಯಾಯಸಮ್ಮತ ಬೇಡಿಕೆಯನ್ನು ಮಂಡಿಸಲಾಯಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಅರ್ಜಿದಾರ ಸಂಖ್ಯೆ–2 ಆಗಿದ್ದರೆ, ಕೇಂದ್ರ ಕಾನೂನು ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ ಮತ್ತು ಕರ್ನಾಟಕ ರಾಜ್ಯವನ್ನು ಪ್ರತಿವಾದಿ ಸಂಖ್ಯೆ ಕ್ರಮವಾಗಿ 1, 2 ಮತ್ತು 3 ಎಂದು ಉಲ್ಲೇಖಿಸಲಾಗಿದೆ ಎಲ್ಲಾ ಮೂವರು ಪ್ರತಿವಾದಿಗಳು ಉತ್ತರ ನೀಡಲು 8 ವಾರಗಳ ಕಾಲಾವಕಾಶವನ್ನು ಕೋರಿದರು. ಆದರೆ ಕೋರ್ಟ್ ಉತ್ತರಿಸಲು 4 ವಾರಗಳ ಸಮಯವನ್ನು ನೀಡಿತು. ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಶ್ರೇಯಾ ನಾಚಪ್ಪ ಕಾಂಡೇರ ಸುರೇಶ್, ಪಾರ್ವಂಗಡ ನವೀನ್, ಅರೆಯಡ ಗಿರೀಶ್, ಬೊಟ್ಟಂಗಡ ಗಿರೀಶ್, ಚಂಬಂಡ ಜನತ್, ಬೇಪಡಿಯಂಡ ದಿನು, ಕಿರಿಯಮಾಡ ಶೆರಿನ್, ಅಜ್ಜಿಕುಟ್ಟೀರ ಲೋಕೇಶ್, ಪುಲ್ಲೇರ ಕಾಳಪ್ಪ ವಿಎಚ್‌ಎಸ್ ಸದಸ್ಯರಾದ ರವಿಶಂಕರ್, ನಟರಾಜ್ ಹೈಕೋರ್ಟ್ ಕಲಾಪವನ್ನು ವೀಕ್ಷಿಸಿದರು.

ಡಾ.ಕಸ್ತೂರಿ ರಂಗನ್ ವರದಿಯ ಸಾಧಕ, ಬಾಧಕಗಳ ಬಗ್ಗೆ ಚರ್ಚೆಗೆ ಕೊಡಗಲ್ಲಿ ಆ.11ರಂದು ವಿಚಾರಗೋಷ್ಠಿ



ಮಡಿಕೇರಿ, ಆ.3– ಡಾ.ಕಸ್ತೂರಿ ರಂಗನ್ ವರದಿಯ ಸಾಧಕ, ಬಾಧಕಗಳ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಆ.11ರಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಕೊಡಗು ಜಿಲ್ಲೆಯಲ್ಲಿ ವಿಚಾರಗೋಷ್ಠಿ ನಡೆಯಲಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರಾಜಪೇಟೆ ಅಥವಾ ಸಿದ್ದಾಪುರದಲ್ಲಿ ವಿಚಾರಗೋಷ್ಠಿ ಮತ್ತು ಸಂವಾದವನ್ನು ಆಯೋಜಿಸಲಾಗುವುದು. ಗೋಷ್ಠಿಯಲ್ಲಿ ಪರಿಸರ ತಜ್ಞರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಮಲೆನಾಡು ಪ್ರದೇಶದ ಎಲ್ಲಾ ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಜನರ ಬದುಕಿಗೆ ಮಾರಕ: ಪರಿಸರವನ್ನು ಕಾಪಾಡುವ ಕಾರಣ ನೀಡಿ ಸೂಕ್ಷ್ಮ ವಲಯ ಎಂದು ಘೋಷಿಸಲು ಡಾ.ಕಸ್ತೂರಿ ರಂಗನ್ ಅವರು 2013 ಏಪ್ರಿಲ್ 15ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಅವೈಜ್ಞಾನಿಕವಾಗಿದ್ದು, ಇದು ರೈತರಿಗೆ ಮಾರಕವಾಗಿದೆ. ಮಲೆನಾಡು ಪ್ರದೇಶದಲ್ಲಿ ವಾಸಿಸುತ್ತಿರುವ ರೈತರು, ಕಾರ್ಮಿಕರು, ಆದಿವಾಸಿ ಬುಡಕಟ್ಟು ಜನರ ಬದುಕು ಮತ್ತು ಮೂಲ ಹಕ್ಕನ್ನು ಕಸಿದುಕೊಳ್ಳುವ ವರದಿಯಾಗಿದೆ. ಇದನ್ನು ಈ ಹಿಂದೆ ಕಾಂಗ್ರೆಸ್ ಮತ್ತು ಇತರ ಸರ್ಕಾರಗಳು ತಿರಸ್ಕರಿಸಿದ್ದು, ಪ್ರಸ್ತುತ ಸರ್ಕಾರ ಕೂಡ ಇದೇ ನಿರ್ಧಾರಕ್ಕೆ ಬದ್ಧವಾಗಿರಬೇಕೆಂದು ಒತ್ತಾಯಿಸಿದರು. ಹಲವು ಅವೈಜ್ಞಾನಿಕ ರೂಪದ ಅಭಿವೃದ್ಧಿ ಕಾಮಗಾರಿಗಳ ಕಾರಣಗಳಿಂದ ಪರಿಸರದಲ್ಲಿ ಅಸಮತೋಲನ ಉಂಟಾಗಿದ್ದು, ಇದನ್ನು ತಡೆಗಟ್ಟದೆ ಮಲೆನಾಡು ಪ್ರದೇಶದ ಜನರ ಬದುಕನ್ನು ಕಸಿದುಕೊಳ್ಳುವುದರಲ್ಲಿ ಏನು ಅರ್ಥವಿದೆ ಎಂದು ಬಡಗಲಪುರ ನಾಗೇಂದ್ರ ಪ್ರಶ್ನಿಸಿದರು.

ವರ್ಗೀಕರಣ ಕೈಬಿಡಿ: ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಸಂಭವಿಸುತ್ತಿರುವ ಪ್ರಾಕೃತಿಕ ವಿಕೋಪದಿಂದ ಜನಜೀವನ ಅಸ್ತವ್ಯಸ್ತಗೊಂಡು, ಬೆಳೆ ಹಾಗೂ ಜಮೀನು ಹಾನಿಯಾಗಿ ರೈತರು ಸಾಲದಲ್ಲಿ ಸಿಲುಕಿದ್ದಾರೆ. ಕಳೆದ 20 ವರ್ಷಗಳಿಂದ ಮಾನವ ಮತ್ತು ವನ್ಯಪ್ರಾಣಿ ಸಂಘರ್ಷದಿಂದ ಪ್ರಾಣ ಹಾನಿ ಹಾಗೂ ಅಧಿಕ ಪ್ರಮಾಣದ ಬೆಳೆ ನಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಕಸ್ತೂರಿ ರಂಗನ್ ವರದಿಯ ಪ್ರಸ್ತಾಪ ರೈತರ ಪಾಲಿಗೆ ಮಾರಕವಾಗಿದೆ. ಅರಣ್ಯ ಪ್ರದೇಶವಾದ ಬ್ರಹ್ಮಗಿರಿ, ಪುಷ್ಪಗಿರಿ, ನಾಗರಹೊಳೆ, ತಲಕಾವೇರಿ ಮೀಸಲು ಅರಣ್ಯ, ವ್ಯಾಪೀವಿ ಅರಣ್ಯ ಟೈಗರ್ ಕಾರಿಡಾರ್, ಆನೆ ಕಾರಿಡಾರ್ ಎಂಬ ವರ್ಗೀಕರಣದಿಂದ ರೂಪಿಸಿರುವ ಕಾನೂನುಗಳಿಂದ ಪಶ್ಚಿಮಘಟ್ಟ ಮತ್ತು ಪರಿಸರವನ್ನು ಕಾಪಾಡಲು ಸಾಧ್ಯವಿಲ್ಲ. ಆದ್ದರಿಂದ ಇಎಸ್‌ಎ ಬಫರ್ ವಲಯ ವರ್ಗೀಕರಣವನ್ನು ಸಂಪೂರ್ಣವಾಗಿ ಕೈಬಿಡುವಂತೆ ಕರ್ನಾಟಕ ಸರಕಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಮಾರ್ಪಾಡುಗಳನ್ನು ಮಾಡಬೇಕು ಎಂದು ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.

ಅರಣ್ಯಕ್ಕೆ ಸೀಮಿತವಾಗಲಿ: ರೈತ ಸಂಘದ ಜಿಲ್ಲಾಧ್ಯಕ್ಷ ಮನುಸೋಮಯ್ಯ ಮಾತನಾಡಿ, ಗ್ರಾಮೀಣ ಪ್ರದೇಶಕ್ಕೆ ಇಎಸ್‌ಎ ಬಫರ್ ವಲಯ ಎಂಬುವುದನ್ನು ಕೈಬಿಟ್ಟು, ಅರಣ್ಯ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಜಯ್ ಬೋಪಯ್ಯ, ಸಂಚಾಲಕ ಸುಭಾಷ್ ಸುಬ್ಬಯ್ಯ, ಅಮ್ಮತ್ತಿ ಹೋಬಳಿ ಅಧ್ಯಕ್ಷ ಪ್ರವೀಣ್ ಬೋಪಯ್ಯ ಹಾಗೂ ಮೈಸೂರು ಜಿಲ್ಲಾ ಕಾರ್ಯದರ್ಶಿ ಹೊಸಕೋಟೆ ಬಸವರಾಜ್ ಉಪಸ್ಥಿತರಿದ್ದರು.

ದಂಪತಿ ಮೇಲೆ ಹಲ್ಲೆಗೆ ನಾಗರಿಕ ಸಮಿತಿ ಖಂಡನೆ



ವಿರಾಜಪೇಟೆ, ಆ.3– ವಿರಾಜಪೇಟೆ ಪುರಸಭೆ ಸದಸ್ಯ, ಡೊನೇಟರ್ಸ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮೊಹಮ್ಮದ್ ರಫಿ ಅವರು ಟ್ರಸ್ಟ್ ಚಾಲಕರಾದ ವಿ.ಸಿಜು ವರ್ಗಿಸ್ ಮೇಲೆ ಹಲ್ಲೆ ನಡೆಸಿ ಅವರ ಪತ್ನಿಗೂ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದನ್ನು ನಾಗರಿಕ ಸಮಿತಿ ಖಂಡಿಸಿದೆ.

ಈ ಸಂಬಂಧ ಕಾನೂನು ಕ್ರಮ ಕೈಗೊಳ್ಳುವಂತೆ ಸಮಿತಿಯ ಸಂಚಾಲಕರಾದ ಡಾ. ಇ.ಆರ್.ದುರ್ಗಾ ಪ್ರಸಾದ್ ನಗರ ಠಾಣೆ ಪೊಲೀಸರಲ್ಲಿ ಒತ್ತಾಯಿಸಿದ್ದಾರೆ. ನಾಗರಿಕ ಸಮಿತಿ ವತಿಯಿಂದ ವಿರಾಜಪೇಟೆ ಕಚೇರಿಯಲ್ಲಿ ಕರೆದಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜು.27ರಂದು ಡೊನೇಟರ್ಸ್ ಚಾರಿಟಬಲ್ ಟ್ರಸ್ಟ್ ಚಾಲಕ ಸಿಜು ವರ್ಗಿಸ್ ಮೇಲೆ ಹಲ್ಲೆ ಮಾಡಿ ನಂತರ ಮೊಬೈಲ್ ಫೋನ್ ಕಸಿದುಕೊಳ್ಳಲಾಗಿದೆ ಸಿಜು ಪತ್ನಿ ನಿಶಾ ಗರ್ಭಿಣಿಯಾಗಿದ್ದು ಅವರನ್ನು ನಿಂದಿಸಲಾಗಿದೆ. ಈ ವರ್ತನೆ ಅಮಾನವೀಯ. ಪ್ರಜಾ ಪ್ರಭುತ್ವದಲ್ಲಿ ಜನಪ್ರತಿನಿಧಿಗಳು ಇಂತಹ ಕಾರ್ಯಕ್ಕೆ ಮುಂದಾಗುವುದು ವಿಷಾದನೀಯ ಎಂದರು.

ಈ ಹಿಂದೆ ಪುರಸಭೆ ಮಳಿಗೆ ವಿಚಾರದಲ್ಲಿ ಸದಸ್ಯರೊಬ್ಬರು ಅಂಗಡಿ ಮಾಲಿಕನ ಮೇಲೆ ಹಲ್ಲೆ ನಡೆಸಿದ್ದರು. ಇಂತಹ ಘಟನೆಗಳು ಇನ್ನು ಮುಂದೆ ಮರುಕಳಿಸದಂತೆ ಎಚ್ಚರ ವಹಿಸಬೇಕು. ಪುರಸಭೆಯ ಮುಖ್ಯಾಧಿಕಾರಿ ಕಾನೂನು ಅಡಿಯಲ್ಲಿ ಕ್ರಮ ಜರುಗಿಸಬೇಕು ಎಂದರು.

ನಾಗರಿಕ ಸಮಿತಿಯ ಸಹಸಂಚಾಲಕ ವಕೀಲ ಸೋಮಲೋಕನಾಥ್ ಅವರು ಮಾತನಾಡಿ ದಂಪತಿಗಳ ಮೇಲೆ ನಡೆಸಿರುವ ಹಲ್ಲೆ ಖಂಡನೀಯ. ಸಮಾಜದ ಆಗುಹೋಗುಗಳ ಬಗ್ಗೆ ವರದಿ ಮಾಡುವುದು ಪತ್ರಕರ್ತರ ಕರ್ತವ್ಯ ಆಗಿರುವುದರಿಂದ ಘಟನೆಯ ವರದಿ ಮಾಡಿದ ಪತ್ರಕರ್ತ ರವಿಕುಮಾರ್ ಮೇಲೆ ಪುರಸಭೆ ಸದಸ್ಯೆ ಜೂನಾ ಅವರು ಬೆದರಿಕೆ ಕರೆ ಮಾಡಿರುವುದನ್ನೂ ನಾಗರಿಕ ಸಮಿತಿ ಖಂಡಿಸುತ್ತದೆ ಎಂದರು.

ಪ್ರಜಾಪ್ರಭುತ್ವದಲ್ಲಿ ನಾಗರಿಕರನ್ನು ಸಂರಕ್ಷಣೆ ಮಾಡುವುದು ಜನಪ್ರತಿನಿಧಿಗಳು. ಆದರೆ ಜೀವ ಬೆದರಿಕೆಯ ಪರಿಸ್ಥಿತಿ ನಿರ್ಮಾಣವಾಗಿದೆ. ಸಿಜು ವರ್ಗಿಸ್ ಹಾಗೂ ನಿಶಾ ದಂಪತಿಗೆ ಪೊಲೀಸರು ಸೂಕ್ತ ರಕ್ಷಣೆ ನೀಡಬೇಕು ಎಂದರು.

ಜಲಾಶಯದ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ ಬೆಂಗಳೂರಿನ ಪ್ರವಾಸಿಗ ನೀರು ಪಾಲು

ಸ್ನೇಹಿತರೊಂದಿಗೆ ಬೆಂಝ್ ಕಾರಿನಲ್ಲಿ ಬಂದಿದ್ದಾಗ ದುರಂತ

ಮಡಿಕೇರಿ, ಆ.3– ಹಾರಂಗಿ ಜಲಾಶಯದ ಮುಂದಿನ ಸೇತುವೆಯ ತಟದಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ ಪ್ರವಾಸಿಗರೊಬ್ಬರು ನೀರು ಪಾಲಾದ ಘಟನೆ ಹಾರಂಗಿ ಅಣೆಕಟ್ಟೆ ವ್ಯಾಪ್ತಿಯಲ್ಲಿ ನಡೆದಿದೆ. ಬೆಂಗಳೂರು ಮೂಲದ ಸಂದೀಪ್(45) ಎಂಬವರೇ ನೀರು ಪಾಲಾದ ವ್ಯಕ್ತಿ.

ಬೆಂಗಳೂರಿನಿಂದ ಬೆಂಝ್ ಕಾರಿನಲ್ಲಿ 4 ಮಂದಿ ಸ್ನೇಹಿತರು ಹಾರಂಗಿಗೆ ಆಗಮಿಸಿದ್ದರು. ಈ ವೇಳೆ ಸಂದೀಪ್ ಜಲಾಶಯದ ಮುಂಭಾಗದ ಸೇತುವೆಯ ತಟದಲ್ಲಿ ನಿಂತು ಮೊಬೈಲ್‌ನಲ್ಲಿ ಸೆಲ್ಫಿ ತೆಗೆಯಲು ಮುಂದಾದರು. ಈ ಸಂದರ್ಭದಲ್ಲಿ ಆಯತಪ್ಪಿ ಹಾರಂಗಿ ನದಿಗೆ ಬಿದ್ದಿದ್ದು, ಸ್ನೇಹಿತರ ಕಣ್ಣ ಮುಂದೆಯೇ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ವಿಷಯ ತಿಳಿದ ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಹಾರಂಗಿ ನದಿಯಲ್ಲಿ ಸಂದೀಪನ ಮೃತದೇಹದ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಸಿದರು.



ಹಾರಂಗಿ ನದಿಗೆ ಜಲಾಶಯದ 2 ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದ್ದು, ಮೃತದೇಹ ಸೇತುವೆ ಕೆಳ ಭಾಗದಿಂದ ನೀರಿನಲ್ಲಿ ಕೊಚ್ಚಿ ಹೋಗಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ದುಬಾರೆಯ ರಿವರ್ ರ್‍ಯಾಫ್ಟರ್‌ಗಳನ್ನು ಸ್ಥಳಕ್ಕೆ ಕರೆಯಿಸಿ ಶೋಧ ಕಾರ್ಯ ನಡೆಸಲಾಯಿತು. ಆದರೆ ಸಂಜೆ ಕತ್ತಲಾದ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಸ್ಥಗಿತ ಮಾಡಿದ್ದು, ಶುಕ್ರವಾರ ಮತ್ತೆ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಘಟನೆ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪ್ರತಿಭಟನೆಗೆ ಎಚ್ಚೆತ್ತ ಅರಣ್ಯ ಇಲಾಖೆ

ಹೂಳಲಾಗಿದ್ದ ಕಾಡಾನೆ ಕಳೇಬರ ಸ್ಥಳಾಂತರಗೊಳಿಸಿ ಆನೆಕಾಡು ಮೀಸಲು ಅರಣ್ಯದಲ್ಲಿ ಅಂತ್ಯಕ್ರಿಯೆ



ಮಡಿಕೇರಿ, ಆ.3– ಗ್ರಾಮಸ್ಥರ ಪ್ರತಿಭಟನೆ ಎಚ್ಚರಿಕೆಯಿಂದ ಎಚ್ಚೆತ್ತ ಅರಣ್ಯ ಇಲಾಖೆ ವ್ಯಂಣ್ಣಿನ ಡಿ ಹೂಳಲಾಗಿದ್ದ ಕಾಡಾನೆ ಕಳೇಬರ ಸ್ಥಳಾಂತರ ಮಾಡಿ ಆನೆಕಾಡು ಮೀಸಲು ಅರಣ್ಯದಲ್ಲಿ ಅಂತ್ಯಕ್ರಿಯೆ ನಡೆಸಿದ ಘಟನೆ ನಡೆದಿದೆ.

ಅತ್ತೂರುನಲ್ಲೂರು ಗ್ರಾಮದ ಕಾಫಿ ತೋಟವೊಂದರಲ್ಲಿ ವಿದ್ಯುತ್ ಸ್ಪರ್ಶಿಸಿ ಕಾಡಾನೆ ಒಂದು ಸಾವನ್ನಪ್ಪಿತ್ತು. ಈ ಘಟನೆ ತಡವಾಗಿ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ, ಜುಲೈ.30ರಂದು ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿ, ಆನೆ ಸಾವನ್ನಪ್ಪಿದ್ದ ತೋಟದಲ್ಲೇ ಕಳೇಬರವನ್ನು ಹೂತು ಹಾಕಿದ್ದರು.

ಇದು ಅಲ್ಲಿನ ಗ್ರಾಮಸ್ಥರ ಅಸಮಾಧಾನಕ್ಕೆ ಕಾರಣವಾಗಿತ್ತಲ್ಲದೇ, ಕಾಡಾನೆ ಕಳೇಬರವನ್ನು ಸುಡಬೇಕೆಂದು ಗ್ರಾಮಸ್ಥರು ಬುಧವಾರ ಸಭೆ ನಡೆಸಿ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ಎಚ್ಚರಿಕೆ ನೀಡಿದ್ದರು. ಇದರಿಂದ ಎಚ್ಚೆತ್ತ ಅರಣ್ಯ ಇಲಾಖೆ ಸಿಬ್ಬಂದಿಗಳು ಗುರುವಾರ ಜೆಸಿಬಿ ಯಂತ್ರ ಬಳಸಿ ಕಾಡಾನೆ ಕಳೇಬ ರವನ್ನು ಹೂಳಲಾಗಿದ್ದ ಗುಂಡಿಯಿಂದ ಹೊರ ತೆಗೆದರು. ಬಳಿಕ ಟ್ರ್ಯಾಕ್ಟರ್ ಸಹಾಯದಿಂದ ಆನೆಕಾಡು ಮೀಸಲು ಅರಣ್ಯಕ್ಕೆ ಸ್ಥಳಾಂತರಿಸಿ ಅಂತ್ಯಕ್ರಿಯೆ ನಡೆಸಿದರು.

ಆರಗ ಜ್ಞಾನೇಂದ್ರ ಹೇಳಿಕೆ ಖಂಡಿಸಿ 'ಕೈ' ಪ್ರತಿಭಟನೆ



ಚಾಮರಾಜನಗರ, ಆ.3– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಅರಣ್ಯ ಸಚಿವ ಈಶ್ವರ್ ಖಂಡ್ರೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಕೂಡಲೇ ಬಂಧಿಸಿ, ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿ ನಗರದ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಜಮಾಯಿಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಮೆರವಣಿಗೆ ಹೊರಟು ಬಿಜೆಪಿ ವಿರುದ್ಧ ಘೋಷಣೆ ಕೂಗಿ, ಭುವನೇಶ್ವರಿ ವೃತ್ತದಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಬಿಜೆಪಿ ನಾಯಕರಿಗೆ ಬುದ್ಧಿ ಭ್ರಮಣೆಯಾಗಿದೆ. ವಿಧಾನಸಭೆ ಚುನಾವಣೆ ಸೋಲಿನಿಂದ ಹತಾಶರಾಗಿದ್ದಾರೆ. ಗೃಹ ಸಚಿವರಾಗಿದ್ದ ಆರಗ ಜ್ಞಾನೇಂದ್ರ ಖರ್ಗೆ ವಿರುದ್ಧ ನೀಡಿರುವ ಹೇಳಿಕೆ ಅವರ ಅಪ್ರಬುದ್ಧತೆ ತೋರಿಸುತ್ತದೆ. ಹಿರಿಯ ದಲಿತ ನಾಯಕರಾಗಿರುವ ಖರ್ಗೆ ಅವರ ಹೆಸರನ್ನು ಹೇಳುವ ಜೊತೆಗೆ ಜಾತಿ ನಿಂದನೆ ಮಾಡಿದ್ದಾರೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಆಗರ ಜ್ಞಾನೇಂದ್ರ ಹಿರಿಯ ಶಾಸಕರಾಗಿ ದಲಿತ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಕಪ್ಪು ಬಣ್ಣದವರು ಎಂದು ಹೀಯ್ಯಾಳಿಸುವ ಮೂಲಕ ಅವರ ಜಾತಿಯನ್ನು ಎಳೆದು ತಂದಿದ್ದಾರೆ. ಖರ್ಗೆ ಅವರು ನಮ್ಮ ಸಮುದಾಯದ ಹಿರಿಯ ನಾಯಕರು. ಅವರನ್ನು ಕಪ್ಪು ವರ್ಣದವರು ಎಂದಿರುವುದು ಅವರ ಜಾತಿ ನಿಂದಿಸಿದ್ದಂತೆ ಆಗಿದೆ. ಕೂಡಲೇ ಅವರ ವಿರುದ್ಧ ಅಸ್ಪೃಶ್ಯತೆ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಬಂಧಿಸಬೇಕು ಎಂದು ಆಗ್ರಹಿಸಿದರು.

ಶಾಸಕ ಹೆಚ್.ಎಸ್.ಗಣೇಶ್ ಪ್ರಸಾದ್ ಮಾತನಾಡಿ, ಬಿಜೆಪಿ ಮುಖಂಡರು ಇಂತಹ ಹೇಳಿಕೆ ನೀಡುವ ಮೂಲಕ ತಮ್ಮ ಸಂಸ್ಕೃತಿ ಹಾಗೂ ಪಕ್ಷದ ಅಜೆಂಡಾ ಎಂತಹುದು ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಚಿವ ಈಶ್ವರ್ ಖಂಡ್ರೆ ವಿರುದ್ಧ ಮಾತನಾಡಿರುವುದು ಆರಗ ಜ್ಞಾನೇಂದ್ರ ಅವರಿಗೆ ಶೋಭೆ ತರುವುದಿಲ್ಲ. ಹೀಗಾಗಿ ಅವರು ಕೂಡಲೇ ಕ್ಷಮೆಯಾಚಿಸಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಜಿಲ್ಲಾ ವಕ್ತಾರ ನವೀನ್, ಬ್ಲಾಕ್ ಅಧ್ಯಕ್ಷ ಮಹಮದ್ ಅಸ್ಗರ್, ಎ.ಎಸ್.ಗುರುಸ್ವಾಮಿ, ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ಸೋಮೇಶ್ವರ್, ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ಅರುಣ್‌ಕುಮಾರ್, ಮಹದೇವಶೆಟ್ಟಿ, ಲಿಂಗರಾಜು, ಹೊಮ್ಮಪ್ರಕಾಶ್, ಗ್ರಾಪಂ ಅಧ್ಯಕ್ಷ ಪಿ.ಶೇಖರ್, ಉಪಾಧ್ಯಕ್ಷ ಪಟೇಲ್ ಗುರುಮಲ್ಲಪ್ಪ, ಮಹೇಶ್ ಕುದರ್, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಮೋಹನ್ ನಗು, ಚಂದ್ರು ಶಿವಸ್ವಾಮಿ ಇತರರಿದ್ದರು.

ರಾತ್ರೋ ರಾತ್ರಿ ದುಷ್ಕರ್ಮಿಗಳಿಂದ ಟಮೋಟೊ ಬೆಳೆ ನಾಶ

ಲಕ್ಷಾಂತರ ರೂ. ನಷ್ಟ : ದೂರು ದಾಖಲು



ಚಾಮರಾಜನಗರ, ಆ.3– ರಾತ್ರೋರಾತ್ರಿ ಜಮೀನಿಗೆ ನುಗ್ಗಿರುವ ದುಷ್ಕರ್ಮಿಗಳು ಕಟಾವಿಗೆ ಬಂದಿದ್ದ ಟಮೊಟೋ ಬೆಳೆ ನಾಶಗೊಳಿಸಿರುವ ಘಟನೆ ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಗ್ರಾಮದ ರೈತ ಮಂಜು ಎಂಬುವರಿಗೆ ಸೇರಿದ ಜಮೀನಿನಲ್ಲಿ ಈ ಕೃತ್ಯ ನಡೆದಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಮಂಜು ಅವರು ತಮ್ಮ 2 ಎಕರೆ ಜಮೀನಿನಲ್ಲಿ ಟೊಮೊಟೋ ಬೆಳೆದಿದ್ದು, ಉತ್ತಮ ಇಳುವರಿಯೂ ಬಂದಿತ್ತು. ಇನ್ನೊಂದು ವಾರದಲ್ಲಿ ಬೆಳೆ ಕಟಾವು ಮಾಡಲು ತಯಾರಿ ಮಾಡಿಕೊಳ್ಳಲಾಗಿತ್ತು. ಆದರೆ, ಬುಧವಾರ ರಾತ್ರಿ ಜಮೀನಿಗೆ ನುಗ್ಗಿರುವ ಕಿಡಿಗೇಡಿಗಳು ಎರಡು ಎಕರೆಯಲ್ಲಿ ಬೆಳೆದಿದ್ದ ಟೊಮೆಟೋ ಬೆಳೆಯನ್ನು ಗಿಡ ಸಮೇತ ಕಿತ್ತು ನಾಶಗೊಳಿಸಿದ್ದಾರೆ. ಇದರಿಂದ ಮಂಜು ಅವರಿಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಘಟನೆ ಸಂಬಂಧ ರೈತ ಮಂಜು ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ಶ್ವಾನದಳದೊಂದಿಗೆ ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ದುಷ್ಕರ್ಮಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಮುಗಿಲು ಮುಟ್ಟಿದ ಅನ್ನದಾತನ ಆಕ್ರಂದನ: ಮನೆಯಲ್ಲಿದ್ದ ಚಿನ್ನಾಭರಣ ಅಡವಿಟ್ಟು, ಕೆಲವರಿಂದ ಸಾಲ ಪಡೆದು ಟಮೊಟೋ ಬೆಳೆದಿದ್ದೆ. ಬೆಳೆ ಚೆನ್ನಾಗಿ ಬಂದಿತ್ತು ಮುಂದಿನ ವಾರ ಕಟಾವು ಮಾಡಲು ಸಿದ್ಧತೆ ಕೈಗೊಳ್ಳಲಾಗಿತ್ತು. ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗಲಿದೆ. ನನ್ನ ಕಷ್ಟಕ್ಕೆ ಸಹಾಯವಾಗುತ್ತದೆ ಎಂದು ಆಸೆ ಇಟ್ಟುಕೊಂಡಿದ್ದೆ ಆದರೆ ಯಾರೋ ದುಷ್ಕರ್ಮಿಗಳು ರಾತ್ರೋ ರಾತ್ರಿ ಬೆಳೆ ನಾಶ ಮಾಡಿದ್ದಾರೆ, ನಾನು ಯಾರಿಗೂ ಏನೂ ಮಾಡಿಲ್ಲ. ಆದರೂ ನನಗೆ ಈ ರೀತಿ ಯಾಕೆ ಮಾಡಿದ್ದಾರೆ ಎಂದು ತಿಳಿಯುತ್ತಿಲ್ಲ ಎಂದು ರೈತ ಮಂಜು ಗೋಳಾಡಿದರು.

ಮಾನವ ಕಳ್ಳ ಸಾಗಣೆ ದೊಡ್ಡ ಸಾಮಾಜಿಕ ಪಿಡುಗು

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್



ಕೊಳ್ಳೇಗಾಲ, ಆ.3– ಮಾನವ ಕಳ್ಳ ಸಾಗಣೆ ದೊಡ್ಡ ಸಾಮಾಜಿಕ ಪಿಡುಗಾಗಿ ಪರಿಣಮಿಸಿದ್ದು, ಇದಕ್ಕೆ ಮಕ್ಕಳು ಮತ್ತು ಮಹಿಳೆಯರು ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಪದವಿಪೂರ್ವ ಕಾಲೇಜು, ಸಾಧನ ಸಂಸ್ಥೆ ಸಹಯೋಗದಲ್ಲಿ ನಡೆದ ಮಾನವ ಕಳ್ಳ ಸಾಗಣೆ ತಡೆ ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ಮಾನವೀಯ ಗುಣಗಳಿಗೆ ಚ್ಯುತಿ ಬಂದರೆ ಅದೇ ಮಾನವ ಕಳ್ಳ ಸಾಗಣೆ. ಮನುಷ್ಯನನ್ನು ಮನುಷ್ಯನಾಗಿ ಕಾಣದೇ ಮಾರಾಟದ ವಸ್ತುವಾಗಿ ಕಾಣುತ್ತಿರುವುದು ದೊಡ್ಡ ದುರಂತ. ಮಹಿಳೆಯರು ಮತ್ತು ಮಕ್ಕಳನ್ನು ಅಪಹರಿಸಿ ಕಾನೂನುಬಾಹಿರ ಹಾಗೂ ಅನೈತಿಕ ಚಟುವಟಿಕೆಗಳಾದ ವೇಶ್ಯಾವಾಟಿಕೆ, ಭಿಕ್ಷಾಟನೆ, ಅಂಗಾಂಗ ಮಾರಾಟ, ಅಶ್ಲೀಲ ಚಿತ್ರಗಳ ತಯಾರಿಕೆ, ಅಕ್ರಮ ಔಷಧಿ ಪ್ರಯೋಗ, ಅಕ್ರಮ ದಂಧೆಗಳಿಗೆ ಹೆಚ್ಚಾಗಿ ಬಳಕೆ ಮಾಡಿಕೊಳ್ಳುತ್ತಾರೆ. ಸಾರ್ವಜನಿಕರು ಸಮಾಜದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯುವಲ್ಲಿ ಸಹಕರಿಸಬೇಕು ಎಂದರು.

ಬಿಗಿ ಕಾನೂನುಗಳ ನಡುವೆ ಮಹಿಳೆ ಮತ್ತು ಮಕ್ಕಳ ಸಾಗಣೆ ಸದ್ದಿಲ್ಲದೇ ನಡೆಯುತ್ತಿದೆ. ಜನರ ಆರ್ಥಿಕ ಸಮಸ್ಯೆಗಳನ್ನೇ ಬಂಡವಾಳ ಮಾಡಿಕೊಂಡು ಸಾಗಾಣಿಕೆ ಮಾಡಲಾಗುತ್ತಿದೆ. ಆಸೆ, ಆಮಿಷ ಒಡ್ಡಿ ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತಿದೆ. ಆದ ಕಾರಣ ಸಮಾಜದ ಪ್ರತಿಯೊಬ್ಬರೂ ಜಾಗೃತಗೊಳ್ಳಬೇಕು. ಮಕ್ಕಳ ವಿಚಾರದಲ್ಲಿ ಪೋಷಕರು ಜವಾಬ್ದಾರಿ ವಹಿಸಬೇಕು. ಈ ನಿಟ್ಟಿನಲ್ಲಿ ಪ್ರಸ್ತುತ ವಿದ್ಯಾರ್ಥಿಗಳು ಕಾನೂನಿನ ಜ್ಞಾನ ಹೊಂದಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ ಮಾತನಾಡಿ, ಹದಿಹರೆಯದ ವಯಸ್ಸಿನಲ್ಲಿ ವಿದ್ಯಾರ್ಥಿಗಳು ಇಲ್ಲಸಲ್ಲದ ಕೆಟ್ಟ ಆಲೋಚನೆಗಳಿಗೆ ಮನಸ್ಸು ಕೊಡದೆ ಓದುವ ಕಡೆ ಗಮನಹರಿಸಬೇಕು. ವಿದ್ಯಾರ್ಥಿಗಳು ಓದುವ ಜೊತೆಗೆ ಆರೋಗ್ಯದ ಕಡೆ ನಿಗಾವಹಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಎನ್.ಮಹದೇವಸ್ವಾಮಿ, ಸಾಧನ ಸಂಸ್ಥೆ ನಿರ್ದೇಶಕ ಟಿ.ಜೆ.ಸುರೇಶ್, ಪಟ್ಟಣ ಠಾಣೆ ಉಪಆರಕ್ಷಕ ನಿರೀಕ್ಷಕಿ ಉಮಾವತಿ, ಉಪನ್ಯಾಸಕರಾದ ರುದ್ರೇಶ್.ಬಿ, ಕೆ.ಆರ್.ಗುರುಪ್ರಸಾದ್, ಗೀತಾ, ಮಹದೇವಮ್ಮ, ಬಿ.ಎಂ.ಗುರುಪ್ರಸಾದ್, ಶಿವಮೂರ್ತಿ ಸವಿತಾ, ಎಂ.ಲಿಂಗಣ್ಣ ಇದ್ದರು.

ವಿಮಾ ಕಂತು ಪಾವತಿಸಲು ಅವಧಿ ವಿಸ್ತರಣೆ

ಚಾಮರಾಜನಗರ, ಆ.3– 2023–24 ಸಾಲಿನ ಮುಂಗಾರು ಹಂಗಾಮಿಗೆ ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಮಾವು ಬೆಳೆ ಸೇರ್ಪಡೆಗೊಳಿಸಿದ್ದು, ವಿಮಾ ಕಂತು ಪಾವತಿಸಲು ಆ.7ರವರೆಗೆ ಅವಧಿ ವಿಸ್ತರಿಸಲಾಗಿದೆ. ರೈತರು ವಿಮಾ ಕಂತು ಪಾವತಿಸಲು ಜು.31ರವರೆಗೆ ಅವಧಿ ನಿಗದಿಪಡಿಸಲಾಗಿತ್ತು. ಇದೀಗ ಆ.7ರವರೆಗೂ ವಿಮಾ ಕಂತು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ರೈತರು ಯೋಜನೆ ಸದುಪಯೋಗ ಮಾಡಿಕೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ಇಂದು ರಕ್ತನಿಧಿ ಕೇಂದ್ರ ಉದ್ಘಾಟನೆ

ಚಾಮರಾಜನಗರ, ಆ.3– ನಗರದ ಹೊರವಲಯದ ಮರಿಯಾಲದಲ್ಲಿರುವ ಬಸವ ರಾಜೇಂದ್ರ ಆಸ್ಪತ್ರೆ 16ನೇ ವಾರ್ಷಿಕೋತ್ಸವದ ಅಂಗವಾಗಿ ಆಸತ್ರೆಯಲ್ಲಿ ರಕ್ತನಿಧಿ ಹಾಗೂ ಡಯಾಗ್ನೋಸ್ಟಿಕ್ ಕೇಂದ್ರ ಉದ್ಘಾಟಿಸಲಾಗುವುದು ಎಂದು ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಬಸವ ರಾಜೇಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವಜೀವನ ಟ್ರಸ್ಟ್ ಸಹಯೋಗದೊಂದಿಗೆ ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಎಲ್ಲಾ ಆರೋಗ್ಯ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ರಕ್ತನಿಧಿ ಕೇಂದ್ರದೊಂದಿಗೆ ಬಸವ ರಾಜೇಂದ್ರ ಮತ್ತು ಅಪೊಲೋ ಡಯಾಗ್ನೋಸ್ಟಿಕ್ ಕೇಂದ್ರ ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಟ್ರಾಮಕೇರ್ ಸೆಂಟರ್, ಕಣ್ಣಿನ ಶಸ್ತ್ರಚಿಕಿತ್ಸೆ ಕೇಂದ್ರ ತೆರೆಯಲು ಚಿಂತಿಸಲಾಗಿದೆ ಎಂದರು.

ವಾರ್ಷಿಕೋತ್ಸವದ ಅಂಗವಾಗಿ ಆ.4 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12 ರವರೆಗೆ ರಕ್ತದಾನ ಶಿಬಿರ ನಡೆಯಲಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಹೆಚ್.ಎಂ.ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಸಿ. ಪುಟ್ಟರಂಗಶೆಟ್ಟಿ, ಎಂ.ಆರ್. ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಡಾ.ಶ್ವೇತಾ ಶಶಿಧರ್, ಆಸ್ಪತ್ರೆ ಮ್ಯಾನೇಜರ್ ತೇಜಸ್, ಆನಂದ್ ಇದ್ದರು.

ಮಣಿಪುರ ಘಟನೆ ಖಂಡಿಸಿ ಕ್ರೈಸ್ತ ಸಂಘಟನೆಗಳ ಪ್ರತಿಭಟನೆ



ಚಾಮರಾಜನಗರ, ಆ.3– ಮಣಿಪುರದಲ್ಲಿ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ನಗರದಲ್ಲಿ ಜಿಲ್ಲಾ ಕ್ರೈಸ್ತ ಸಂಘಟನೆಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಚರ್ಚ್ ಎದುರು ಸಮಾವೇಶಗೊಂಡ ನೂರಾರು ಪ್ರತಿಭಟನಾಕಾರರು, ಅಲ್ಲಿಂದ ಡಿವಿಯೇಷನ್ ರಸ್ತೆ ಪಚ್ಚಪ್ಪ ವೃತ್ತ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ ಮಣಿಪುರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮೂಲಕ ಪ್ರಧಾನಮಂತ್ರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ 3 ತಿಂಗಳಿಂದ ಮಣಿಪುರದಲ್ಲಿ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ಅತ್ಯಾಚಾರ ನಡೆಯು ತ್ತಿರುವುದು ನೋವಿನ ಸಂಗತಿ. ಮಣಿಪುರ ದಲ್ಲಿ ಈವರೆಗೆ 300ಕ್ಕೂ ಹೆಚ್ಚು ಕ್ರೈಸ್ತ ದೇವಾಲಯಗಳು ಹಾಗೂ ನೂರಾರು ಕ್ರೈಸ್ತರ ಮನೆಗಳು, ಆಸ್ತಿಪಾಸ್ತಿಗೆ ಹಾನಿ ಮಾಡ ಲಾಗಿದೆ ಎಂದು ದೂರಿದರು.

ಈಗಾಗಲೇ ಲಕ್ಷಾಂತರ ಬುಡಕಟ್ಟು ಜನಾಂಗದ ಜನರು ಕಾಡು ಮೇಡುಗಳಲ್ಲಿ ತಲೆ ಮರೆಸಿಕೊಂಡಿದ್ದಾರೆ. ಜೊತೆಗೆ ಬೇರೆಡೆಗೆ ವಲಸೆ ಹೋಗಿದ್ದಾರೆ. ಆದ್ದರಿಂದ ಮಣಿಪುರ ಸರ್ಕಾರ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವ ಮೂಲಕ ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕ್ರೈಸ್ತ ಧರ್ಮಗುರುಗಳಾದ ಅಂಥೋಣಪ್ಪ, ಫಾಸ್ಟರ್ ಗ್ರೇಟ್‌ಫುಲ್, ಅಂತೋಣಿರಾಜ್, ಫಾಸ್ಟರ್ ಫಿಲಿಪ್, ವಿನ್ಸೆಂಟ್ ಆಗ್ನೇಲ್ ದಾಸ್, ಸೆಲ್ವಕುಮಾರ್, ಪ್ರಸನ್ನ ಕುಮಾರ್, ಜಾನ್ ಸುಮತಿ ಪಾಲ್, ಫಾಸ್ಟರ್ ಸುರೇಶ್, ಗುರು ಅಂತೋಣಿ ಸ್ವಾಮಿ, ಫಾಸ್ಟರ್ ಚಂದ್ರು, ಥಾಮಸ್, ಕುಮಾರ್, ದೊರೈಸ್ವಾಮಿ, ಗುರು ಮದಲೈ, ಮುತ್ತು, ಜೋಸೆಫ್ ನಾರಾಯಣ್, ಜಾನ್, ಸುಸಿ ಫ್ರಾನ್ಸಿಸ್, ಜೈಸಿ ಫ್ರಾನ್ಸಿಸ್, ಸಿಸ್ಟರ್ ಡೈಸಿ, ಬ್ರದರ್ ಆಗ್ನೆಲ್, ನರಸಿಂಹಮೂರ್ತಿ, ಫಾಸ್ಟರ್ ಮಲ್ಲೇಶ್ ಸೇರಿದಂತೆ ನೂರಾರು ಕ್ರೈಸ್ತ ಬಾಂಧವರು ಭಾಗವಹಿಸಿದ್ದರು.

ನಾಳೆ ಗೃಹಜ್ಯೋತಿ ಯೋಜನೆಗೆ ಚಾಲನೆ

ಚಾಮರಾಜನಗರ, ಆ.3– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆ ಚಾಲನೆ ಕಾರ್ಯಕ್ರಮ ಆ.5 ರಂದು ಮಧ್ಯಾಹ್ನ 3 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಹೆಚ್.ಎಂ.ಗಣೇಶ್ ಪ್ರಸಾದ್, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಟನಾದಲ್ಲಿ 'ಕಣಿವೆಯ ಹಾಡು' ನಾಟಕ

ಮೈಸೂರು, ಆ. 3– ಮೈಸೂರಿನ ರಾಮಕೃಷ್ಣನಗರದ ನಟನಾ ರಂಗಶಾಲೆಯಲ್ಲಿ ಸಪ್ತಹಯ ರಂಗಸಂಚಿಗಾಗಿ ನಟನಾವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಆ. 6 ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಟನ ಪಯಣ ರೆಪರ್ಟರಿ ತಂಡದ 'ಕಣಿವೆಯ ಹಾಡು' ನಾಟಕವು ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ಅತೊಲ್ ಫ್ಯೂಗಾರ್ಡ್ ಅವರದ್ದು, ಡಾ.ಮೀರಾ ಮೂರ್ತಿ ಅವರು ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದು, ಅನುಷ್ ಶೆಟ್ಟಿ ಮತ್ತು ಮುನ್ನ ಮೈಸೂರು ಅವರು ನಾಟಕಕ್ಕೆ ಸಂಗೀತ ಒದಗಿಸಿದ್ದಾರೆ. ನಟನದ ಮೇಘ ಸಮೀರ ಮತ್ತು ದಿಶಾ ರಮೇಶ್ ಅವರು ಅಭಿನಯಿಸುತ್ತಿದ್ದು ನಾಡಿನ ಹೆಸರಾಂತ ರಂಗತಜ್ಞ ಡಾ. ಶ್ರೀಪಾದ ಭಟ್ ಅವರು ನಾಟಕದ ವಿನ್ಯಾಸ ಮತ್ತು ನಿರ್ದೇಶನವನ್ನು ಮಾಡಿದ್ದಾರೆ.

ಒಂದನೇ ಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ

ಅನುಮತಿ ನೀಡುವಂತೆ ಕೋರಿದ್ದಾರೆ. ಪ್ರಧಾನಿಯವರಿಗೆ ಅಧಿಕೃತವಾಗಿ ಯಾವುದೇ ಮನವಿ ಪತ್ರ ನೀಡಿಲ್ಲ. ಮಾತುಕತೆ ಸಂದರ್ಭದಲ್ಲೇ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅನೌಪಚಾರಿಕವಾಗಿ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿರುವ ಜಿಎಸ್‌ಟಿ ಪರಿಹಾರದ ಬಾಬ್ತನ್ನು ಕೂಡಲೇ ಬಿಡುಗಡೆ ಮಾಡುವಂತೆಯೂ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿಯವರು ಭೇಟಿಯಾದ ತಕ್ಷಣವೇ ಹೂಗುಚ್ಛ ನೀಡಿ, ಹುಟ್ಟುಹಬ್ಬದ ಶುಭಾಶಯ ಕೋರಿದ ಪ್ರಧಾನಿಯವರು, ಮತ್ತೆ ಮುಖ್ಯಮಂತ್ರಿಯಾದ ಅನುಭವ ಹೇಗಿದೆ ಎಂದು ಪ್ರಶ್ನಿಸಿದ್ದಾರೆ. ಅಲ್ಪ ಸಮಯದಲ್ಲೇ ರಾಜ್ಯದ ಸಮಸ್ಯೆಗಳನ್ನು ಪ್ರಧಾನಿ ಅವರ ಗಮನಕ್ಕೆ ಮುಖ್ಯಮಂತ್ರಿಗಳು ತಂದಿದ್ದಾರೆ. ಆದರೆ, ಅವರಿಂದ ಯಾವುದೇ ಸ್ಪಷ್ಟ ಭರವಸೆಗಳು ದೊರೆತಿಲ್ಲ. ಕೆಲವು ವಿಚಾರಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತರುವುದಾಗಿ ತಿಳಿಸಿದ್ದಾರೆ. ವಿವಿಧ ಯೋಜನೆಗಳಡಿ ಕರ್ನಾಟಕಕ್ಕೆ ಬರಬೇಕಾಗಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡುವಂತೆಯೂ ಇದೇ ಸಂದರ್ಭದಲ್ಲಿ ಪ್ರಧಾನಿ ಅವರನ್ನು ಮುಖ್ಯಮಂತ್ರಿ ಕೋರಿದ್ದಾರೆ. ನೀರಾವರಿ ಯೋಜನೆಗಳು, ಜಲಜೀವನ್ ಮಿಷನ್ ಹಾಗೂ ನರೇಗಾ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆಯೂ ಮನವಿ ಮಾಡಿದ್ದಾರೆ. ಪ್ರಧಾನಿ ಭೇಟಿಯ ನಂತರ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿತಿನ್ ಗಡ್ಕರಿ, ನಿರ್ಮಲ ಸೀತಾರಾಮನ್ ಅವರನ್ನು ಸಂಸತ್‌ಭವನದಲ್ಲೇ ಭೇಟಿಯಾಗಿ ಅವರವರ ಇಲಾಖೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಯೋಜನೆಗಳ ವಿಚಾರವನ್ನು ಪ್ರಸ್ತಾಪಿಸಿದ್ದಾರೆ.

ಐತಿಹಾಸಿಕ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿರುವ ಸರ್ಕಾರ, ದಸರೆಗೆ ಕಳೆಕಟ್ಟಲು ಏರ್ ಶೋ ಏರ್ಪಡಿಸುವಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥಸಿಂಗ್ ಅವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಲ್ಲಿ ಮೈಸೂರು ದಸರಾದಲ್ಲಿ ಏರ್ ಶೋ ನಡೆಸಲು ಕ್ರಮ ಕೈಗೊಳ್ಳಬೇಕು. ಆ ಮೂಲಕ ಮೈಸೂರು ನಗರದ ಸಾಂಸ್ಕೃತಿಕ ಮಹತ್ವದ ಜತೆ ಆರ್ಥಿಕ ಮಹತ್ವವನ್ನೂ ಪಡೆದಂತಾಗುತ್ತದೆ ಎಂದು ಹೇಳಿದ್ದಾರೆ. ದಸರೆಯಲ್ಲಿ ಏರ್ ಶೋ ನಡೆಸುವ ಕುರಿತು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಬಳಿ ವಿವರ ಪಡೆದ ರಾಜನಾಥಸಿಂಗ್, ಇದಕ್ಕೆ ಪೂರಕ ವಾಗಿ ಪ್ರತಿಕ್ರಿಯಿಸಿದ್ದಾರೆ.

ಸೈಲಂಟಾಗಿದ್ದವರಿಗೆ ವಿಜಯಮಾಲೆ

ಬೆಂಬಲಿಸುವುದಾಗಿ ಮುಂದೆ ಬಂದಿದ್ದ ಸದಸ್ಯರಾದ ಗೌತಮ್, ಲೀಲಾವತಿ, ನರೇಂದ್ರ ಕುಮಾರ್, ಮಹದೇವಮ್ಮ, ದೀಪಿಕಾ, ವೆಂಕಟೇಶ್, ಪುಟ್ಟಸ್ವಾಮಿಗೌಡ ಮತ್ತು ಕುಳ್ಳಯ್ಯ ಕುಮಾರ್ ಅವರನ್ನು ಕೆ.ಆರ್.ಪೇಟೆ ತಾಲೂಕಿನ ಚಂದಗೊಳ್ಳಮ್ಮ ದೇವಾಲಯಕ್ಕೆ ಕರೆದೊಯ್ದರು. ಅಲ್ಲಿ ಎಲ್ಲಾ 8 ಮಂದಿಯೂ ಭಾರತಿ ವಿಶ್ವನಾಥ್ ಅವರಿಗೆ ಮತ ಚಲಾಯಿಸುವುದಾಗಿ ಆಣೆ ಮಾಡಿದ್ದೂ ಆಯಿತು. ಅಲ್ಲಿಂದ ಮತ್ತೆ ಗ್ರಾಮಕ್ಕೆ ಈ ಸದಸ್ಯರನ್ನು ಕರೆತಂದರೆ ಎಲ್ಲಿ ವಿಜಯ ರಾಮಕೃಷ್ಣೇಗೌಡ ಕಡೆಯವರು ತಮ್ಮತ್ತ ಸೆಳೆದು ಬಿಡುತ್ತಾರೋ ಎಂಬ ಮುನ್ನೆಚ್ಚರಿಕೆಯಿಂದ ಎಲ್ಲರನ್ನು ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಪ್ರವಾಸ ಕರೆದೊಯ್ಯಲಾಯಿತು. ಇತ್ತ ವಿಜಯ ರಾಮಕೃಷ್ಣೇಗೌಡ ಅವರೂ ಸೇರಿದಂತೆ ಒಟ್ಟು 6 ಮಂದಿ ಸದಸ್ಯರು ಗ್ರಾಮದಲ್ಲೇ ಉಳಿದಿದ್ದರು. ಒಬ್ಬರನ್ನೂ ತಮ್ಮತ್ತ ಸೆಳೆದುಕೊಳ್ಳಲು ಸಾಧ್ಯವಾಗದಂತೆ ಎದುರಾಳಿ ಭಾರತಿ ವಿಶ್ವನಾಥ್ ಎಲ್ಲರನ್ನು ಪ್ರವಾಸಕ್ಕೆ ಕರೆದೊಯ್ದುಬಿಟ್ಟಿದ್ದರು. ಮೇಲೂರು ಗ್ರಾಪಂನ ಅಧಿಕಾರದ ಚುಕ್ಕಾಣಿ ಭಾರತಿ ವಿಶ್ವನಾಥ್ ಅವರಿಗೆ ಖಚಿತ ಎಂಬ ಮಾತು ಈ ಗ್ರಾಪಂಗೆ ಸೇರಿದ ಎಲ್ಲಾ ಗ್ರಾಮಗಳಲ್ಲೂ ಪ್ರತಿಧ್ವನಿಸುತ್ತಿತ್ತು. ಪ್ರವಾಸಕ್ಕೆ ಹೋಗಿದ್ದ 8 ಸದಸ್ಯರೊಂದಿಗೆ ಭಾರತಿ ವಿಶ್ವನಾಥ್ ಹಿಂತಿರುಗಿದ್ದು, ಚುನಾವಣೆ ದಿನವಾದ ಮಂಗಳವಾರ. ಎಲ್ಲಾ ಸದಸ್ಯರು ಗ್ರಾಪಂ ಕಚೇರಿಯಲ್ಲಿ ಜಮಾಯಿಸಿದ್ದರು.

ಗ್ರಾಪಂ ಕಚೇರಿ ಮುಂದೆ ನೆರೆದಿದ್ದ ಎಲ್ಲರ ಬಾಯಲ್ಲೂ ಭಾರತಿ ವಿಶ್ವನಾಥ್ ಅಧ್ಯಕ್ಷೆ ಎಂಬುದೇ ಮಾತಾಗಿತ್ತು. ತಮ್ಮೊಂದಿಗೆ 8 ಸದಸ್ಯರಿದ್ದಾರೆ, ತಮ್ಮ ಮತವೂ ಸೇರಿ 9 ಮತ ಪಡೆದು ತಾನೇ ಅಧ್ಯಕ್ಷೆ ಎಂದು ಭಾರತಿ ವಿಶ್ವನಾಥ್ ಬೀಗುತ್ತಿದ್ದರು. ಕಚೇರಿ ಹೊರಗೆ ಅವರ ಬೆಂಬಲಿಗರು ವಿಜಯೋತ್ಸವ ಆಚರಿಸಲು ಪಟಾಕಿ ಹಾಗೂ ಹಾರ ತುರಾಯಿಗಳೊಂದಿಗೆ ತುದಿಗಾಲಲ್ಲಿ ನಿಂತಿದ್ದರು.

ಅಧ್ಯಕ್ಷ ಸ್ಥಾನಕ್ಕೆ ಮತದಾನ ಮುಗಿದು ಮತ ಎಣಿಕೆ ಆರಂಭವಾಗುತ್ತಲೇ ಗ್ರಾಪಂ ಎದುರು ನೆರೆದಿದ್ದವರು ಭಾರತಿ ವಿಶ್ವನಾಥ್‌ಗೆ 9 ಹಾಗೂ ವಿಜಯ ರಾಮಕೃಷ್ಣೇಗೌಡರಿಗೆ 6 ಮತ ಎಂದುಕೊಳ್ಳುತ್ತಾ ಭಾರತಿ ಅವರು ಗೆಲುವಿನ ಘೋಷಣೆಯಾಗುತ್ತಲೇ ಪಟಾಕಿ ಸಿಡಿಸಲು ಸನ್ನದ್ಧರಾಗಿದ್ದರು. ಮತ ಎಣಿಕೆ ಮುಗಿದು ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸಿದಾಗ ಭಾರತಿ ಅವರಿಗೆ ಲಭಿಸಿದ್ದು ಕೇವಲ 6 ಮತವಾದರೆ, 9 ಮತ ಪಡೆದು ವಿಜಯ ರಾಮಕೃಷ್ಣೇಗೌಡ ವಿಜಯದ ಪತಾಕೆ ಹಾರಿಸಿದ್ದರು.

ತಮ್ಮೊಂದಿಗೆ 8 ಮಂದಿಯನ್ನು ಕರೆದೊಯ್ದು ದೇವರ ಮುಂದೆ ಆಣೆ ಮಾಡಿಸಿ, ಮಹದೇಶ್ವರ ಬೆಟ್ಟಕ್ಕೆ ಪ್ರವಾಸ ಕರೆದೊಯ್ದು ನೇರವಾಗಿ ಗ್ರಾಮಕ್ಕೆ ಆಗಮಿಸಿದ್ದರೂ, ಹೇಗೆ ವಿಜಯ ರಾಮಕೃಷ್ಣೇಗೌಡ ಜಯಗಳಿಸಿದರು. ಮೂರು ಮಂದಿಯನ್ನು ಸೆಳೆದರು ಎಂಬ ಚಿಂತೆ ಭಾರತಿ ವಿಶ್ವನಾಥ್‌ಗೆ ಮಾತ್ರವಲ್ಲ ಗ್ರಾಪಂ ಕಚೇರಿ ಮುಂದೆ ವಿಜಯೋತ್ಸವ ಆಚರಿಸಲು ಸಕಲ ಸಿದ್ಧತೆಗಳೊಂದಿಗೆ ನಿಂತಿದ್ದ ಬೆಂಬಲಿಗರಿಗೂ ಕಾಡಲಾರಂಭಿಸಿತು. ವಿಜಯ ರಾಮಕೃಷ್ಣೇಗೌಡ ಅವರು ಭಾರತಿ ಅವರ ತಂತ್ರಕ್ಕೆ ಸೈಲೆಂಟಾಗಿ ಪ್ರತಿತಂತ್ರ ಹೂಡಿ ಅಧಿಕಾರದ ಗದ್ದುಗೆ ಏರಿದ್ದರು. ತಮ್ಮೊಂದಿಗೆ ಪ್ರವಾಸ ಬಂದ 8 ಮಂದಿ ಪೈಕಿ ಅಡ್ಡ ಮತದಾನ ಮಾಡಿದ ಮೂವರು ಯಾರು ಎಂಬ ಪ್ರಶ್ನೆ ಭಾರತಿ ವಿಶ್ವನಾಥ್ ತಲೆಯಲ್ಲಿ ಕೊರೆಯಲಾರಂಭಿಸಿತು. ಎಲ್ಲಾ 8 ಮಂದಿಯೂ 'ನಿಮಗೆ ಮತ ಹಾಕಿದ್ದೇವೆ' ಎಂದು ಹೇಳುತ್ತಿದ್ದರು. ಚುನಾವಣೆಯಲ್ಲಿ ಗೆದ್ದಿದ್ದ ವಿಜಯ ರಾಮಕೃಷ್ಣೇಗೌಡರ ಜೊತೆ ಹೋಗದೇ ಇವರೊಂದಿಗೆ ನಿಂತುಬಿಟ್ಟರು. ಹಾಗಾದರೆ ಅಡ್ಡ ಮತದಾನ ಮಾಡಿದವರನ್ನು ಪತ್ತೆ ಮಾಡುವುದು ಹೇಗೆ ಎಂದು ಯೋಚಿಸಿದ ಭಾರತಿ ವಿಶ್ವನಾಥ್, ಸತ್ಯದ ಕ್ಷೇತ್ರವೆಂದೇ ಕರೆಯಲ್ಪಡುವ ಕಪ್ಪಡಿ ರಾಚಪ್ಪಾಜಿ ದೇವಸ್ಥಾನಕ್ಕೆ 8 ಮಂದಿಯನ್ನೂ ಕರೆದೊಯ್ದರೇ ಅಲ್ಲಿ ಕೂಡ ಎಲ್ಲಾ 8 ಮಂದಿಯೂ ಭಾರತಿ ವಿಶ್ವನಾಥ್‌ಗೆ ಮತ ಚಲಾಯಿಸಿರುವುದಾಗಿ ದೇವರ ಮುಂದೆ ಆಣೆ ಮಾಡಿಬಿಡುವುದೇ. ಈಗ ಮತ್ತೆ ಭಾರತಿ ಅವರ ತಲೆ ಕೊರೆಯಲಾರಂಭಿಸಿದೆ. ಯಾರು ಮೂವರು ಸುಳ್ಳು ಪ್ರಮಾಣ ಮಾಡಿದ್ದಾರೆ ಎಂಬುದೇ ಈಗ ಭಾರತಿ ಮಾತ್ರವಲ್ಲದೇ ಗ್ರಾಪಂನ ಎಲ್ಲಾ ಗ್ರಾಮಗಳಲ್ಲೂ ಕೇಳಿ ಬರುತ್ತಿರುವ ಮಿಲಿಯನ್ ಡಾಲರ್ ಪ್ರಶ್ನೆ. ಜೊತೆಗೆ ಊರಲ್ಲೇ ಇಲ್ಲದೇ ಪ್ರವಾಸ ಹೋಗಿದ್ದವರಲ್ಲಿ ಯಾವ ತಂತ್ರಗಾರಿಕೆಯಿಂದ ವಿಜಯ ರಾಮಕೃಷ್ಣೇಗೌಡ ಸೆಳೆದರು ಎಂಬ ಪ್ರಶ್ನೆಯೂ ಕೂಡ ಸೇರಿಕೊಂಡಿದೆ.

ಕೇಂದ್ರ ಹೆದ್ದಾರಿ ಸಚಿವ ಗಡ್ಕರಿ ಭರವಸೆ

ವಿವಿಧ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಬೇಕು. ವಿವಿಧ ರಸ್ತೆಗಳ ನಿರ್ವಹಣೆಗಾಗಿ ಐವತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಹೆದ್ದಾರಿಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಕೊಡಬೇಕು ಎಂದು ಮನವಿ ಮಾಡಿಕೊಂಡರು. ಹೀಗೆ ವಿವಿಧ ರಸ್ತೆಗಳನ್ನು ಅಭಿವೃದ್ಧಿಪಡಿಸಿದರೆ ಮತ್ತು ನಿರ್ಮಿಸಿದರೆ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಸಿದ್ದರಾಮಯ್ಯ ವಿವರಿಸಿದಾಗ, ಈ ಎಲ್ಲವುಗಳ ಕುರಿತು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕಂಡುಹಿಡಿಯುವುದಾಗಿ ಗಡ್ಕರಿ ಭರವಸೆ ನೀಡಿದ್ದಾರೆ.

ಅತೀ ವೇಗವೇ ಕಾರಣ

ಎಂಬುದನ್ನು ಪ್ರಾಧಿಕಾರದ ವರದಿಯಲ್ಲಿ ತಿಳಿಸಲಾಗಿದೆ. ಕಾರು ಮತ್ತು ಬೈಕುಗಳ ಚಾಲಕರು 150ರಿಂದ 160 ಕಿ.ಮೀ. ವೇಗದಲ್ಲಿ ಚಲಿಸಿ ನಿಯಂತ್ರಣ ಕಳೆದುಕೊಂಡು ಹಲವು ಅಪಘಾತಗಳಾಗಿ ಸಾವು–ನೋವುಗಳು ಸಂಭವಿಸಿವೆ. ಅಪಘಾತಗಳು ಸಂಭವಿಸಬಾರದೆಂಬ ಉದ್ದೇಶದಿಂದಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯ ಎರಡೂ ಬದಿಯಲ್ಲಿ ಸರ್ವೀಸ್ ರಸ್ತೆಯನ್ನು ನಿರ್ಮಿಸಲಾಗಿದ್ದು, ಅಲ್ಲಿ ಕಡಿಮೆ ವೇಗದಲ್ಲಿ ಸಂಚರಿಸುವ ವಾಹನಗಳು ಓಡಾಡುವಂತೆ ತಿಳಿಸಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯಲ್ಲಿ ಕಳೆದ 6 ತಿಂಗಳ ಅವಧಿಯಲ್ಲಿ ಸಂಭವಿಸಿದ ಅಪಘಾತ, ಸಾವು–ನೋವುಗಳ ಮಾಹಿತಿಯನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ಜುಲೈ 27ರಂದು ಲೋಕಸಭೆಯ ಗಮನ ಸೆಳೆದರಲ್ಲದೆ, ಅಪಘಾತಗಳನ್ನು ತಪ್ಪಿಸಲು ಕ್ರಮ ವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ಡಿಪಿಆರ್ ಸಿದ್ಧಪಡಿಸಲು ಕೇಂದ್ರ ಸೂಚನೆ

ಸರ್ಕಾರದೊಂದಿಗೆ ಮಾತನಾಡುತ್ತೇವೆ, ಅದು ಬೆಂಬಲಿಸಲು ಸಿದ್ಧವಾಗಿದೆ ಎಂದರು. ಬೆಂಗಳೂರಿನ ಟ್ರಾಫಿಕ್ ಸಮಸ್ಯೆ ಬಗೆಹರಿಸಲು ರಾಜ್ಯ ಸರ್ಕಾರ ಸಜ್ಜಾಗಿದೆ. ಇಸ್ರೇಲ್‌ನ ಒಂದು ಸೇರಿದಂತೆ ಸುಮಾರು 10 ಕಂಪನಿಗಳು ಪ್ರಸ್ತುತಿಗಳನ್ನು ನೀಡಿದ್ದು, ಬಿಡ್‌ಗಳಲ್ಲಿ ಭಾಗವಹಿಸಲು ಅವರನ್ನು ಕೇಳಲಾಗಿದೆ. ಆಸಕ್ತರು ಅಭಿಪ್ರಾಯ ಸಲ್ಲಿಸಲು ಆ. 8 ಕೊನೆಯ ದಿನವಾಗಿದೆ. ಅವರೆಲ್ಲರೂ ಅಂತರ ರಾಷ್ಟ್ರೀಯ ವಿನ್ಯಾಸ ಮತ್ತು ಪರಿಕಲ್ಪನೆಯೊಂದಿಗೆ ಭಾಗವಹಿಸಲಿ, ಬೆಂಗಳೂರು ಟ್ರಾಫಿಕ್ ದಟ್ಟಣೆಯನ್ನು ಕಡಿಮೆ ಮಾಡಲು ನಾವು ಇದನ್ನು ಮುಂದುವರಿಸಲು ನಿರ್ಧರಿಸಿದ್ದೇವೆ ಎಂದರು.

ಮುಂದಿನ ಎರಡು ವರ್ಷದಲ್ಲಿ ಭಾರತ ಸೇರಿದಂತೆ ವಿಶ್ವದಲ್ಲಿ 600 ಮಿಲಿಯನ್ ಟನ್ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ ಆತಂಕ

● ಸಮುದ್ರ ಸೇರುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಪ್ರತ್ಯೇಕ ದ್ವೀಪ ನಿರ್ಮಾಣವಾಗುವ ಸಾಧ್ಯತೆ ● ಜಲಚರ ಜೀವಕ್ಕೂ ಆಪತ್ತು: ಅಂತಿಮವಾಗಿ ಮನುಷ್ಯನಿಗೂ ತೊಂದರೆಯಾಗುವ ಅಪಾಯ ● ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ಕವರ್ಸ್ ಆವಿಷ್ಕಾರ; ಬಳಕೆ ಬಗ್ಗೆ ಜನಾಸಕ್ತಿ ಅವಶ್ಯ



ಮೈಸೂರು, ಆ.3(ಬಿಎಲ್‌ಯು)– ಭಾರತ ಸೇರಿದಂತೆ ವಿಶ್ವದಲ್ಲಿ ಮುಂದಿನ ಎರಡು ವರ್ಷದಲ್ಲಿ ಪರಿಸರಕ್ಕೆ ಮಾರಕವಾದ 600 ಮಿಲಿಯನ್ ಟನ್ ಪಾಸ್ಟಿಕ್ ತ್ಯಾಜ್ಯ ಉತ್ಪಾದನೆ ಆಗಲಿದೆ ಎಂದು ಇಪ್ಟಾ (ಇಂಡಿಯನ್ ಪಲ್ಪ್ ಅಂಡ್ ಪೇಪರ್ ಟೆಕ್ನಾಲಜಿ ಅಸೋಸಿಯೇಷನ್) ಅಧ್ಯಕ್ಷ ಗಣೇಶ್ ಭಡ್ತಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಸಿಎಫ್‌ಟಿಆರ್‌ಐ (ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್)ನಲ್ಲಿ ಇಂದಿನಿಂದ ಆರಂಭವಾಗಿರುವ ಇಪ್ಟಾ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತ ಸೇರಿದಂತೆ ವಿಶ್ವದಲ್ಲಿ ದಿನ ಕಳೆದಂತೆ ಪ್ಲಾಸ್ಟಿಕ್ ಉತ್ಪಾದನೆ ಮಿತಿ ಮೀರುತ್ತಿದೆ. ಮುಂದಿನ ಎರಡು ವರ್ಷದ ಅವಧಿಯಲ್ಲಿ 600 ಮಿಲಿಯನ್ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದನೆ ಆಗಲಿದೆ. ಇದರಲ್ಲಿ ಶೇಕಡ 6ರಷ್ಟು ಪ್ಲಾಸ್ಟಿಕ್ ಮಾತ್ರ ಮರು ಬಳಕೆ ಆಗಲಿದೆ. ಉಳಿದದ್ದು ಸಮುದ್ರ ಸೇರಲಿದೆ ಎಂದರು.

ಪ್ಲಾಸ್ಟಿಕ್ ತ್ಯಾಜ್ಯ ಹೀಗೆ ಸಮುದ್ರ ಸೇರಿದರೆ ಅದೇ ಒಂದು ದ್ವೀಪವಾಗುವ ಸಾಧ್ಯತೆ ಇದೆ. ಜಲಚರ ಪ್ರಾಣಿಗಳ ಜೀವಕ್ಕೂ ಕುತ್ತು ಬರುತ್ತದೆ. ಸಮುದ್ರ ಕೂಡ ಮಾಲಿನ್ಯವಾಗಿ ಮನುಷ್ಯನೇ ಹಲವು ತೊಂದರೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ಲಾಸ್ಟಿಕ್ ಅತ್ಯಂತ ಅಪಾಯಕಾರಿ ವಸ್ತುವಾಗಿದೆ. ಇದರ ಉತ್ಪಾದನೆ ಶೂನ್ಯವಾಗಬೇಕು. ಇಲ್ಲದಿದ್ದರೆ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ವಸ್ತುಗಳ ಬಳಕೆ ಬಗ್ಗೆ ಆವಿಷ್ಕಾರವಾಗಬೇಕು. ಈ ನಿಟ್ಟಿನಲ್ಲಿ ಪೇಪರ್ ತಯಾರು ಮಾಡುವ ಕಂಪನಿಗಳು ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಗಣೇಶ್ ಭಡ್ತಿ ಸಲಹೆ ನೀಡಿದರು.

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ವಸ್ತುಗಳ ತಯಾರಿಕೆ ಬಗ್ಗೆ ಸಿಎಫ್‌ಟಿಆರ್‌ಐ ಜೊತೆ ಇಪ್ಟಾ ಪರಿಣಾಮಕಾರಿ ಸಂಶೋಧನೆ ನಡೆಸುತ್ತಿದೆ ಎಂದು ಗಣೇಶ್ ಭಡ್ತಿ ತಿಳಿಸಿದರು.

ಇತ್ತೀಚೆಗೆ ಚಿಪ್ಸ್ ಪ್ಯಾಕೆಟ್‌ನಿಂದ ಹಿಡಿದು ಪ್ರತಿಯೊಂದು ತಿಂಡಿ ತಿನಿಸುಗಳನ್ನು ಪ್ಯಾಕ್ ಮಾಡಲು ಪ್ಲಾಸ್ಟಿಕ್ ಕವರ್‌ಗಳನ್ನು ಬಳಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಕಡೆ ಸ್ವಚ್ಛ ಭಾರತ ಅಭಿಯಾನವನ್ನು ಕೈಗೊಳ್ಳಬೇಕು. ಪ್ಲಾಸ್ಟಿಕ್ ಬಳಕೆಯಿಂದ ಆಗುವ ದುಷ್ಪರಿಣಾಮವನ್ನು ಅರಿತು ಪೇಪರ್ ವಸ್ತುಗಳನ್ನು ಬಳಕೆ ಮಾಡಬೇಕು ಎಂದು ಸಿಕಂದರಾಬಾದ್‌ನಲ್ಲಿರುವ ಐಟಿಸಿ ಲಿಮಿಟೆಡ್‌ನ ಸುಸ್ಥಿರ ಉತ್ಪನ್ನ ಮತ್ತು ಪ್ಯಾಕೇಜಿಂಗ್ ವಿಭಾಗದ ಉಪ ವ್ಯವಸ್ಥಾಪಕ ನಿರ್ದೇಶಕ ಪಿ.ಎನ್.ಶ್ರೀಧರ್ ಸಲಹೆ ನೀಡಿದರು.

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ಕವರ್ಸ್ ಆವಿಷ್ಕಾರ

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಆವಿಷ್ಕಾರಗೊಂಡಿರುವ ಪೇಪರ್ ಕವರ್‌ಗಳನ್ನು ಇಪ್ಟಾ ಸಮ್ಮೇಳನದ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿತ್ತು. ಪ್ಲಾಸ್ಟಿಕ್ ಕವರ್ ಒಳಗೆ ನೀರು ಹಾಕಿದರೆ ಅದು ಸೋರುವುದಿಲ್ಲ ಹಾಗೆಯೇ ಪೇಪರ್ ಕವರ್‌ಗಳನ್ನು ತಯಾರು ಮಾಡಲಾಗಿದೆ. ಈ ಪೇಪರ್ ಕವರ್‌ನಲ್ಲಿ ಕೂಡ ನೀರು ಸೋರುವುದಿಲ್ಲ.



ಇದರಲ್ಲಿ ಹತ್ತು ಕೆ.ಜಿ.ತೂಕ ಒಯ್ಯಬಹುದು. ಪರಿಸರಸ್ನೇಹಿಯಾಗಿರುವ ಈ ಪೇಪರ್ ಕವರ್ ಆರು ತಿಂಗಳ ಕಾಲ ಬಾಳಿಕೆ ಬರುತ್ತದೆ. ಜೊತೆಗೆ ಇದರ ಮರು ಬಳಕೆ ಕೂಡ ಮಾಡಬಹುದಾಗಿದೆ.

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಇರುವ ಪೇಪರ್ ಕವರ್ ಮಾತ್ರವಲ್ಲದೆ ಪೇಪರ್ ತಯಾರಿಕೆಗೆ ಸಂಬಂಧಿಸಿದ ಯಂತ್ರಗಳನ್ನು ಕೂಡ ವಸ್ತು ಪ್ರದರ್ಶನದಲ್ಲಿ ಇಡಲಾಗಿದೆ. ಈ ಮೂಲಕ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಗುಣಮಟ್ಟದ ಪೇಪರ್ ಬಳಕೆ ಕೂಡ ಇದೆ ಎಂಬ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಯಿತು.

ಇದೇ ವೇಳೆ ಮಾತನಾಡಿದ ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣಸಿಂಗ್, ಪ್ಲಾಸ್ಟಿಕ್ ಬಳಕೆ ಇಡೀ ವಿಶ್ವಕ್ಕೆ ದೊಡ್ಡ ಸವಾಲಾಗಿದೆ. ಪ್ಲಾಸ್ಟಿಕ್ ಉತ್ಪಾದನೆಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಪರಿಸರ ಮಾಲಿನ್ಯವಾಗುತ್ತದೆ. ಜೊತೆಗೆ ಜಲಚರಗಳು ಅಷ್ಟೇ ಅಲ್ಲದೆ ಮನುಷ್ಯನ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಪ್ಲಾಸ್ಟಿಕ್ ತ್ಯಾಜ್ಯ ಸಮುದ್ರ ಸೇರಿದಾಗ ಅದನ್ನು ಮೀನುಗಳು ಸೇವಿಸುತ್ತವೆ. ಅದೇ ಮೀನುಗಳನ್ನು ಮನುಷ್ಯ ಸೇವಿಸಿದಾಗ ಅಂತಿಮವಾಗಿ ಮನುಷ್ಯನೇ ಪಾಸ್ಟಿಕ್‌ನಿಂದ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ವಸ್ತುಗಳನ್ನು ಬಳಸಬೇಕು. ಆಹಾರವನ್ನು ಪೇಪರ್‌ನಿಂದ ಪ್ಯಾಕ್ ಮಾಡಬೇಕಿದೆ. ಆದರೆ ಪೇಪರ್‌ನಲ್ಲಿರುವ ಬಣ್ಣ ಹಾಗೂ ರಾಸಾಯನಿಕಗಳು ಆಹಾರ ಸೇರಬಾರದು. ಈ ಹಿನ್ನೆಲೆಯಲ್ಲಿ ಪರಿಸರಸ್ನೇಹಿಯಾದ ಬಾಳಿಕೆ ಬರುವ ಪೇಪರ್ ವಸ್ತುಗಳನ್ನು ತಯಾರು ಮಾಡಲು ಸಂಶೋಧನೆಗಳು ನಡೆಯುವುದು ಅವಶ್ಯಕ ಎಂದು ಡಾ.ಶ್ರೀದೇವಿ ಅನ್ನಪೂರ್ಣಸಿಂಗ್ ಸಲಹೆ ನೀಡಿದರು.

ಇಂದಿನಿಂದ ಎರಡು ದಿನಗಳ ಕಾಲ ಸಮ್ಮೇಳನ ನಡೆಯಲಿದೆ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್ ತಯಾರಿಕೆ ಹಾಗೂ ಬಳಕೆಗೆ ಸಂಬಂಧಿಸಿದಂತೆ ದೇಶ–ವಿದೇಶಗಳಿಂದ ಆಗಮಿಸಿರುವ ತಜ್ಞರು ಪ್ರಬಂಧ ಮಂಡಿಸಲಿದ್ದಾರೆ. ಇಪ್ಟಾ ಪದಾಧಿಕಾರಿಗಳಾದ ಎಂ.ಕೆ.ಗೋಯಲ್, ಪವನ್ ಅಗರವಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನ ಪಾರಂಪರಿಕ ಆರ್ಚ್‌ಗಳ ನವೀಕರಣ; ವರ್ಷವಿಡೀ ದೀಪಾಲಂಕಾರ

ಶೀಘ್ರ ಅಲ್ಪಾವಧಿ ಟೆಂಡರ್ ಕರೆದು ಕಾಮಗಾರಿ ಆರಂಭ: ಮೇಯರ್



ಮೈಸೂರು, ಆ.3(ಆರ್‌ಕೆ)– ಶಿಥಿಲಾವಸ್ಥೆಯಲ್ಲಿರುವ ಮೈಸೂರು ನಗರದ ಪಾರಂಪರಿಕ ಆರ್ಚ್ (ಸ್ವಾಗತ ಕಮಾನು)ಗಳನ್ನು ದುರಸ್ತಿಗೊಳಿಸಿ ಸಂರಕ್ಷಿಸುವುದಲ್ಲದೆ, ವರ್ಷದ 365 ದಿನವೂ ವಿದ್ಯುದ್ದೀಪಾಲಂಕಾರಗೊಳಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಸಿಂಧು, ಪಾರಂಪರಿಕ ತಜ್ಞ ಪ್ರೊ ಎನ್.ಎಸ್.ರಂಗರಾಜು, ನಮ್ಮ ಮೈಸೂರು ಫೌಂಡೇಷನ್ ಸಂಚಾಲಕ ದಶರಥರೊಂದಿಗೆ ಮೈಸೂರು ನಗರದಾದ್ಯಂತ ಇರುವ ಪಾರಂಪರಿಕ ಕಮಾನುಗಳು, ಅಶೋಕ ರಸ್ತೆಯ ಸರ್ಕಾರಿ ಗುಂಚಿ ಶಾಲೆ ಬಳಿ ಇರುವ ಕಾವಲುಗಾರರ ಗೋಪುರ (ಗುಂಚಿ ಗೋಪುರ)ಗಳು, ಮೆಟ್ರೋಪೋಲ್ ಸರ್ಕಲ್ ಸಮೀಪ ಹುಣಸೂರು ರಸ್ತೆಯ ಮಹಾರಾಣಿ ವಿಜ್ಞಾನ ಕಾಲೇಜಿನ ಗೋಪುರ, ಜಿಲ್ಲಾಧಿಕಾರಿ ಕಚೇರಿ ಬಳಿಯ ಸ್ವಾಗತ ಕಮಾನು, ಬಿ.ಎನ್.ರಸ್ತೆಯ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣದೆದುರು, ಸರ್ಕಾರಿ ಅತಿಥಿ ಗೃಹದ ಉತ್ತರ ದ್ವಾರ ಸೇರಿದಂತೆ ನಗರದ ವಿವಿಧೆಡೆ ಇರುವ ಪಾರಂಪರಿಕ ಕಮಾನುಗಳು, ಗೋಪುರಗಳನ್ನು ನವೀಕರಿಸಲು ಶೀಘ್ರ ಅಲ್ಪಾವಧಿ ಟೆಂಡರ್ ಕರೆಯುತ್ತೇವೆ ಎಂದು ತಿಳಿಸಿದರು.

ಪಾಲಿಕೆ ಅನುದಾನದಲ್ಲೇ ಕಾಮಗಾರಿ ನಡೆಸಿ, ನಂತರ ಅವುಗಳಿಗೆ ವರ್ಷವಿಡೀ ವಿದ್ಯುದ್ದೀಪಾಲಂಕಾರ ಮಾಡಲಾಗುವುದು. ಪಾರಂಪರಿಕ ಇಲಾಖೆ ಹಾಗೂ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರ ಮಾರ್ಗದರ್ಶನ ಪಡೆದು ಯಥಾವತ್ ರಿಪೇರಿ ಮಾಡುವ ಮೂಲಕ ಸಂರಕ್ಷಿಸುತ್ತೇವೆ ಎಂದು ಅವರು ತಿಳಿಸಿದರು.

ಮೈಸೂರು ಪರಂಪರೆ, ಸಂಸ್ಕೃತಿಗೆ ಹೆಸರಾಗಿರುವುದರಿಂದ ದೇಶ–ವಿದೇಶಗಳಿಂದ ಆಗಮಿಸುವ ಪ್ರವಾಸಿಗರನ್ನು ಸ್ವಾಗತಿಸುವ ಕಮಾನುಗಳನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಿ ದಸರಾ ಮಹೋತ್ಸವದೊಳಗಾಗಿ ವಿದ್ಯುದ್ದೀಪಾಲಂಕಾರಗೊಳಿಸುತ್ತೇವೆ ಎಂದು ಶಿವಕುಮಾರ್ ತಿಳಿಸಿದರು.

ಅಂಗಾಂಗ ದಾನದಿಂದ ಮತ್ತೊಬ್ಬರ ಜೀವ ಉಳಿಸಬಹುದು

ಅಪೋಲೋ ಆಸ್ಪತ್ರೆ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ಡಾ. ರಾಜಕುಮಾರ್ ಪಿ.ವಾಧ್ವಾ ಅಭಿಮತ



ಮೈಸೂರು, ಆ.3(ಆರ್‌ಕೆ)–ಅಂಗಾಂಗಗಳನ್ನು ದಾನ ಮಾಡುವುದರಿಂದ ಮತ್ತೊಬ್ಬರ ಜೀವ ಉಳಿಸಬಹುದಾಗಿದೆ ಎಂದು ಅಪೋಲೋ ಬಿಜಿಎಸ್ ಆಸ್ಪತ್ರೆ ಗ್ಯಾಸ್ಟ್ರೊ ಎಂಟರಾಲಜಿ ವಿಭಾಗದ ಮುಖ್ಯಸ್ಥ ಡಾ. ರಾಜಕುಮಾರ್ ಪಿ.ವಾಧ್ವಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಅಪೋಲೋ ಆಸ್ಪತ್ರೆ ವತಿಯಿಂದ ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಅಂಗ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಸ್ತುತ ದೇಶದಲ್ಲಿ ಒಂದು ಲಕ್ಷ ಮಂದಿ ರೋಗಿಗಳಿಗೆ ಅಂಗಾಂಗಗಳ ಅಗತ್ಯವಿದೆಯಲ್ಲದೆ, ಅಂಗದಾನಿಗಳ ನಿರೀಕ್ಷೆಯಲ್ಲೇ ಪ್ರತೀ ದಿನ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಂದಿ ಸಾವನ್ನಪ್ಪುತ್ತಿದ್ದಾರೆ ಎಂದರು.

ಹಿಂದೆಂದಿಗಿಂತಲೂ ಈಗ ಅಂಗಾಂಗಗಳಿಗೆ ಅತೀ ಹೆಚ್ಚು ಬೇಡಿಕೆ ಇದೆ. ಅತ್ಯಾಧುನಿಕವಾಗಿ ವೈದ್ಯಕೀಯ ವಿಜ್ಞಾನ ಕ್ಷೇತ್ರ ಅಭಿವೃದ್ಧಿಗೊಂಡಿರುವ ಪ್ರಸ್ತುತ ಕಾಲಮಾನದಲ್ಲಿ ಅಂಗಾಂಗ ಕಸಿ ಮಾಡುವುದು ಶ್ರೇಷ್ಠ ಸಾಧನೆಯಾಗಿದೆ. ಆದರೆ ಅಂಗದಾನ ಮಾಡುವವರ ಉದಾರತೆ ಮೇಲೆ ಇತರರ ಅಮೂಲ್ಯ ಪ್ರಾಣ ಅವಲಂಬಿತವಾಗಿರುತ್ತದೆ ಎಂದು ನುಡಿದರು.

ಸಿಎಸ್‌ಐ ಬಿಷಪ್ ರೆವರೆಂಡ್ ಹೇಮಚಂದ್ರ ಕುಮಾರ್ ಮತ್ತು ಅಲ್ ಅನ್ಸರ್ ಆಸ್ಪತ್ರೆ ಮೆಡಿಕಲ್ ಡೈರೆಕ್ಟರ್ ಡಾ. ಈಫ್ತಿಕರ್ ಅಹಮದ್ ನಜೀರ್ ಅವರು ಕಾರ್ಯಕ್ರಮ ಉದ್ಘಾಟಿಸಿ ಅಂಗಾಂಗಗಳ ದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ರೋಟರಿ ಮೈಸೂರ್ ಅಧ್ಯಕ್ಷ ಅರುಣ್ ಆರ್. ಬೆಳವಾಡಿ, ಸೆರಮೆ ಹೆಡ್ ಅಬೋಟ್ ಮುಖ್ಯಸ್ಥ ಗೆಷೆತಶಿ ತ್ಸೆರಿಂಗ್, ನೆಫ್ರಾಲಜಿಸ್ಟ್ ಡಾ. ಶ್ರೀನಿವಾಸ ನಲ್ಲೂರ್, ಅಪೋಲೋ ಆಸ್ಪತ್ರೆ ನಿರ್ದೇಶಕ ಎನ್.ಜಿ.ಭರತೇಶ್ ರೆಡ್ಡಿ, ಡಾ. ಸುರೇಶ್ ರಾಘವಯ್ಯ, ದಿನೇಶ್ ಗುರೂಜಿ, ಡಾ. ಮಹದೇವ ಪ್ರಸಾದ್, ಡಾ. ವಿ.ಯಶವಂತ ಕುಮಾರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ 83ನೇ ಪುಣ್ಯಸ್ಮರಣೆ

ಮೈಸೂರು,ಆ.3(ಎಂಟಿವೈ)– ಮೈಸೂರು–ನಂಜನಗೂಡು ಮುಖ್ಯರಸ್ತೆಯಲ್ಲಿರುವ ಮನುವನದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗ ವಿಕಾಸ ವೇದಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 83ನೇ ಪುಣ್ಯಸ್ಮರಣೆಯನ್ನು ಗೀತನಮನದೊಂದಿಗೆ ಆಚರಿಸಲಾಯಿತು.



ಗಾಯಕ ದೀಪಕ್ ತಂಡದಿಂದ ನಾಲ್ವಡಿ ಗೀತನಮನ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಂತೆ ರಚಿಸಲಾಗಿರುವ ಗೀತೆಗಳ ಗಾಯನದ ಮೂಲಕ ಗೌರವ ಸಮರ್ಪಿಸಲಾಯಿತು. ಅಲ್ಲದೆ, ನಾಲ್ವಡಿ ಅವರ ಸಮಾಧಿಗೆ ಪೂಜೆ ಸಲ್ಲಿಸಲಾಯಿತು.

ಇದೇ ವೇಳೆ ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಮೈಸೂರು ಸಂಸ್ಥಾನವನ್ನಾಳಿದ ಯದುವಂಶದ ಅರಸರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ. ಹಲವು ಪ್ರಥಮಗಳನ್ನು ನೀಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಕೊಡುಗೆ, ಆಡಳಿತದ ಬಗ್ಗೆ ಜನರಿಗೆ ತಿಳಿಸುವ ನಿಟ್ಟಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಮಾಧಿ ಸ್ಥಳವಿರುವ ಮನುವನವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಹೆಚ್.ಎಲ್.ಯಮುನಾ, ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮುಖಂಡರಾದ ಸೋಸಲೆ ಸಿದ್ದರಾಜು, ಜಯಶಂಕರ್ ಮೇಸ್ತ್ರಿ, ರಘುರಾಜೇ ಅರಸು, ಬಿ.ವಿ.ಎಸ್.ಪ್ರತಾಪ್, ಜಾಕಿರ್ ಹುಸೇನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡ ಕ್ರಿಯಾ ಸಮಿತಿಯ ಸರ್ವ ಸದಸ್ಯರ ಸಭೆ

ಮೈಸೂರು, ಆ. 3– ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆ ಆವರಣದಲ್ಲಿ ಆ. 5 ರಂದು ಶನಿವಾರ ಬೆಳಿಗ್ಗೆ 11.30ಕ್ಕೆ ಕನ್ನಡ ಕ್ರಿಯಾಸಮಿತಿಯ ಸರ್ವಸದಸ್ಯರ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಪ್ರಸಕ್ತ ಕನ್ನಡ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಮುಂದಿನ ಕ್ರಮಗಳ ಬಗ್ಗೆ ನಿರ್ಧರಿಸಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕೆಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ. ಸುದರ್ಶನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಚ್ಛ ಸರ್ವೇಕ್ಷಣ್ ಅಭಿಯಾನದಲ್ಲಿ ಪಾಲ್ಗೊಳ್ಳಲು ಸಾರ್ವಜನಿಕರಿಗೆ ಕರೆ

ಮೈಸೂರು, ಆ.3(ಜಿಎ)–ಸಾರ್ವಜನಿಕರು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಮೈಸೂರಿನ ಬಗ್ಗೆ ಪ್ರತಿಕ್ರಿಯೆ ನೀಡುವ ಮೂಲಕ ಸ್ವಚ್ಛ ಸರ್ವೇಕ್ಷಣ್ ಅಭಿಯಾನದಲ್ಲಿ ಪಾಲ್ಗೊಂಡು ಮೈಸೂರಿಗೆ ಮತ್ತೊಮ್ಮೆ ಸ್ವಚ್ಛನಗರಿ ಪಟ್ಟ ಪಡೆಯಲು ಮೈಸೂರಿಗರು ಸಾಥ್ ನೀಡಬಹುದಾಗಿದೆ.

ಮೈಸೂರು ನಗರವು ಈ ಹಿಂದೆ ಎರಡು ಬಾರಿ ದೇಶದಲ್ಲಿ ಸ್ವಚ್ಛನಗರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ತದನಂತರ ಇಂದೋರ್ ಆ ಪಟ್ಟವನ್ನು ಗಳಿಸಿಕೊಂಡಿದ್ದು, ಮತ್ತೊಮ್ಮೆ ನಗರವನ್ನು ಸ್ವಚ್ಛನಗರಿ ಎಂಬುದನ್ನು ನಿರೂಪಿಸಲು ಸಾರ್ವಜನಿಕರು ಪಾಲಿಕೆ ಜೊತೆ ಕೈ ಜೋಡಿಸಬಹುದಾಗಿದೆ.

ಆಗಸ್ಟ್ 20ರವರೆಗೂ ಸ್ವಚ್ಛ ಸರ್ವೇಕ್ಷಣ್ ಅಭಿಯಾನ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಪಾಲಿಕೆ ಅಧಿಕಾರಿಗಳು ಮತ್ತು ಪೌರಕಾರ್ಮಿಕರು ಅಲರ್ಟ್ ಆಗಿದ್ದು, ಈಗಾಗಲೇ ಸಾರ್ವಜನಿಕ ಸ್ಥಳದಲ್ಲಿ ಸ್ವಚ್ಛ ಸರ್ವೇಕ್ಷಣ್ ಅಭಿಯಾನ ಮತ್ತು ಸ್ವಚ್ಛತೆಯ ಬಗ್ಗೆ ಪಾರ್ಕ್‌ಗಳಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಿ ಅರಿವು ಮೂಡಿಸುತ್ತಿದ್ದಾರೆ. ಈ ಸಂಬಂಧ ನಗರದ ಪ್ರಮುಖ ಸ್ಥಳಗಳು ಮತ್ತು ನಿತ್ಯ ತಮ್ಮ ಮನೆಗೆ ಭೇಟಿ ನೀಡಿ ಕಸ ಸಂಗ್ರಹ ಮಾಡುವ ಪಾಲಿಕೆ ವಾಹನ ಮೇಲೆ ಕ್ಯೂ ಆರ್ ಕೋಡ್ ಅಳವಡಿಸಿದ್ದಾರೆ.



> ಈಗಾಗಲೇ ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ಬಗ್ಗೆ ಪಾರ್ಕ್, ಶಾಲಾ ಕಾಲೇಜು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅರಿವು ಮೂಡಿಸಲಾಗಿದ್ದು, ಕಸ ಸಂಗ್ರಹ ಮಾಡುವ ವಾಹನಗಳ ಮೇಲೆ ಕ್ಯೂ ಆರ್ ಕೋಡ್ ಅಳವಡಿಕೆ ಮಾಡಲಾಗಿದೆ. ಆ.20ರವರೆಗೂ ಅಭಿಯಾನ ನಡೆಯಲಿದ್ದು, ಜನರ ಪ್ರತಿಕ್ರಿಯೆ ಬಹಳ ಮುಖ್ಯವಾಗಿದೆ.
> -ಡಾ.ಡಿ.ಜಿ.ನಾಗರಾಜ್, ಆರೋಗ್ಯಾಧಿಕಾರಿ, ನಗರಪಾಲಿಕೆ

ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದ ತಕ್ಷಣ https://sbmurban.org/feedback ಎಂಬ ಸ್ವಚ್ಛ ಭಾರತ್ ಮಿಷನ್ ಅರ್ಬನ್ 2.0 – ನಾಗರಿಕರ ಪ್ರತಿಕ್ರಿಯೆಯ ವೆಬ್‌ಸೈಟ್ ತೆರೆದುಕೊಳ್ಳುತ್ತದೆ. ಇದರಲ್ಲಿ ನಿಮ್ಮ ಮೊಬೈಲ್ ನಂಬರ್ ನಮೂದಿಸಿದರೆ, ನಿಮ್ಮ ನಂಬರ್‌ಗೆ ಒಂದು ಒಟಿಪಿ ಬರುತ್ತದೆ. ನಂತರ ಮತ್ತೊಂದು ಪೇಜ್ ತೆರೆದುಕೊಳ್ಳುತ್ತದೆ. ಅದರಲ್ಲಿ ತಮ್ಮ ರಾಜ್ಯ, ಜಿಲ್ಲೆ ನಗರ ಮತ್ತು ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು.

ನಂತರ 9 ಪ್ರಶ್ನೆಗಳು ತಮ್ಮ ಮುಂದೆ ತೆರೆದುಕೊಳ್ಳುತ್ತದೆ. ಅದರಂತೆ ನಗರದ ಸ್ವಚ್ಛತೆಯ ಕುರಿತು ನಿಮ್ಮ ಮನೆಯಿಂದ ದಿನಪ್ರತಿಯೊಂದು ತ್ಯಾಜ್ಯ ಸಂಗ್ರಹಿಸಲ್ಪಡುತ್ತದೆಯೇ? ನೀವು ನಿಮ್ಮ ಮನೆಯಲ್ಲಿ ಕಸ ಹೊತ್ತು (ತಿಳಿಮಣೆ ಮತ್ತು ಒಣಗಿಸಲು) ಬೇರೆಬೇರೆಯಾಗಿ ವಿಭಜನೆ ಮಾಡುತ್ತೀರಾ? ನಿಮ್ಮ ಸಮೀಪದಲ್ಲಿರುವ ನದಿಗಳು ಅಥವಾ ನಲ್ಲಿಗಳು ದೃಶ್ಯದಲ್ಲಿ ಶುಚಿಯಾಗಿವೆಯೇ?, ನೀವು ನಗರದಲ್ಲಿರುವ RRR (ಕಡಿಮೆ ಮಾಡು, ಮತ್ತೆ ಬಳಸು, ಪುನರ್ಚಕ್ರೀಕರಣ) ಕೇಂದ್ರದ ಬಗ್ಗೆ ತಿಳಿದಿದ್ದೀರಾ?, ನೀವು ನಗರದಲ್ಲಿರುವ ಸಾರ್ವಜನಿಕ ಶೌಚಾಲಯ (CT/PT) ಅನುಭವಿಸಿದ್ದೀರಾ?, ನಗರದಲ್ಲಿರುವ ಸಾರ್ವಜನಿಕ ಶೌಚಾಲಯಗಳು ಶುಚಿಯಾಗಿವೆಯೇ? ಡಿಜಿಟಲ್ ನಕ್ಷೆಗಳಲ್ಲಿ ಹತ್ತಿರದ ಸಾರ್ವಜನಿಕ ಶೌಚಾಲಯ (CT/PT) ಹೇಗೆ ಹುಡುಕಲು ಸಾಧ್ಯವಿದೆಯೆಂದು ನೀವು ತಿಳಿದಿದ್ದೀರಾ?, ಎಂಬ ಏಳು ಪ್ರಶ್ನೆಗಳಿಗೆ ಹೌದು ಅಥವಾ ಇಲ್ಲ ಎಂದು ಪ್ರತಿಕ್ರಿಯೆ ನೀಡಬಹುದಾಗಿದೆ.

ನಿಮ್ಮ ಸಮೂಹದ ಶುಚಿತ್ವದ ಮೊತ್ತವನ್ನು ನೀವು ಹೇಗೆ ಮೌಲ್ಯಾಂಕಿಸುತ್ತೀರಾ? ನಿಮ್ಮ ನಗರದ ಒಟ್ಟು ಶುಚಿತ್ವವನ್ನು ನೀವು ಹೇಗೆ ಮೌಲ್ಯಾಂಕಿಸುತ್ತೀರಾ? ಎಂಬ ಪ್ರಶ್ನೆಗಳಿಗೆ ತುಂಬ ತೃಪ್ತಿಯಾಯಿತು, ತೃಪ್ತಿಯಾಯಿತೆ, ತಟಸ್ಥ, ಅತೃಪ್ತಿ ಮತ್ತು ತುಂಬಾ ಅತೃಪ್ತಿ ಎಂಬ ಹೌದು ಆಯ್ಕೆಗಳು ಇರುತ್ತವೆ. ಈ ಎಲ್ಲ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದನಂತರ ತಮ್ಮ ಮೊಬೈಲ್ ನಂಬರ್‌ಗೆ ಬಂದಿರುವ ಓಟಿಪಿ ನಮೂದಿಸಿ ನಂತರ ತಮ್ಮ ಪ್ರತಿಕ್ರಿಯೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು.

ಬೆಳ್ಳಿ ಬೆಳಕು
ಮೈಸೂರು ಮಿತ್ರ
● ಸತ್ಯಮೂರ್ತಿ ತೋಳಹುಣಸೆ
ಸಿನಿಮಾ ಪುರವಣಿ



ಸುದೀಪ್ 'ಕಿಚ್ಚ 46' ಕಿಕ್‌ಸ್ಟಾರ್ಟ್

ಇತ್ತೀಚೆಗೆ ಸ್ಟಾರ್ ಚಿತ್ರಗಳು ಹೆಚ್ಚಾಗಿ ನಿರ್ಮಾಣವಾಗುತ್ತಿಲ್ಲ ಎಂಬ ಅಪವಾದವಿತ್ತು. ಅದಕ್ಕುತ್ತರವೆಂಬಂತೆ ಕಿಚ್ಚ ಸುದೀಪ್ ಅಭಿನಯದ 46ನೇ ಚಿತ್ರಕ್ಕೆ ಚಾಲನೆ ದೊರೆತಿದೆ. ಕಳೆದ ವಾರ ತಿರುಪತಿ ವೆಂಕಟೇಶ್ವರನ ಆಶೀರ್ವಾದ ಪಡೆದು ಸುದೀಪ್ ತಮ್ಮ ಮುಂದಿನ ಪ್ರಾಜೆಕ್ಟ್ 'ಕಿಚ್ಚ 46' ಸಿನಿಮಾದ ಚಿತ್ರೀಕರಣ ಪ್ರಾರಂಭಿಸಿದ್ದಾರೆ. ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಸೇರಿದಂತೆ ಪಂಚ ಭಾಷೆಗಳಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಲಿರುವ ಈ ಪ್ಯಾನ್ ಇಂಡಿಯಾ ಚಿತ್ರದ ಮೂಲಕ ವಿಜಯ್ ಕಾರ್ತಿಕೇಯ ಅವರು ಮೊದಲ ಬಾರಿಗೆ ನಿರ್ದೇಶಕರಾಗಿ ಕನ್ನಡಕ್ಕೆ ಕಾಲಿಡುತ್ತಿದ್ದಾರೆ. ಕಲೈಪುಲಿ ಥಾನು ಅವರು ಈ ಚಿತ್ರವನ್ನು ಬಹುಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದ್ದಾರೆ.

ಬಹುತೇಕ ಚೆನ್ನೈ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಯುವ ಆಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಕಿಚ್ಚ 46' ಚಿತ್ರದ ಮೊದಲ ಹಂತದಲ್ಲಿ 65 ದಿನಗಳ ನಿರಂತರ ಚಿತ್ರೀಕರಣ ನಡೆಸುವ ಯೋಜನೆಯಿದೆ. ಕಳೆದ ತಿಂಗಳು ಬಿಡುಗಡೆಯಾದ 'ಕಿಚ್ಚ 46' ಚಿತ್ರದ ಟೀಸರ್‌ನಲ್ಲಿ, 'ಡೆಮನ್ ವಾರ್ ಬಿಗಿನ್ಸ್' ಅಡಿಬರಹವಿದ್ದು, ಇದು ಚಿತ್ರದ ಕಂಟೆಂಟ್ ಕುರಿತಂತೆ ಅಭಿಮಾನಿಗಳಲ್ಲಿ ದೊಡ್ಡಮಟ್ಟದ ನಿರೀಕ್ಷೆಯನ್ನಂತೂ ಹುಟ್ಟುಹಾಕಿದೆ.

ನಾನು ಯುದ್ಧಕ್ಕೆ ಇಳಿದ ಮೇಲೆ ದಯೆ, ಕ್ಷಮೆ, ಸಂಧಾನ ಇದು ಯಾವುದೂ ಇರೋದಿಲ್ಲ. 'ನಾನು ಮನುಷ್ಯ ಅಲ್ಲ, ರಾಕ್ಷಸ' ಎಂದು ಟೀಸರ್‌ನ ಕೊನೆಯಲ್ಲಿ ನಾಯಕ ಸುದೀಪ್ ಹೇಳುವ ಡೈಲಾಗ್ ಅಭಿಮಾನಿಗಳ ಸ್ಲೋಗನ್ ಆಗಿಬಿಟ್ಟಿದೆ.

ವಿ ಕ್ರಿಯೇಷನ್ಸ್ ಮತ್ತು ಸುದೀಪ್ ನೇತೃತ್ವದ ಕಿಚ್ಚ ಕ್ರಿಯೇಷನ್ಸ್ ಈ ಚಿತ್ರವನ್ನು ಬಹುಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿದೆ. ಕಲಾನಿರ್ದೇಶಕರಾಗಿ ಶಿವಕುಮಾರ್ ಮತ್ತು ಸಂಗೀತ ಸಂಯೋಜಕರಾಗಿ ಅಜನೀಶ್ ಬಿ. ಲೋಕನಾಥ್ ಚಿತ್ರ ತಂಡದಲ್ಲಿದ್ದಾರೆ. ಶೇಖರ್‌ಚಂದ್ರ ಛಾಯಾಗ್ರಹಣ ಚಿತ್ರಕ್ಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಯೋಪಿಕ್







ಲೀಡರ್ ಸಿದ್ದರಾಮಯ್ಯ ಆಗಲಿದ್ದಾರೆ ವಿಜಯ್ ಸೇತುಪತಿ

ಕನ್ನಡದಲ್ಲಿ ಬೆರಳೆಣಿಕೆಯಷ್ಟು ಕಲಾವಿದರ ಜೀವನಾಧಾರಿತ ಚಿತ್ರಗಳು ಮೂಡಿಬಂದಿವೆ. ಇದನ್ನು ಬಿಟ್ಟರೆ ರಾಜಕಾರಣಿಗಳ ಜೀವನ ಕುರಿತಾದ ಸಿನಿಮಾ ನಿರ್ಮಾಣವಾಗಿರುವುದು ತುಂಬಾ ಅಪರೂಪ. ಇತ್ತೀಚಿನ ದಿನಗಳಲ್ಲಿ ರಾಜಕಾರಣಿಗಳ ಬಯೋಪಿಕ್ ಬಗ್ಗೆ ಸಿನಿರಸಿಕರು ಆಸಕ್ತಿ ತೋರಿಸುತ್ತಿದ್ದಾರೆ. 2019ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜೀವನಾಧಾರಿತ 'ಪಿಎಂ ನರೇಂದ್ರಮೋದಿ' ತೆರೆಗೆ ಬಂದಿತ್ತು. ಅಲ್ಲದೇ 2021ರಲ್ಲಿ ದಿ.ಜಯಲಲಿತಾರ ಬಯೋಪಿಕ್ ಆಗಿ 'ತಲೈವಿ' ನಿರ್ಮಾಣವಾಗಿತ್ತು. ಇದೀಗ ಸತ್ಯರತ್ನಂ ಎಂಬ ನಿರ್ದೇಶಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೀವನಾಧಾರಿತ 'ಲೀಡರ್ ರಾಮಯ್ಯ' ಎಂಬ ಚಿತ್ರವನ್ನು ತೆರೆಗೆ ತರಲು ಹೊರಟಿದ್ದಾರೆ. ಈಗಾಗಲೇ ಚಿತ್ರಕಥೆ ಸಿದ್ದವಾಗಿದ್ದು, ಎರಡು ಭಾಗಗಳಲ್ಲಿ ತೆರೆಗೆ ಬರಲಿದೆ.

ಕಳೆದ ಮಾರ್ಚ್‌ನಲ್ಲಿಯೇ ಚಿತ್ರದ ಪೋಸ್ಟರ್ ಬಿಡುಗಡೆಯಾಗಿತ್ತು. ಎಂ.ಎಸ್. ಕ್ರಿಯೇಟಿವ್ ವರ್ಕ್ಸ್ ಬ್ಯಾನರ್ ಅಡಿಯಲ್ಲಿ ಹಯತ್ ಪೀರಾ ಮತ್ತು ಚನ್ನಪ್ಪ ಹಾಲಳ್ಳಿ ಅವರು ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಸೇರಿ 5 ಭಾಷೆಯಲ್ಲಿ ನಿರ್ಮಾಣವಾಗಲಿರುವ ಈ ಚಿತ್ರದಲ್ಲಿ ಸಿದ್ದರಾಮಯ್ಯ ಅವರ ಪಾತ್ರವನ್ನು ತಮಿಳಿನ ಹೆಸರಾಂತ ನಟ ವಿಜಯ್ ಸೇತುಪತಿ ನಿರ್ವಹಿಸಲಿದ್ದಾರಂತೆ.

ಚಿತ್ರದ ಮೊದಲ ಭಾಗದಲ್ಲಿ ಸಿದ್ದರಾಮಯ್ಯ ಅವರ ಬಾಲ್ಯದ ದಿನಗಳು, ಕಾಲೇಜು ಹಾಗೂ ವಕೀಲರಾಗಿದ್ದ ದಿನಗಳ ಚಿತ್ರಣವಿರುತ್ತದೆ. ಬಾಲ್ಯ ಹಾಗೂ ಕಾಲೇಜು ದಿನಗಳ ಪಾತ್ರವನ್ನು ಬೇರೆಬೇರೆ ಕಲಾವಿದರು ನಿರ್ವಹಿಸಿದರೆ, ಲಾಯರ್ ಹಾಗೂ ರಾಜಕಾರಣಿಯ ಗೆಟಪ್‌ನಲ್ಲಿ ವಿಜಯ್ ಸೇತುಪತಿ ಕಾಣಿಸಿಕೊಳ್ಳಲಿದ್ದಾರೆ. ಸದ್ಯದಲ್ಲೇ ಚಿತ್ರೀಕರಣ ಪ್ರಾರಂಭಿಸಲು ಸತ್ಯರತ್ನ ಸಿದ್ಧತೆ ಮಾಡಿಕೊಂಡಿದ್ದಾರೆ. ಈಗಾಗಲೇ ಚಿತ್ರತಂಡ ವಿಜಯ್ ಸೇತುಪತಿ ಅವರನ್ನು ಸಂಪರ್ಕಿಸಿದ್ದು, ಅಭಿನಯಿಸಲು ಆಸಕ್ತಿ ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ. ಈ ಚಿತ್ರದಲ್ಲಿ ಸಿಎಂ ಸಿದ್ದರಾಮಯ್ಯ ಸಹ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ.

ಮೊದಲ ಭಾಗದಲ್ಲಿ ಸಿದ್ಧರಾಮಯ್ಯ ಅವರ ಬಾಲ್ಯದ ದಿನಗಳು ಮತ್ತು ಪ್ರೌಢಾವಸ್ಥೆಯ ದಿನಗಳನ್ನು ತೋರಿಸಲಾಗುತ್ತದೆ. ಸಿದ್ಧರಾಮಯ್ಯ ಅವರ ಕಿರಿಯ ವಯಸ್ಸಿನ ಪಾತ್ರಕ್ಕಾಗಿ ಯುವನಟನೊಬ್ಬನ ಹುಡುಕಾಟ ನಡೆದಿದೆ. ಚಿತ್ರದಲ್ಲಿ ಇಬ್ಬರು ನಾಯಕಿಯರ ಪಾತ್ರವಿದ್ದು, ನಾಯಕಿ ಹಾಗೂ ಉಳಿದ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲದೆ ಈ ಚಿತ್ರದ ಅತಿಥಿ ಪಾತ್ರಗಳಲ್ಲಿ ಅಭಿನಯಿಸಲು ಕನ್ನಡದ ಕೆಲವು ಸ್ಟಾರ್‌ಗಳನ್ನು ಸಹ ಸಂಪರ್ಕಿಸಿ ಚರ್ಚೆ ನಡೆಸಿದ್ದಾರೆ. ಇನ್ನು ಲೀಡರ್ ರಾಮಯ್ಯ ಚಿತ್ರಕ್ಕೆ ಶಶಾಂಕ್ ಶೇಷಗಿರಿ ಅವರ ಸಂಗೀತ ನಿರ್ದೇಶನವಿದ್ದು, ಉದಯ್ ಲೀಲಾ ಚಿತ್ರದ ಕ್ಯಾಮೆರಾ ವರ್ಕ್ ನಿಭಾಯಿಸಲಿದ್ದಾರೆ.



ಉಸಿರಾದ ಪ್ರೀತಿಗೆ ಜಾತಿಯ ಹಂಗಿಲ್ಲ


ಬಿಗ್‌ಬಾಸ್ ರಾಜೀವ್ ನಟಿಸಿರುವ 'ಉಸಿರೇ ಉಸಿರೇ' ಚಿತ್ರದಲ್ಲಿ ಕಿಚ್ಚ ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಶೀರ್ಷಿಕೆ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ವಿವೇಕ್ ಚಕ್ರವರ್ತಿ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಹಾಡನ್ನು ಗುರುಕಿರಣ್, ಭಾ.ಮ.ಹರೀಶ್ ಹಾಗೂ ವಿಷ್ಣುಭಟ್ ಬಿಡುಗಡೆಗೊಳಿಸಿದರು.

ನಾಯಕ ರಾಜೀವ್ ಮಾತನಾಡುತ್ತ ಪ್ರೀತಿಗೆ ಯಾವುದೇ ಜಾತಿಯಿಲ್ಲವೆಂದು ಹೇಳುವ ನವಿರಾದ ಪ್ರೇಮಕಥೆಯಿದು. ಇತ್ತೀಚೆಗೆ ಬಳ್ಳಾರಿಯ ರೇಣುಕಾಂಬ ಜಾತ್ರೆ ಹಾಗೂ ಮಂತ್ರಾಲಯದ ರಾಯರ ಸನ್ನಿಧಿಯಲ್ಲಿ ಚಿತ್ರದ ಟೀಸರ್ ಬಿಡುಗಡೆ ಮಾಡಿದ್ದೆವು. ಸಾಮಾನ್ಯವಾಗಿ ಆರಂಭದಲ್ಲಿ ಡ್ಯುಯೆಟ್ ಸಾಂಗ್‌ನ್ನು ಬಿಡುಗಡೆ ಮಾಡುತ್ತಾರೆ. ಆದರೆ ನಾವು ಪ್ಯಾಥೋ ಸಾಂಗ್ ರಿಲೀಸ್ ಮಾಡಿದ್ದೇವೆ. ಇದಕ್ಕೆ ಕಾರಣ ಈ ಹಾಡಿನಲ್ಲಿ ಇಡೀ ಚಿತ್ರದ ಕಥೆಯಿದೆ. ಹಾಡನ್ನು ಗಮನವಿಟ್ಟು ಕೇಳಿದಾಗ ನಮ್ಮ ಚಿತ್ರದ ಬಹುತೇಕ ಕಥೆ ಅರ್ಥವಾಗುತ್ತದೆ ಎಂದರು.

ನಿರ್ಮಾಪಕ ಪ್ರದೀಪ್ ಯಾದವ್ ಮಾತನಾಡುತ್ತಾ, ನಾನೀ ಚಿತ್ರ ನಿರ್ಮಾಣಕ್ಕೆ ಮುಂದಾಗಲು ಸುದೀಪ್ ಅವರೇ ಸ್ಫೂರ್ತಿ. ಅವರು ನನ್ನ ಬೆನ್ನೆಲುಬಾಗಿ ನಿಂತರು ಹಾಗೂ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಸುದೀಪ್ ಅವರ ಸನ್ನಿವೇಶಗಳು 18 ನಿಮಿಷಗಳವರೆಗೆ ಬರುತ್ತವೆ ಎಂದರು.

ನಿರ್ದೇಶಕ ಸಿ.ಎಂ.ವಿಜಯ್ ಮಾತನಾಡುತ್ತಾ, ನಮ್ಮ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಸೆಪ್ಟೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಸಿದ್ದತೆ ನಡೆಯುತ್ತಿದೆ. ನಮ್ಮ ಚಿತ್ರದಲ್ಲಿ ರಾಜೀವ್ ಜೊತೆ ನಾಯಕಿಯಾಗಿ ಶ್ರೀಜಿತ ಕಾಣಿಸಿಕೊಂಡಿದ್ದಾರೆ. ತೆಲುಗಿನ ಖ್ಯಾತ ನಟರಾದ ಡಾ॥ಆಲಿ, ಪದ್ಮಭೂಷಣ ಪ್ರಶಸ್ತಿ ವಿಜೇತರು ಹಾಗೂ ಅತೀಹೆಚ್ಚು ಸಿನಿಮಾಗಳಲ್ಲಿ ನಟಿಸಿ ಗಿನ್ನಿಸ್ ದಾಖಲೆ ಮಾಡಿರುವ ಬ್ರಹ್ಮಾನಂದಂ ಮೊದಲ ಬಾರಿಗೆ ನಮ್ಮ ಚಿತ್ರದಲ್ಲಿ ಒಟ್ಟಾಗಿ ನಟಿಸಿದ್ದಾರೆ. ದೇವರಾಜ್, ಸಾಧು ಕೋಕಿಲ, ಮಂಜು ಪಾವಗಡ, ತಾರಾ, ಸುಚೇಂದ್ರಪ್ರಸಾದ್, ರಾಜೇಶ್ ನಟರಂಗ, ಶೈನಿಂಗ್ ಸೀತಾರಾಮು, ಜಗಪ್ಪ, ಸುಶ್ಮಿತಾ ಸೇರಿದಂತೆ ಅನೇಕ ಕಲಾವಿದರು ನಮ್ಮ ಚಿತ್ರದಲ್ಲಿದ್ದಾರೆ. ಈಗ ಮೊದಲ ಹಾಡನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಹಾಡುಗಳು ಹಾಗೂ ಟ್ರೇಲರನ್ನು ಸದ್ಯದಲ್ಲೇ ಬಿಡುಗಡೆ ಮಾಡುತ್ತೇವೆ ಎಂದು ತಿಳಿಸಿದರು. ಚಿತ್ರದ ನಾಯಕಿ ಶ್ರೀಜಿತ, ಹಾಡುಗಳ ಕುರಿತಂತೆ ಸಂಗೀತ ನಿರ್ದೇಶಕ ವಿವೇಕ್ ಚಕ್ರವರ್ತಿ ಮಾಹಿತಿ ನೀಡಿದರು. ನಿರ್ಮಾಪಕರ ತಾಯಿ ಪ್ರಮೀಳಾ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಿನಿಪದಬಂಧ–485



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________



ವಿಜೇತರು: ನಿಶ್ಮಿತಾ ಬಿ. ಎಂಐಜಿ-477, ಶಾರದಾದೇವಿನಗರ, ರಾಮಕೃಷ್ಣನಗರ, ಮೈಸೂರು-570022

ಎಡದಿಂದ ಬಲಕ್ಕೆ

1. ಟೈಗರ್ ಪ್ರಭಾಕರ್ ಅಭಿನಯದಲ್ಲಿ ಬಲದ ತಪ್ಪು ಒಪ್ಪುಗಳ ವಿಮರ್ಶೆ!	5
5. ಬುಗು ಬುಗು ಸುತ್ತುವ ಗರ ಗರ ತಿರುಗುವ "ದರ್ಶನ್"	5
6. ಅಂಬರೀಷ್–ಪ್ರಭಾಕರ್ ಬಾರಿಸಿದ ಯುದ್ಧ ನಗಾರಿ	4
9.ಡಾ. ರಾಜ್ ಕುಮಾರ್–ಗಾಯತ್ರಿ ಅಭಿನಯದ ಚಿತ್ರ	5
11. ನವರಸ ನಾಯಕ ಜಗ್ಗೇಶ್ "ವಾಚಾಳಿ"	5
13.ಹಣದ ಮೋಹ ಅಧಿಕಾರದ ದಾಹ ತುಂಬಿರುವ ಚಿತ್ರ	4
16. ಪೂಜಾಗಾಂಧಿ ಸುರಿಸಿದ ವರ್ಷಧಾರೆ!	5
17._ _ _ _ _ ಅನುರಾಗ	5

ಮೇಲಿನಿಂದ ಕೆಳಕ್ಕೆ

1.ಭಾಸ್ಕರ್ ನಿರ್ದೇಶನದಲ್ಲಿ ಶಶಿಕುಮಾರ್ ಎಲ್ಲವನ್ನು ತಿಳಿದವನು	8
2.ಒಂದು ಗುಂಪು ಬಿಟ್ಟು ಮತ್ತೊಂದು ಗುಂಪು ಸೇರೋದು	4
3. ವಿಷ್ಣುವಿನ ಅವತಾರಗಳಲ್ಲಿ ನಾಲ್ಕನೇಯದು	4
4. ಬೆಳ್ಳಿನಾಗ ಚಿತ್ರದ ನಾಯಕಿ	3
5. ಚೆಲುವೆಗೆ ಹೀಗೊಂದು ಪದ	3
7. ರೆಬೆಲ್ ಸ್ಟಾರ್ ಅಂಬರೀಷ್ ಗೆಲುವಿನ ಹಮ್ಮೀರ	8
8. ಗೀತೆಯ ಹಿಂದಿನ ನೀರವತೆ	2
10. ಶಂಕರ್‌ನಾಗ್ ಅಭಿನಯದ ಸಸ್ಪೆನ್ಸ್ ಚಿತ್ರ	2
12. ಅನಂತ್‌ನಾಗ್–ಚರಣ್ ರಾಜ್ ನಡುವಿನ ಯುದ್ಧ ಇಲ್ಲಿ ತಲೆಕೆಳಗು	4
13. ಹೊಗಳಿಕೆಯ ಕೈಸದ್ದು	3
14. ವಿಷ್ಣುವಿನ ಹೆಸರು ಚಂದ	4
15. ಮಾಲಾಶ್ರೀಯ ಇದೊಂದು ಅವತಾರ	3



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 484ರ ಉತ್ತರ

ನ	ಳಿ	ನಿ			ರಾ	ಯ	ರ	ಮ	ಗ	
ವ			ಕ		ಧಾ				ಣೇ	
ಕೋ	ಲಾ	ಹ	ಲ		ಸ	ತ್ಯ	ಸಂ	ದೇ	ಶ	
ಟಿ			ರ		ಚ್ಛಿಂ			ಮಾ		ಮಿ
ನಾ		ನ	ವ	ರಂ	ಗ್	ಟಾ	ಕೀ	ಸ್		ನು
ರಾ	ಜ				ರ				ಹಂ	ಗು
ಯ		ಶಿ	ವ	ರಾ	ಮ	ಕಾ	ರಂ	ತ		ತಾ
ಣ		ಣ್ಣ			ಣ		ಗಾ			ರೆ
	ಸು	ವ	ರ್ಣ	ಭೂ	ಮಿ		ಯ	ಮ	ಲೋ	ಕ
	ರ				ಸ್ಸಿಂ		ಣ			ಲ್ಲ
	ಅ	ನಂ	ತ್	ನಾ	ಗ್			ಹ	ಸೀ	ನಾ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಪ್ರಿಯಾಂಕ ಉಪೇಂದ್ರರಿಂದ 'ಶೀಲ' ಟ್ರೈಲರ್ ಬಿಡುಗಡೆ

ನಟಿ ರಾಗಿಣಿ ದ್ವಿವೇದಿ ನಾಯಕಿಯಾಗಿ ನಟಿಸಿರುವ, ಮಹಿಳಾ ಪ್ರಧಾನ ಕಥೆ ಒಳಗೊಂಡಿರುವ "ಶೀಲ" ಚಿತ್ರವು ಕನ್ನಡ ಹಾಗೂ ಮಲೆಯಾಳಂ ಸೇರಿ 2 ಭಾಷೆಗಳಲ್ಲಿ ನಿರ್ಮಾಣವಾಗಿದೆ. ಇತ್ತೀಚೆಗೆ ಈ ಚಿತ್ರದ ಟ್ರೈಲರನ್ನು ನಟಿ ಪ್ರಿಯಾಂಕಾ ಉಪೇಂದ್ರ ಬಿಡುಗಡೆಗೊಳಿಸಿದರು. ನಂತರ ಮಾತನಾಡಿದ ಅವರು, ಈ ಚಿತ್ರದ ಕಥೆ ನಮ್ಮ ಮಹಿಳೆಯರಿಗೆ ಸ್ಫೂರ್ತಿದಾಯಕವಾಗಿದೆ. ರಾಗಿಣಿ ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ. ಹೆಣ್ಣು ಮಕ್ಕಳು ಸಮಾಜದಲ್ಲಿ ಧೈರ್ಯವಾಗಿ ನಡೆದುಕೊಂಡರೆ ಎಂಥ ಸಂದರ್ಭವನ್ನಾದರೂ ಎದುರಿಸಬಹುದು ಎಂಬುದನ್ನು ಚಿತ್ರವಲ್ಲಿ ಪರಿಣಾಮಕಾರಿಯಾಗಿ ತೋರಿಸಿದ್ದಾರೆ ಎಂದು ಹೇಳಿದರು. "ಶೀಲ" ಮಹಿಳಾ ಪ್ರಧಾನ ಚಿತ್ರವಾಗಿದ್ದು, ಪ್ರಸ್ತುತ ಸಮಾಜದಲ್ಲಿ ನಮ್ಮ ಹೆಣ್ಣುಮಕ್ಕಳು ದಿನನಿತ್ಯ ಎದುರಿಸುತ್ತಿರುವ ಹಲವು ಸಮಸ್ಯೆಗಳ ಸುತ್ತ ಈ ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ಆ. 4ರಂದು "ಶೀಲ" ಚಿತ್ರವು ಕರ್ನಾಟಕದಾದ್ಯಂತ 100ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಎಲ್ಲ ಹೆಣ್ಣುಮಕ್ಕಳು ಈ ಚಿತ್ರವನ್ನು ನೋಡಿ ಸಮಸ್ಯೆ ಬಂದಾಗ ಹೇಗೆ ಫೇಸ್ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು. ಈ ಚಿತ್ರವನ್ನು ಮಲಯಾಳಂ ನಿರ್ಮಾಪಕ ಡಿ.ಎಂ. ಪಿಳ್ಳೈ ಅವರು ನಿರ್ಮಾಣ ಮಾಡಿದ್ದಾರೆ. ಅವರು ಚಿತ್ರದ ಕುರಿತಂತೆ ಮಾತನಾಡಿ ನಮ್ಮ ಕೆಲಸ ಮಾಡಿದ್ದೇವೆ. ಇನ್ನು ಪ್ರೇಕ್ಷಕರ ಸರದಿ, ಒಳ್ಳೇ ಮೆಸೇಜ್ ಇರೋ ಚಿತ್ರ ನಿರ್ಮಿಸಿದ್ದೇವೆ.

ದೇವನೂರು ಗ್ರಾಪಂನಲ್ಲಿ ಬಿಜೆಪಿ ಅಧಿಕಾರಕ್ಕೆ



ನಂಜನಗೂಡು, ಆ.3– ತಾಲೂಕಿನ ದೇವನೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಜಿ.ಮಂಜು, ಉಪಾಧ್ಯಕ್ಷರಾಗಿ ಶಶಿಕಲಾ ನಾಗೇಂದ್ರ ಆಯ್ಕೆಯಾಗುವ ಮೂಲಕ ಬಿಜೆಪಿ ಪಕ್ಷ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ.

19 ಸದಸ್ಯರ ಬಲವನ್ನು ಹೊಂದಿರುವ ದೇವನೂರು ಗ್ರಾಮ ಪಂಚಾಯಿತಿಯಲ್ಲಿ ಗುರುವಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಯಿತು. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾತಿ ನಿಗದಿಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಜಿ.ಮಂಜು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ರೇಖಾ, ನಾಮಪತ್ರ ಸಲ್ಲಿಸಿದ್ದರು. ಜಿ ಮಂಜು 15 ಮತಗಳನ್ನು ಪಡೆದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ರೇಖಾ ನಾಲ್ಕು ಮತಗಳನ್ನು ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಶಶಿಕಲಾ ನಾಗೇಂದ್ರ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಪಾರ್ವತಮ್ಮ ನಾಮಪತ್ರ ಸಲ್ಲಿಸಿದ್ದರು. ಎನ್.ಶಶಿಕಲಾ ನಾಗೇಂದ್ರ 13 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೆ, ಪಾರ್ವತಮ್ಮ ಸೋಲು ಅನುಭವಿಸಿದರು. ಚುನಾವಣಾ ಅಧಿಕಾರಿಯಾಗಿ ಸಿಡಿಪಿಒ ಮಂಜುಳಾ ಕಾರ್ಯನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ತಾಪಂ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಎಂ.ಮಹದೇವಯ್ಯ ಮಾತನಾಡಿ, ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಮುಖ್ಯವಾಗಿ ಸ್ವಚ್ಛತೆಗೆ ಆದ್ಯತೆ ನೀಡಿ, ಚರಂಡಿ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಕುಡಿಯುವ ನೀರು, ಬೀದಿದೀಪ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಲು ಮುಂದಾಗಬೇಕು ಹಾಗೂ ಜನಸಾಮಾನ್ಯರನ್ನು ಕಚೇರಿಗಳಿಗೆ ಅಲೆಸದೆ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಮುಂದಾಗುವಂತೆ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಅವಿನಾಶ್, ರವಿ, ಪದ್ಮಮ್ಮ, ಭಾಗ್ಯಮ್ಮ, ಮಂಜುಳಾ, ಮಲ್ಲೇಶ್, ಸೌಮ್ಯ, ನಾಗೇಂದ್ರ, ಮುಖಂಡರಾದ ಸಿಎಂ ಮಹದೇವಯ್ಯ, ರಂಗನಾಥ್, ರಾಜಪ್ಪ, ಶಾಂತಪ್ಪ, ಪರಶಿವಪ್ಪ, ಗಣೇಶ್, ಶಿವಮಾದಪ್ಪ, ರತ್ನಬಸವ ಶೆಟ್ಟಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ನೇರಳಕುಪ್ಪೆ ಗ್ರಾಪಂ ಅಧ್ಯಕ್ಷರಾಗಿ ಗೀತಾ, ಉಪಾಧ್ಯಕ್ಷರಾಗಿ ರುಕ್ಮಿಣಿ ಅವಿರೋಧ ಆಯ್ಕೆ



ಹುಣಸೂರು, ಆ.3– ತಾಲೂಕಿನ ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಮ ಪಂಚಾಯಿತಿಯ ನೂತನ ಪರಿಷ್ಕೃತ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ನೇರಳಕುಪ್ಪೆಯ ಗೀತಾ ಸುರೇಶ್, ಉಪಾಧ್ಯಕ್ಷರಾಗಿ ಕಚುವಿನಹಳ್ಳಿಯ ರುಕ್ಮಿಣಿ ಸುರೇಶ್ ಅವರು ಅವಿರೋಧವಾಗಿ ಆಯ್ಕೆಯಾದರು.

ಗುರುವಾರ ಗ್ರಾ.ಪಂ ಕಚೇರಿಯಲ್ಲಿ ನಡೆದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆ ಪ್ರಕ್ರಿಯೆಯಲ್ಲಿ 15 ಸದಸ್ಯರ ಪೈಕಿ 12 ಮಂದಿ ಸದಸ್ಯರು ಪಾಲ್ಗೊಂಡಿದ್ದು, ಮೂವರು ಸದಸ್ಯರು ಗೈರು ಹಾಜರಾಗಿದ್ದರು. ಚುನಾವಣಾಧಿಕಾರಿಯಾಗಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲೇಶ್ ಕಾರ್ಯನಿರ್ವಹಿಸಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಡಿ. ಕೆ. ಕುನ್ನೆಗೌಡ ನೂತನ ಅಧ್ಯಕ್ಷ – ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಪಕ್ಷಭೇದ ಮರೆತು ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿರುವ ಕುಡಿಯುವ ನೀರಿನ ಸಮಸ್ಯೆ, ಸ್ವಚ್ಛತೆಗೆ ಆದ್ಯತೆ ನೀಡಿ, ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡುವುದರೊಂದಿಗೆ ಎಲ್ಲಾ ಸದಸ್ಯರನ್ನು ಒಗ್ಗೂಡಿಸಿಕೊಂಡು ಉತ್ತಮ ಕೆಲಸ ಮಾಡಿ ಎಂದು ಸಲಹೆ ನೀಡಿದರು

ಈ ವೇಳೆ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಂಡ್ಯ ಮಹೇಶ್ ಹನಗೋಡು ಸಹಕಾರ ಬ್ಯಾಂಕ್ ನಿರ್ದೇಶಕ ಕಚುವಿನಹಳ್ಳಿ ಲೋಕೇಶ್, ಕಾಂಗ್ರೆಸ್ ಮುಖಂಡರಾದ. ನೇಗತ್ತೂರು ಪ್ರವೀಣ್, ಕೆ ಬಿ.ಉಜ್ಜನಿಗೌಡ, ಕೆಎಸ್ ಆನಂದ್, ಸೋಮಶೇಖರ್, ಸಣ್ಣತಮ್ಮೇಗೌಡ, ಕೆ.ಎನ್. ಶೇಖರ್, ಕೆ ಟಿ.ಯಲ್ಲಪ್ಪ ಜೆ.ಟಿ ರಾಜಪ್ಪ, ಮಧುರ, ರಮೇಶ್ ಜೆಡಿಎಸ್‌ನ ಯುವ ಮುಖಂಡರಾದ ಅಂಜನ್ ಸೇರಿದಂತೆ ಅನೇಕ ಮುಖಂಡರುಗಳು ಅಭಿನಂದಿಸಿದ್ದಾರೆ.

ಕಂಚಮಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹಂಪಾಪುರ, ಆ.3– ಹೆಚ್.ಡಿ.ಕೋಟೆ ತಾಲೂಕು ಕಂಚಮಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಕಾರೇಹುಂಡಿ ಕುಮಾರ್, ಉಪಾಧ್ಯಕ್ಷರಾಗಿ ಶ್ರೀಮತಿ ಮಹದೇವಮ್ಮ ಹತ್ವಾಳ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾದ ಬೋರಯ್ಯ ಬಿ.ಕೆ ಅವರು ಇವರಿಬ್ಬರ ಆಯ್ಕೆಯನ್ನು ಘೋಷಿಸಿದರು.

ಸದಸ್ಯರುಗಳಾದ ರಮ್ಯ, ರಂಗಸ್ವಾಮಿ, ನಂಜುಂಡಸ್ವಾಮಿ, ನಂಜುಂಡಸ್ವಾಮಿ ಹತ್ವಾಳ್, ಪ್ರೇಮ, ನಾಗಮ್ಮ, ರಾಮಾಚಾರಿ, ಭಾಗ್ಯಮ್ಮ, ಲಕ್ಷ್ಮಿ, ಮಲ್ಲೀಗಮ್ಮ, ಕಾಂಗ್ರೆಸ್ ರಾಜೀವ್ ಗಾಂಧಿ ಪಂಚಾಯತ್ ತಾಲೂಕು ಅಧ್ಯಕ್ಷ ಶ್ರೀನಿವಾಸ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ನಿವೇದಿತಾ ಡಿ.ಎಂ, ಬಿಲ್ ಕಲೆಕ್ಟರ್ ಅನಿಲ್ ಮತ್ತು ಗ್ರಾಪಂ ವ್ಯಾಪ್ತಿಯ ಏಳು ಗ್ರಾಮದ ಮುಖಂಡರುಗಳು, ಯಜಮಾನರುಗಳು ಹಾಗೂ ಗ್ರಾಪಂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಕಲ್ಲಂಬಾಳು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸರಗೂರು, ಆ.3– ತಾಲೂಕಿನ ಕಲ್ಲಂಬಾಳು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಎಸ್.ಎಸ್.ಭಾಗ್ಯ, ಉಪಾಧ್ಯಕ್ಷರಾಗಿ ಇಂದ್ರಾಣಿ ಆಯ್ಕೆಯಾದರು.

ಗುರುವಾರ ಪಂಚಾಯಿತಿ ಕಚೇರಿಯಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಎಸ್.ಎಸ್.ಭಾಗ್ಯ, ಮಹೇಶ್, ನಾಮಪತ್ರ ಸಲ್ಲಿಸಿದ್ದರು. ಭಾಗ್ಯ 7 ಮತ ಪಡೆದು ವಿಜಯಿಯಾದರೆ ಮಹೇಶ್ 6 ಮತ ಪಡೆದು ಸೋಲುಂಡರು. ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಇಂದ್ರಾಣಿ, ಭಾಗ್ಯಮ್ಮ ಅವರು ನಾಮಪತ್ರ ಸಲ್ಲಿಸಿದ್ದು, ಇಂದ್ರಾಣಿ 7 ಮತ ಪಡೆದು ಗೆಲುವು ಸಾಧಿಸಿದರೆ ಭಾಗ್ಯಮ್ಮ 6 ಮತ ಪಡೆದು ಪರಾಭವಗೊಂಡರು. ಸದಸ್ಯರಾದ ಕೆ.ಎಂ.ರೇಖಾ ನೀಲಕಂಠ, ಮಂಜುಳ ಶಿವಮೂರ್ತಿ, ಲಕ್ಷ್ಮಿ ನಂಜಪ್ಪ ಹುಣಸೂರು ಮಹೇಶ, ಶಿವಕುಮಾರ್, ಮಲ್ಲಿಕಾರ್ಜುನಾರಾಧ್ಯ, ಕೆ.ಎನ್.ನಾಗಣ್ಣ, ಚಿನ್ನಸ್ವಾಮಿ, ರತ್ನಮ್ಮ, ಬಸವರಾಜು, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಸಿ.ಕೆ. ಗಿರೀಶ್, ಕಾಂಗ್ರೆಸ್ ಮುಖಂಡರಾದ, ಕೆ.ಬಿ.ನೀಲಕಂಠ, ದಡದಹಳ್ಳಿ ಶಿವರಾಜು, ಶಂಭುಲಿಂಗನಾಯಕ, ಪಿ.ನಂಜುಂಡಸ್ವಾಮಿ ಇನ್ನಿತರರು ಹಾಜರಿದ್ದರು.

ಹಗಿನವಾಳು ಗ್ರಾಪಂನಲ್ಲಿ ಬಿಜೆಪಿ ಅಧಿಕಾರಕ್ಕೆ

ಅಧ್ಯಕ್ಷರಾಗಿ ಜಯಮ್ಮ, ಉಪಾಧ್ಯಕ್ಷರಾಗಿ ಮದನ್ ಕುಮಾರ್ ಆಯ್ಕೆ



ಮಲ್ಕುಂಡಿ, ಆ.3– ಸಮೀಪದ ಹಗಿನವಾಳು ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಜಯಮ್ಮ ಮಹದೇವಸ್ವಾಮಿ, ಉಪಾಧ್ಯಕ್ಷರಾಗಿ ಮದನ್ ಕುಮಾರ್ ಆಯ್ಕೆಯಾಗಿದ್ದಾರೆ.

20 ಸದಸ್ಯ ಬಲದ ಹಗಿನವಾಳು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಜಯಮ್ಮ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸಾಕಮ್ಮ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ವಳಗೆರೆ ಗ್ರಾಮದ ಮದನ್ ಕುಮಾರ್ ಹಾಗೂ ಚನ್ನಬಸಪ್ಪ ನಾಮಪತ್ರ ಸಲ್ಲಿಸಿದ್ದರು. ಜಯಮ್ಮ 11 ಮತ ಪಡೆದು ಅಧ್ಯಕ್ಷರಾಗಿ ಜಯಶೀಲರಾದರೆ, ಪ್ರತಿಸ್ಪರ್ಧಿ ಸಾಕಮ್ಮ 9 ಮತ ಪಡೆದು ಪರಾಭವಗೊಂಡರು. ಮದನ್ ಕುಮಾರ್ 11 ಮತ ಪಡೆದು ಉಪಾಧ್ಯಕ್ಷರಾಗಿ ಚುನಾಯಿತರಾದರೆ ಪ್ರತಿಸ್ಪರ್ಧಿ ಚನ್ನಬಸಪ್ಪ 9 ಮತ ಪಡೆದು ಪರಾಭವಗೊಂಡರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಕೃಷ್ಣ ಘೋಷಣೆ ಮಾಡಿದರು. ತಾಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಮುಖಂಡರುಗಳಾದ ಮಹೇಶ್ ಬಾಬು, ಶ್ಯಾಮ್ ಪಟೇಲ್, ನಂದೀಶ್, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ರಂಗರಾಮು, ಸದಸ್ಯರುಗಳಾದ ರವಿ, ಮಂಜುಳ, ಸರೋಜಮ್ಮ, ಮಹದೇವಮ್ಮ, ಶಶಿಕಲಾ, ಸಣ್ಣಮ್ಮ, ಪಿಡಿಓ ರಾಘವೇಂದ್ರ ಅವರುಗಳು ಭಾಗವಹಿಸಿದ್ದರು.

ಎಲ್ಲಾ ಜಿಲ್ಲೆಗಳಲ್ಲೂ ಮಕ್ಕಳಿಗೆ ಸಂಗೀತ ತರಬೇತಿ

ಸಂಗೀತ ಕಲಿತ ಆದಿವಾಸಿ ಮಕ್ಕಳಿಗೆ ಪದವಿ ಪ್ರದಾನ ಮಾಡಿದ ಹಂಸಲೇಖ



ಹೆಚ್.ಡಿ.ಕೋಟೆ, ಆ.3– ಸಂಗೀತ ಕಲಿತ ವ್ಯಕ್ತಿಯನ್ನು ಸಮಾಜ ಗುರುತಿಸುವ ಜೊತೆಗೆ ಗೌರವವನ್ನು ತಂದು ಕೊಡುತ್ತದೆ ಎಂದು ತಿಳಿಸಿದ ಸಂಗೀತ ನಿರ್ದೇಶಕ ಹಂಸಲೇಖ, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಗೀತ ಆಸಕ್ತಿ ಹೊಂದಿರುವ ಮಕ್ಕಳಿಗೆ ಸಂಗೀತ ಕಲಿಸಿಕೊಡಲಾಗುವುದು ಎಂದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಂಸಲೇಖ ಮ್ಯೂಸಿಕ್ ಫೌಂಡೇಶನ್ ಮತ್ತು ಬಿರ್ಸಾಮುಂಡ ಆದಿವಾಸಿಗಳ ಬುಡಕಟ್ಟು ಒಕ್ಕೂಟದಿಂದ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಸಕ್ತರಿಗೆ ಬೆನ್ನು ತಟ್ಟಿ ಪ್ರೋತ್ಸಾಹ ನೀಡುವ ಕೆಲಸ ಮಾಡಿದರೆ ಮುಂದೆ ಅವರು ದೊಡ್ಡ ಕಲಾವಿದರಾಗಿ ಬೆಳೆಯುತ್ತಾರೆ. ಅಂತಹ ಸದುದ್ದೇಶದಿಂದ ಕಾಡಿನ ಆದಿವಾಸಿ ಮಕ್ಕಳಿಗೆ ಸಂಗೀತದ ಶಾಸ್ತ್ರವನ್ನು ಹೇಳಿಕೊಡಲು ಪ್ರಾರಂಭಿಸಲಾಯಿತು. ಇಲ್ಲಿನ ಮಕ್ಕಳು ಸಂಗೀತ ಶಿಕ್ಷಕರ ಸಹಾಯದೊಂದಿಗೆ ಸಂಗೀತದ ಪ್ರಥಮ ತರಗತಿಯನ್ನು ಕಲಿಸಲಾಗಿದ್ದು ಅವರಿಗೆ ಪದವಿ ಪ್ರದಾನ ಮಾಡಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯು ಸಂಗೀತದಲ್ಲಿ ಆಸಕ್ತಿ ಹೊಂದಿರುವ ಮಕ್ಕಳನ್ನು ಆಯ್ಕೆಮಾಡಿಕೊಂಡು ಕಲಿಸಲಾಗುತ್ತದೆ ಎಂದರು.

ಸಮಾಜ ಸೇವಕ ದೇವದತ್ತ ಮಾತನಾಡಿ, ಆದಿವಾಸಿ ಮಕ್ಕಳನ್ನು ಸಂಗೀತ ಕ್ಷೇತ್ರದಲ್ಲಿ ಮುನ್ನೆಲೆಗೆ ತರುವ ಹಂಸಲೇಖರ ಉದ್ದೇಶ ಶ್ಲಾಘನೀಯವಾದದು. ಹಾಗಾಗಿ ಆದಿವಾಸಿಗಳ 10 ಮಕ್ಕಳ ಮೊದಲ ತರಗತಿ ಪೂರ್ಣಗೊಂಡಿದ್ದು ಇವರ ಮುಂದಿನ ಕಲಿಕೆಯ ಜೊತೆಗೆ ಹಂಸಲೇಖ ಅವರು ಕೈಗೊಳ್ಳುವ ಎಲ್ಲಾ ಕೆಲಸಗಳಿಗೂ ಸಹಕಾರ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮಕ್ಕೂ ಮೊದಲು ಸರಿಗಮಪ ಖ್ಯಾತಿಯ ಗಾಯಕರಾದ ಪೃಥ್ವಿ, ಜ್ಞಾನ, ಕುಶಾಲ್ ಜನಪ್ರಿಯ ಚಿತ್ರಗೀತೆ ಮತ್ತು ಭಾವಗೀತೆಗಳನ್ನು ಹಾಡಿ ರಂಜಿಸಿದರು.

ಕಾರ್ಯಕ್ರಮದಲ್ಲಿ ಬಿರ್ಸಾಮುಂಡ ಆದಿವಾಸಿಗಳ ಒಕ್ಕೂಟದ ಅಧ್ಯಕ್ಷ ಶೇಖರ್, ಸಹನಟ ನಾನಾ ಬಚ್ಚನ್, ಶಿಕ್ಷಕ ಮೋಹನ್, ಲಾವಣ್ಯ, ಬೂದನೂರು ವೆಂಕಟೇಶ್, ಮೀನರಾಜು ಇದ್ದರು.

ಹೆಬ್ಬಾಳು ಗ್ರಾಪಂಗೆ ಜೆಡಿಎಸ್ ಅಧ್ಯಕ್ಷ, ಕಾಂಗ್ರೆಸ್ ಉಪಾಧ್ಯಕ್ಷ



ಆಶಾ ರಮೇಶ್



ನಾಗೇಶ್

ಚುಂಚನಕಟ್ಟೆ ಆ.3– ತಾಲೂಕಿನ ಹೆಬ್ಬಾಳು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಆಶಾ ರಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಾಗೇಶ್ ಚುನಾಯಿತರಾದರು.

15 ಮಂದಿ ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯಿತಿಯಲ್ಲಿ ಬುಧವಾರ ಆಡಳಿತ ಕಚೇರಿಯಲ್ಲಿ ನಡೆದ ಅಧ್ಯಕ್ಷ ಸ್ಥಾನಕ್ಕೆ ಆಶಾ ರಮೇಶ್ ಅವರನ್ನು ಹೊರತು ಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ಇವರು ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ನಾಗೇಶ್ ಮತ್ತು ಪುಷ್ಪಲತಾ ನಾಮಪತ್ರ ಸಲ್ಲಿಸಿದ್ದರು. ನಾಗೇಶ್ 8 ಮತಗಳನ್ನು ಪಡೆದು ಚುನಾಯಿತರಾದರೆ, ಪುಷ್ಪಲತಾ 7 ಮತಗಳನ್ನು ಪಡೆದು ಪರಾಭವಗೊಂಡರು.

ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ, ಉಪಾಧ್ಯಕ್ಷ ಸ್ಥಾನ ಹಿಂದುಳಿದ ವರ್ಗ ಎ ಗೆ ಮೀಸಲಾಗಿತ್ತು ಚುನಾವಣಾಧಿಕಾರಿಯಾಗಿ ಲೋಕೋಪಯೋಗಿ ಇಲಾಖೆಯ ಎಇಇ ಸುಮಿತ ಕರ್ತವ್ಯ ನಿರ್ವಹಿಸಿದರು. ಚುನಾವಣಾ ಸಭೆಯಲ್ಲಿ ಸದಸ್ಯರಾದ ಹೆಚ್. ಎಸ್.ವೆಂಕಟರಾಮು, ಹೆಚ್.ಎಸ್.ಜಲೇಂದ್ರ ಹೆಚ್.ಡಿ.ಮನುಗೌಡ ಬಿ.ಆರ್.ನವೀನ್‌ಕುಮಾರ್, ಹೆಚ್.ಎಲ್.ಕಾಂತರಾಜು, ಹೆಚ್.ಎಸ್.ರವಿ, ಭವ್ಯ, ಹೆಚ್.ಟಿ.ಯೋಗೇಶ್ವರಿ, ಪಾರ್ವತಿ, ಭಾಗ್ಯ, ಮಂಜುಳ, ಶೈಲಜಾ, ಪಂಚಾಯಿತಿ ಕಾರ್ಯದರ್ಶಿ ವೆಂಕಟೇಶ್, ಬಿಲ್‌ಕಲೆಕ್ಟರ್ ವಿಕಾಶ್ ಇದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಹೆಬ್ಬಾಳು ಸ್ವಾಮೀಗೌಡ, ವಿಎಸ್‌ಎಸ್‌ಎನ್ ನಿರ್ದೇಶಕ ಪ್ರಸನ್ನ, ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ರಾಘವೇಂದ್ರ ಎಸ್‌ಡಿಎಂಸಿ ಅಧ್ಯಕ್ಷ ಶಿವರಾಜು, ನರಸಿಂಹ, ಗುರುರಾಜು, ಗ್ರಾಪಂ ಮಾಜಿ ಅಧ್ಯಕ್ಷ ಅಶೋಕ್, ಜೆಡಿಎಸ್ ಮುಖಂಡರಾದ ಹೆಬ್ಬಾಳು ಸುಜಯ್, ರಮೇಶ್, ಸೋಮಣ್ಣ ಚೇತನ್‌ಕುಮಾರ್ ಇನ್ನಿತರರಿದ್ದರು.

ವಿದ್ಯಾರ್ಥಿಗಳ ಒಗ್ಗಟ್ಟಿಗೆ ಕ್ರೀಡೆ ಸಹಕಾರಿ



ಕಂಪಲಾಪುರ, ಆ.3– ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳು ಒಗ್ಗಟ್ಟಿನಿಂದ ಪರಸ್ಪರ ಸಾಮರಸ್ಯದಿಂದ ಸಮ್ಮಿಲನವಾಗಲು ಸಾಧ್ಯ ಎಂದು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಘುಪತಿ ತಿಳಿಸಿದರು.

ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಎರಡು ದಿನಗಳ ಕಾಲ ನಡೆದ ವಲಯ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಯಾವುದೇ ಸ್ಪರ್ಧೆಯಲ್ಲಿ ಸೋಲು ಗೆಲುವು ಸಹಜ, ಅದನ್ನು ಸಮನಾಗಿ ಸ್ವೀಕರಿಸಿ ಆತ್ಮಸ್ಥೈರ್ಯದಿಂದ ಎದುರಿಸಬೇಕು ಎಂದರು.

ದೊಡ್ಡಬೇಲಾಳು ಶಾಲೆ ಮುಖ್ಯ ಶಿಕ್ಷಕ ರಾಜಯ್ಯ ಮಾತನಾಡಿ, ಕ್ರೀಡೆಯಲ್ಲಿ ಆಸಕ್ತಿಯಿಂದ ನಿಮ್ಮನ್ನ ತೊಡಗಿಸಿಕೊಂಡಾಗ ಅದು ನಿಮ್ಮನ್ನು ಬೆನ್ನು ತಟ್ಟುತ್ತದೆ. ಛಲ ಇದ್ದಾಗ ಬಲ ತಾನೇ ತಾನಾಗಿ ಬರುತ್ತದೆ. ಸ್ಪರ್ಧಾ ಮನೋಭಾವ ಮುಖ್ಯ ಎಂದರು.

ಮುಖ್ಯ ಶಿಕ್ಷಕ ಮಹದೇವಯ್ಯ ಅಧ್ಯಕ್ಷತೆ ವಹಿಸಿದ್ದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸದಾಶಿವ, ಶಹಜಾನ್, ರಾಣಿ, ಶಿಕ್ಷಕರಾದ ಜಗದೀಶ್, ಅರ್ಚನ, ಯಶ್ವಂತ್, ಶಿವರಾಜ್, ಮಹೇಶ್, ಪ್ರಸನ್ನ, ಶಾರದಮ್ಮ ಶ್ರೀ ಲಕ್ಷ್ಮಿ, ಸುಜಾತ, ಭಾಗ್ಯ, ಪೂರ್ಣಿಮಾ ಸೇರಿದಂತೆ 10 ಶಾಲೆಗಳ ಮುಖ್ಯ ಶಿಕ್ಷಕರು, ದೈಶಿಕ್ಷಣ ಶಿಕ್ಷಕ–ಶಿಕ್ಷಕಿಯರು ಹಾಜರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಾಲಕರ ವಿಭಾಗ ವೈಯಕ್ತಿಕ ಚಾಂಪಿಯನ್ ಆಗಿ ಭರತ್, ಬಾಲಕಿಯರ ವಿಭಾಗ ಪೂರ್ಣಿಮಾ, ನಿಶು ಪ್ರಶಸ್ತಿ ಪಡೆದುಕೊಂಡರು. ಬೆಟ್ಟದತುಂಗ ಶಾಲೆ ಸಮಗ್ರ ಶಾಲಾ ಪ್ರಶಸ್ತಿ ಪಡೆದುಕೊಂಡಿತು

ಸೀಗವಾಳು ಗ್ರಾಪಂ ಚುನಾವಣೆ ಮುಂದೂಡಿಕೆ

ಚುಂಚನಕಟ್ಟೆ, ಆ.3– ಸೀಗವಾಳು ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯನ್ನು ಕೋರಂ ಅಭಾವದಿಂದ ಮುಂದೂಡಲಾಗಿದೆ.

ಸಾಲಿಗ್ರಾಮ ತಾಲೂಕು ಸೀಗವಾಳು ಗ್ರಾಮ ಪಂಚಾಯತಿಯಲ್ಲಿ ಇಂದು ನಡೆಯಬೇಕಾಗಿದ್ದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯನ್ನು ಕೋರಂ ಅಭಾವದಿಂದಾಗಿ ಮುಂದೂಡಿದ್ದು ಇದೇ ತಿಂಗಳ 7 ರಂದು ನಡೆಸಲಾಗುವುದು ಎಂದು ಚುನಾವಣಾಧಿಕಾರಿ ಜಿಲ್ಲಾ ಪಂಚಾಯತಿ ಸಹಾಯಕ ಕಾರ್ಯಪಾಲಕ ಅಭಿಯಂತರ ವಿನುತ್ ಪ್ರಕಟಿಸಿದರು. ಗ್ರಾಮ ಪಂಚಾಯತಿಯಲ್ಲಿ ಒಟ್ಟು 17 ಸದಸ್ಯರಿದ್ದು, ಇವರಲ್ಲಿ 6 ಸದಸ್ಯರು ಮಾತ್ರ ಹಾಜರಿದ್ದು ಉಳಿದ 11 ಜನ ಸದಸ್ಯರು ಗೈರು ಹಾಜರಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿ ಉಪಾಧ್ಯಕ್ಷ ಸ್ಥಾನಕ್ಕೆ ಇಬ್ಬರು ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದರು ಚುನಾವಣೆ ಸಹಾಯಕರಾಗಿ ಇಂಜಿನಿಯರ್ ಸ್ವಾಮಿ ಪಿಡಿಒ ಮಂಜು ಇದ್ದಾರೆ

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಡಿಡಿ ರಿಟರ್ನ್ಸ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೇಬಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರಾಖಿ ಔರ್ ರಾಣಿ ಪ್ರೇಂ ಖಹಾನಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶೀಲಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲಾಕ್‌ಡೌನ್ (ತ)	4 ಪ್ರದರ್ಶನಗಳು
ಸಂಗಂ	
ಶೀಲಾ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಪೈ (ಕ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಕೆಂಪಯ್ಯನಹುಂಡಿ ಗ್ರಾಮ ಪಂಚಾಯಿತಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ


ತಿ.ನರಸೀಪುರ, ಆ.3– ತಾಲೂಕಿನ ಹೊಸಕೋಟೆ (ಕೆಂಪಯ್ಯನಹುಂಡಿ) ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಂದಿನಿ, ಉಪಾಧ್ಯಕ್ಷರಾಗಿ ಜಾನಕಮ್ಮ ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮ ಪಂಚಾಯತಿ ಕಚೇರಿಯಲ್ಲಿ 30 ತಿಂಗಳ ಎರಡನೇ ಅವಧಿಗೆ ಅಧ್ಯಕ್ಷ –ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಕರೆಯಲಾಗಿದ್ದ ಚುನಾವಣೆ ಸಭೆಯಲ್ಲಿ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ನಂದಿನಿ ಹಾಗೂ ಪ.ಪಂಗಡಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಸರಸ್ವತಿ ಇಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಇವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಕೃಷ್ಣ ಪ್ರಕಟಿಸಿದರು.

ಪಂಚಾಯತಿ ಒಟ್ಟು 13 ಸದಸ್ಯರ ಪೈಕಿ ನಿಕಟಪೂರ್ವ ಅಧ್ಯಕ್ಷ ಎಂ.ಆನಂದ್, ಸದಸ್ಯರಾದ ಗಂಗಾಧರ, ಕಾವ್ಯಶ್ರೀ, ಜಯಲಕ್ಷ್ಮಿ, ಎಂ.ಬಾಲಕೃಷ್ಣ, ಚೆನ್ನಮ್ಮ, ಶೋಭಾ, ನಾಗರಾಜು, ಎಂ.ಸತೀಶ, ನಾಗರಾಜು ನೀಲಮ್ಮ ಚುನಾವಣಾ ಸಭೆಗೆ ಹಾಜರಾಗಿ ಪಂಚಾಯ್ತಿ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರು. ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ ಪ್ರಕಟವಾಗುತ್ತಿದ್ದಂತೆ ಪಂಚಾಯ್ತಿ ಮುಂಭಾಗ ಜಮಾಯಿಸಿದ್ದ ನೂರಾರು ಮಂದಿ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಗ್ರಾ.ಪಂ.ಮಾಜಿ ಅಧ್ಯಕ್ಷ ಕೆಂಪಯ್ಯನಹುಂಡಿ ಅರುಣ್ ಕುಮಾರ್ ಹೊಸಕೋಟೆ ಪಂಚಾಯ್ತಿಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಯಲ್ಲಿ ಹಿಂದುಳಿದ ಉಪ್ಪಾರ ಸಮಾಜಕ್ಕೆ ಸ್ಥಾನ ದೊರಕಿಸಿಕೊಡುವ ಮೂಲಕ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಲಾಗಿದೆ. ನೂತನ ಅಧ್ಯಕ್ಷರು ಪಂಚಾಯತಿ ವ್ಯಾಪ್ತಿಗೆ ಸೇರಿದ ಗ್ರಾಮಗಳ ಮೂಲಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಿ ಪಂಚಾಯ್ತಿಯನ್ನು ಮಾದರಿ ಪಂಚಾಯ್ತಿ ಮಾಡುವತ್ತ ಚಿತ್ತಹರಿಸಬೇಕು ಎಂದರು.

ಪೀಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಪುರಸಭಾ ಸದಸ್ಯ ಬಾದಾಮಿ ಮಂಜು, ಉಪ್ಪಾರ ಮಹಾಸಭಾದ ಜಿಲ್ಲಾಧ್ಯಕ್ಷ ಯೋಗೀಶ್ ಉಪ್ಪಾರ್, ಕೆ.ಎಸ್.ಮಹೇಶ್, ಪುಟ್ಟಬುದ್ದಿ, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ರಾಜೇಂದ್ರ, ಗ್ರಾಪಂ ಮಾಜಿ ಅಧ್ಯಕ್ಷ ಆರ್.ಪಿ.ಹುಂಡಿ ನಾಗರಾಜು, ಗುತ್ತಿಗೆದಾರ ಮಾಧು, ಆಲಗೂಡು ನಾಗರಾಜು, ಲೋಕೇಶ್ ಸುರೇಶ್, ಅಂಕಶೆಟ್ಟಿ, ನಿಂಗಶೆಟ್ಟಿ, ರಮೇಶ್, ರಾಚಶೆಟ್ಟಿ, ಶಿವನಂಜಶೆಟ್ಟಿ, ರಾಮಶೆಟ್ಟಿ, ಮಹದೇವಶೆಟ್ಟಿ, ಕುಪ್ಯ ರಘು, ಮಹದೇವಶೆಟ್ಟಿ, ಬಸವರಾಜು, ನಾಗರಾಜು, ಇಂಡವಾಳು ಲೋಕೇಶ್, ಬಸವರಾಜು, ಮೈಕ್ ಮಹದೇವ, ಚಿನ್ನಸ್ವಾಮಿ, ಹೊನ್ನಯ್ಯ, ಬಸವಣ್ಣ, ತಿಮ್ಮೇಗೌಡ, ಹರೀಶ್, ಮಾದೇಶ್, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ವಿ.ಎನ್ ಪೂರ್ಣಿಮಾ, ಸಹಾಯಕ ಚುನಾವಣೆ ಅಧಿಕಾರಿ ಕೆಂಪರಾಜು ಮತ್ತಿತರರಿದ್ದರು.



ವ್ಹೀಲಿಂಗ್‌ಗೆ ಬೈಕ್ ಕದಿಯುತ್ತಿದ್ದ ಖದೀಮರ ಬಂಧನ

2.50 ಲಕ್ಷ ಮೌಲ್ಯದ ನಾಲ್ಕು ಬೈಕ್ ವಶ



ಮೈಸೂರು, ಆ.3(ಎಂಕೆ)– ವ್ಹೀಲಿಂಗ್ ಮಾಡಲು ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಖತರ್ನಾಕ್ ಆರೋಪಿಗಳನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು, ಬಂಧಿತರಿಂದ 2.50 ಲಕ್ಷ ರೂ. ಮೌಲ್ಯದ ನಾಲ್ಕು ಬೈಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರಿನ ಜ್ಯೋತಿನಗರದ 5ನೇ ಕ್ರಾಸ್‌ನ ಧನುಷ್(19), ಸುಣ್ಣದ ಕೇರಿ 8ನೇ ಕ್ರಾಸ್‌ನ ನಿತಿನ್(19) ಬಂಧಿತರು. ಮೇ.5 ರಂದು ಕುವೆಂಪು ನಗರ ಠಾಣೆ ವ್ಯಾಪ್ತಿಯ ಶ್ರೀರಾಂಪುರ ಎಸ್‌ಬಿಎಂ ಕಾಲೋನಿಯ ಮನೆಯೊಂದರ ಎದುರು ನಿಲ್ಲಿಸಿದ್ದ ಹೀರೊ ಹೊಂಡಾ ಸಿಡಿ ಡಾನ್ ಬೈಕ್ ಕಳ್ಳತನ ಮಾಡಿರುವ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ಕುವೆಂಪು ನಗರ ಪೊಲೀಸರು, ಗುರುವಾರ (ಆ.3) ಬೆಳಗ್ಗೆ 8 ಸುಮಾರಿಗೆ ರಾಮಕೃಷ್ಣನಗರದ ಹೆಚ್ ಬ್ಲಾಕ್‌ನಲ್ಲಿರುವ ಪಾರ್ಕ್ ಎದುರು ಕದ್ದ ಬೈಕ್‌ನಲ್ಲೇ ಬೇರೆ ಬೈಕ್ ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ವೇಳೆ ಬಂಧಿಸಿದ್ದಾರೆ.

ಬಂದಿತರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಕುವೆಂಪುನಗರ ಮತ್ತು ವಿದ್ಯಾರಣ್ಯಪುರಂ ಠಾಣೆಯ ವ್ಯಾಪ್ತಿ ತಲಾ ಒಂದು ಪ್ರಕರಣ ಹಾಗೂ ಆಲನಹಳ್ಳಿ ಠಾಣೆ ವ್ಯಾಪ್ತಿ ಎರಡು ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಕಳ್ಳತನ ಮಾಡಿದ ಬೈಕ್‌ಗಳನ್ನು ವ್ಹೀಲಿಂಗ್ ಮಾಡಲು ಬಳಸುತ್ತಿದ್ದರು ಎಂದು ತಿಳಿದು ಬಂದಿದೆ ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಗಂಗಾಧರಸ್ವಾಮಿ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಕುವೆಂಪುನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಎಲ್.ಅರುಣ್, ಪಿಎಸ್‌ಐಗಳಾದ ರಾಧ, ಎಸ್.ಪಿ. ಗೋಪಾಲ್, ಸಿಬಂದಿಗಳಾದ ಆನಂದ, ಮಂಜುನಾಥ್, ಪುಟ್ಟಪ್ಪ, ಹಜರತ್, ಸುರೇಶ್, ನಾಗೇಶ್, ಯೋಗೇಶ್, ಸತೀಶ್ ಭಾಗವಹಿಸಿದ್ದರು.

ಗ್ರಾಮೀಣ ಭಾಗದಿಂದ ಬಂದು ರಾಷ್ಟ್ರಮಟ್ಟದ ನಾಯಕರಾದ ಸಿದ್ದರಾಮಯ್ಯ



ಮೈಸೂರು, ಆ.3(ಸಿಎನ್)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಾಮೀಣ ಭಾಗದಿಂದ ಬಂದು, ರಾಷ್ಟ್ರಮಟ್ಟದ ನಾಯಕರಾಗಿ ಗುರುತಿಸಿಕೊಂಡು, ವಿಶ್ವವೇ ತಿರುಗಿ ನೋಡುವಂತಹ ಸ್ವಚ್ಛ, ಸುಭದ್ರ ಆಡಳಿತ ಕೊಟ್ಟ ನಾಯಕ. ಸಮೃದ್ಧ ಕರ್ನಾಟಕದ ಕನಸು ಹೊತ್ತಿದ್ದಾರೆ ಅವರ ಆಡಳಿತ ಇತಿಹಾಸವಾಗಲಿದೆ ಎಂದು ಕೃಷ್ಣರಾಜ ಕ್ಷೇತ್ರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಹಾಡಿ ಹೊಗಳಿದರು.

ಮೈಸೂರು–ಊಟಿ ರಸ್ತೆಯಲ್ಲಿರುವ 'ಶಕ್ತಿ ಧಾಮ'ದ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬ ನಿಮಿತ್ತ ಅಲ್ಲಿನ ವಿದ್ಯಾರ್ಥಿನಿಯರಿಗೆ ಪಠ್ಯಪುಸ್ತಕ ಮತ್ತು ಸಿಹಿ ವಿತರಿಸುವ ಮೂಲಕ ಆಚರಿಸಿ, ಮಾತನಾಡಿದರು.

ಕಳೆದ ಬಾರಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಶೂಭಾಗ್ಯ, ಕ್ಷೀರ ಭಾಗ್ಯ ಸೇರಿ ಅನೇಕ ಜನಪ್ರಿಯ ಭಾಗ್ಯಗಳನ್ನು ನೀಡಿ ಜನಮ್ಮನ್ನಣೆ ಗಳಿಸಿದ್ದರು. ಇದೀಗ ಅವರೇ ಸಿಎಂ ಆಗಿರುವುದರಿಂದ ರಾಜ್ಯ ಮತ್ತಷ್ಟು ಅಭಿವೃದ್ಧಿಯತ್ತ ಸಾಗಲಿದೆ. ಸಮೃದ್ಧ ಕರ್ನಾಟಕದ ಕನಸು ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ತಮ್ಮ ರಾಜಕೀಯ ಜೀವನ ದುದ್ದಕ್ಕೂ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಾ ಬಂದಿದ್ದಾರೆ ಎಂದರು.

ಪ್ರಸ್ತುತ ಮಹಿಳೆಯರಿಗೆ ಶಕ್ತಿ ಯೋಜನೆಯ ಮೂಲಕ ಉಚಿತ ಬಸ್ ಸೇವೆ ನೀಡಿದ್ದಾರೆ. ಸದಾ ಬಡವರು, ನೊಂದವರು, ಅಶಕ್ತರು, ಮಹಿಳೆಯರ ಪರ ಹಾಗೂ ಕೆಳವರ್ಗದ ಜನರ ಏಳಿಗೆಗಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದ್ದಾರೆ. ನಾಡಿನ ಸಮಗ್ರ ಅಭಿವೃದ್ಧಿಗಾಗಿ ಕಟೀಬದ್ಧರಾಗಿ ದುಡಿಯುತ್ತಿರುವ ಅವರಿಗೆ, ನಾವೆಲ್ಲರೂ ಸಹಕರಿಸುವ ಮೂಲಕ ನಾಡಿನ ಅಭಿವೃದ್ಧಿಗೆ ಬೆಂಬಲಿಸಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭ ಶಕ್ತಿಧಾಮದಲ್ಲಿನ ಪದವಿಪೂರ್ವ ಶಿಕ್ಷಣ ಪಡೆಯುತ್ತಿರುವ ವಿಜ್ಞಾನ ವಿಭಾಗ, ವಾಣಿಜ್ಯ ವಿಭಾಗ ಹಾಗೂ ಕಲಾ ವಿಭಾಗದ ವಿದ್ಯಾರ್ಥಿನಿಯರಿಗೆ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕಾಂಗ್ರೆಸ್ ಯುವ ಮುಖಂಡ ಹರೀಶ್.ಎಂ, ಮಹ್ಮದ್ ಫಾರೂಖ್, ವಿಶ್ವನಾಥ್ (ವಿಶ್ವ), ಡೈರಿ ವೆಂಕಟೇಶ್, ಯೋಗೇಶ್.ಕೆ.ವಿ, ಪ್ರಶಾವ್ ರಾವ್ (ಗಣೇಶ್), ಸುರೇಶ್, ಮಹೇಶ್, ರಾಘವೇಂದ್ರ (ಮೊಟ್ಟೆ), ಖಾನಾವಳಿ ನಾಗೇಂದ್ರ, ಗುಣಶೇಖರ್, ರಾಕೇಶ್, ಚಂದನ್, ಅರುಣ್ ಮತ್ತಿತರರಿದ್ದರು.